

ದಶಾ ಸ್ಮರಣಂ

ಸ್ವಯಂಪ್ರಕಾಶ ದಶಮಾನೋತ್ಸವ ಸಂಚಿಕೆ





DASHAA SMARANAM

10 YEAR COMMEMORATION SOUVENIR

THE GRAND SWEETS & SNACKS

H.O.:24, 2nd Main Road Gandhi Nagar Adyar, Chennai - 20

Ph:2491 5662 / 4233 7878 / 4233 7879

THE GRAND SWEETS & SNACKS

BRANCHES

T.NAGAR :
11, Sarangapani Street,
Chennai-600 017.
Ph : 2834 6494 / 2834 6484

R.A. PURAM :
No. 74, Venkatakrishna Road,
Opp. Shankara Nethralaya Hospital, Chennai - 2
Phone : 4265 3534 / 35 / 36

CHETPET : cHENNAI -33
45, Spurtank Road,
Chennai-31.
Ph : 4214 8982 / 42148983

PORUR :
No. 76, Arcot Road,
Opp. Grand Residence, Chennai - 1
Phone : 4280 4036, 4280 4038

KOYAMBEDU :
19, Jawaharlal Nehru Salai,
Chennai - 107. (Near Arihant Apartments)

WEST MAMBALAM :
35A, BRINDAVAN STREET

Phone : 6551 0790 / 6551 0791

OUR NEW BRANCH SOON AT MADIPAKKAM

ದಶಾ ಸ್ಮರಣಂ

ಸ್ವಯಂಪ್ರಕಾಶ ದಶಮಾನೋತ್ಸವ ಸಂಚಿಕೆ

DASHAA SMARANAM

10 YEAR COMMEMORATION SOUVENIR

PUBLISHER

SRI SWAYAMPRAKASHA TRUST (R)
SREEMATH, HARIHARAPURA

Dashaa Smaranama - A 10 year commemoration of Souvenir
Editor Hariharapura B. Subramanyam and
Published by **Sri P.N. Viswanatan,** on behalf of
Sri Swayamprakasha Trust (R)
Sree Math, Hariharapura

© Authors

Published by
Sri Swayamprakasha Trust (R)
Sree Math, Hariharapura
Koppa Taluk, Chickmagalore Dist.

Design & Layout
Radhakrishna K S
Mobile 98455 78992

Printed by
Adithya Printers
Printing & Publishing House
#1, Sri Ramanjaneya Road
Hanumanthanagar, Bangalore - 560 019
Tel: 080 2660 6776 / 3200 6630

SRI ADISHANKARACHARYA SHARADA LAKSHMI NARASIMHA PEETAM

SREE MATH, HARIHARAPURA - 577120

e-mail: hariharapura@gmail.com www.hariharapura.org

श्री आदिशंकराचार्य शारदा लक्ष्मीनृसिंह पीठम्, श्री मठम् – हरिहरपुरम्

SRI ADISHANKARACHARYA SHARADA LAKSHMI NARASIMHA PEETAM

ಶ್ರೀ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನೃಸಿಂಹ ಪೀಠಮ್

SREE MATH, HARIHARAPURA - 577120, CHICKMAGALUR DIST., KARNATAKA



ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾಣ ಪಾರಾವಾರ ಪಾರೀಣ ಯಮನಿಯಮಾಸನ
ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣ ಸಮಾಧ್ಯಷ್ಟಾಂಗ ಯೋಗಾನುಷ್ಠಾನನಿಷ್ಠ ತಪಶ್ಚಕ್ರವರ್ತಿ ಅನಾದ್ಯವಿಚ್ಛಿನ್ನ
ಶ್ರೀ ಶಂಕರಾಚಾರ್ಯ ಗುರುಪರಂಪರಾ ಪ್ರಾಪ್ತ ಸಕಲನಿಗಮಾಗಮಸಾರಹೃದಯ ಸಾಂಖ್ಯತ್ರಯಪ್ರತಿಪಾದಕ
ವೈದಿಕಮಾರ್ಗ ಪ್ರವರ್ತಕ ವ್ಯಾಖ್ಯಾನಗುರು ಸಿಂಹಾಸನಾರೂಢ ತುಂಗಭದ್ರಾತೀರ ದಕ್ಷಾಶ್ರಮವಾಸ
ಹರಿಹರಪುರ ವರಾಧೀಶ್ವರ ಶ್ರೀ ಆದಿಶಂಕರಾಚಾರ್ಯ ಶ್ರೀ ಶಾರದಾಲಕ್ಷ್ಮೀನೃಸಿಂಹ ಪಾದಪದ್ಮಾರಾಧಕ
ಶ್ರೀ ಸ್ವಯಂಪ್ರಕಾಶಾಭಿನವ ರಾಮಾನಂದ ಸರಸ್ವತೀ ಗುರುಕರಕಮಲ ಸಂಜಾತ
ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರಿಂದ

ನಮ್ಮ ಧರ್ಮದ ಪರಮ ಪ್ರಮಾಣಗಳಾದ ಉಪನಿಷತ್ತುಗಳು ಮಾನವ ಜೀವಿನದ ಪರಮ ಗುರಿಯನ್ನು ಚಿಂತನೆ ಮಾಡುತ್ತ, ಸಕಲ ಸಂಸಾರ ಬಂಧನಗಳಿಂದ ಮುಕ್ತನಾಗಿ ಪರಮ ಪುರುಷಾರ್ಥವಾದ ಮೋಕ್ಷವನ್ನು ಪಡೆಯುವುದು ಮಾತ್ರವೇ ಎಂದು ಸಾರಿ ಸಾರಿ ಹೇಳುತ್ತಿವೆ.

ನಮ್ಮ ಮೂಲ ಸ್ವರೂಪವಾದ ಆತ್ಮತತ್ತ್ವವನ್ನು ಅನುಭವದ ಮೂಲಕ ಅರಿತುಕೊಳ್ಳುವುದೇ ಮೋಕ್ಷವೆನಿಸುತ್ತದೆ. ಯಾರು ಒಂದು ಸಲ ಈ ಆತ್ಮ ತತ್ತ್ವವನ್ನು ಅನುಭವದ ಮೂಲಕ ಅರಿತುಕೊಳ್ಳುತ್ತಾನೋ, ಅವನು ಸಕಲ ವಿಧವಾದ ಸಂಸಾರ ಬಂಧನಗಳಿಂದ ಮುಕ್ತನಾಗಿ ಪೂರ್ಣನಾಗುತ್ತಾನೆ.

ಇಂತಹ ಪೂರ್ಣತೆಯನ್ನು ಪಡೆಯಬೇಕಾದರೆ ನಾವು ಅತ್ಯಂತ ಕಠಿಣವಾದ ಸಾಧನೆಯನ್ನು ಮಾಡಬೇಕಾಗಿರುತ್ತೆ. ಆದರೆ ಲೌಕಿಕ ಜಂಜಾಟದಲ್ಲಿ ಮುಳುಗಿ ಹೋಗಿರುವ ಸಾಮಾನ್ಯ ಜನರಿಗೆ ಕೇವಲ ಸಾಧನೆಯಲ್ಲೇ ತೊಡಗಿಸಿಕೊಂಡಿರಲು ಹೇಗೆ ಸಾಧ್ಯ ? ಎಂದರೆ...

ಶ್ರೀ ಶಂಕರ ಭಗವತ್ಪಾದಾಚಾರ್ಯರು ತಮ್ಮ ''**ಭಜಗೋವಿಂದಂ**'' ಸ್ತೋತ್ರದಲ್ಲಿ ನಮಗೆ ಅತ್ಯಂತ ಸುಲಭವಾದ ಮಾರ್ಗವನ್ನು ತೋರಿಸಿರುತ್ತಾರೆ.

ಸತ್ಸಂಗತ್ವೇ ನಿಸ್ಸಂಗತ್ವಂ
ನಿಸ್ಸಂಗತ್ವೇ ನಿರ್ಮೋಹತ್ವಂ
ನಿರ್ಮೋಹತ್ವೇ ನಿಶ್ಚಲ ತತ್ವಂ
ನಿಶ್ಚಲ ತತ್ವೇ ಜೀವನ್ಮುಕ್ತಿಃ

ನಾವು ಸತ್ಸಂಗವನ್ನು ಮಾಡುವುದಕ್ಕೆ ಶುರುಮಾಡಿದರೆ ಅದೇ ನಿಧಾನವಾಗಿ ನಮ್ಮನ್ನು ಮೋಕ್ಷದ ಸ್ಥಿತಿವರೆಗೂ ಕೊಂಡೊಯ್ಯುತ್ತದೆ. ಅಂತಹ ಸತ್ಸಂಗವನ್ನು ನಮಗೆ ದೊರಕಿಸಿ ಕೊಡುವುದರಲ್ಲಿ ಸದ್ಗ್ರಂಥ ಪಠಣ ಪ್ರಥಮ ಸ್ಥಾನದಲ್ಲಿ ನಿಲ್ಲುತ್ತದೆ.

ಅಲ್ಲದೇ ವಿಶೇಷವಾಗಿ ಭಾರತೀಯ ಸಂಸ್ಕೃತಿಯ ಜೀವನ ವಿಧಾನದಲ್ಲಿ ಬಹು ಮುಖ್ಯ ಪಾತ್ರವಹಿಸುವ ಆಚಾರ, ವಿಚಾರ, ಸಂಪ್ರದಾಯಗಳು ಕೇವಲ ನಂಬಿಕೆಗಳು ಮಾತ್ರವಲ್ಲದೇ, ಅದನ್ನು ಶ್ರದ್ಧೆಯಿಂದ ಆಚರಣೆ ಮಾಡಿದರೆ ನಾವು ಭಗವಂತನ ಅನುಗ್ರಹ ಪಡೆದು ಅತ್ಯಂತ ಕಷ್ಟಸಾಧ್ಯವಾದ ಮೋಕ್ಷವನ್ನು ಸುಲಭದಲ್ಲಿ ಗಳಿಸಬಹುದಾಗಿದೆ.

ಪ್ರಸ್ತುತ ಪಾಶ್ಚಾತ್ಯ ಅಂಧಾನುಕರಣೆಯಲ್ಲಿ ಬಿದ್ದು ನಮ್ಮ ಭಾರತೀಯ ಸಂಸ್ಕೃತಿಯ ಗರಿಮೆಯು ನಮಗೇ ಅರ್ಥವಾಗದ ಈ ಪರಿಸ್ಥಿತಿಯಲ್ಲಿ ಧರ್ಮ ಸೂಕ್ಷ್ಮಗಳನ್ನು ಸಾಮಾನ್ಯ ಜನರಿಗೂ ಅರ್ಥವಾಗುವ ರೀತಿಯಲ್ಲಿ ತಲುಪಿಸಿ, ಯಾವುದೇ ಜಾತಿ, ಮತ, ಬೇಧವಿಲ್ಲದೆ ಎಲ್ಲರನ್ನೂ ಧರ್ಮಮಾರ್ಗಾನುವಲಂಭಿಗಳನ್ನಾಗಿಸಬೇಕೆನ್ನುವ ಮಹೋದ್ದೇಶದಿಂದ ಸಾಕ್ಷಾತ್ ಜಗದ್ಗುರು ಶಂಕರರಿಂದ ಪ್ರಾರಂಭಗೊಂಡ ಪರಂಪರೆಯಿಂದ ಬಂದು, ಧರ್ಮಪ್ರಸಾರವೇ ಧ್ಯೇಯವಾಗಿರಿಸಿಕೊಂಡ ನಮ್ಮ ಪೀಠದ ವತಿಯಿಂದ ಈ ''ಸ್ವಯಂಪ್ರಕಾಶ''ವೆನ್ನುವ ಮಾಸಪತ್ರಿಕೆಯನ್ನು ಪ್ರಕಟಮಾಡುತ್ತಿರುವುದು ಲೋಕ ವಿದಿತವೇ ಆಗಿದೆ.

ಇದೀಗ ಈ ಪತ್ರಿಕೆ 10 ವರ್ಷಗಳನ್ನು ಯಶಸ್ವಿಯಾಗಿ ತುಂಬಿಕೊಂಡಿದ್ದು, ಈ ಪತ್ರಿಕೆಯು ನಡೆದು ಬಂದ ರೀತಿ ಅತ್ಯಂತ ಸುಂದರವಾಗಿದೆ. ಈ ಸಂದರ್ಭದಲ್ಲಿ ಈ ಮಾಸಪತ್ರಿಕೆಯನ್ನು ಆರಂಭದಿಂದಲೂ ಯಶಸ್ವೀ ಪಥದಲ್ಲಿ ನಡೆಸಿಕೊಂಡು ಬಂದಿರುವ ನಮ್ಮ ಆತ್ಮೀಯ ಶಿಷ್ಯರಾದ ''**ಗುರುಸೇವಾರತ್ನ**'' **95ರ ಪ್ರಾಯದ ಯುವಕ ಸುಬ್ರಹ್ಮಣ್ಯಂ**ರವರಿಗೆ ನಮ್ಮ ಪರಿಪೂರ್ಣ ಆಶೀರ್ವಾದಗಳನ್ನು ತಿಳಿಸುತ್ತಿದ್ದೇವೆ.

ಹಾಗೆಯೇ ಈ ಹತ್ತು ವರ್ಷಗಳಲ್ಲಿ ಈ ಪತ್ರಿಕೆಯ ಯಶಸ್ಸಿಗೆ ಕೈಜೋಡಿಸಿದ ಎಲ್ಲರಿಗೂ ನಮ್ಮ ಆಶೀರ್ವಾದಗಳನ್ನು ತಿಳಿಸುತ್ತಾ, ಈ ಸಂದರ್ಭದಲ್ಲಿ ಹೊರತರುತ್ತಿರುವ ''**ದಶಾ ಸ್ಮರಣಂ**'' ಸರ್ವಾಂಗ ಸುಂದರವಾಗಿ ಮೂಡಿಬಂದು ಭಕ್ತ ಜನರಿಗೆ ಸದುಪಯೋಗ ಯೋಗ್ಯವಾಗಲಿ ಎಂದು ಆಶೀರ್ವದಿಸುತ್ತಿದ್ದೇವೆ.

ಶ್ರೀಃ

॥ ಹರೇ ರಾಮ ॥

ಗೋಕರ್ಣಮಂಡಲಾಧೀಶ್ವರ

ಶ್ರೀಮಜ್ಜಗದ್ಗುರುಶಂಕರಾಚಾರ್ಯ ಶ್ರೀಮದ್ರಾಘವೇಶ್ವರಭಾರತೀ ಮಹಾಸ್ವಾಮಿಗಳು

ಶ್ರೀಸಂಸ್ಥಾನಗೋಕರ್ಣ - ಶ್ರೀರಾಮಚಂದ್ರಾಪುರಮಠ

ಆಡಳಿತ ಕಛೇರಿ ಶ್ರೀರಾಮಾಶ್ರಮ, ನಂ. 2 ಎ, [illegible] ರಸ್ತೆ, [illegible]ನಗರ, ಮೊದಲನೇ ಹಂತ, ಬೆಂಗಳೂರು - 560 085.

ಮೊಬೈ[illegible] 94[illegible] 2013[illegible] 9595204

ಈ-ಮೇಲ್ camp@hareraama.in ವೆಬ್ www.hareraama.in

ಗತ ಸಂಖ್ಯಾ - 02

ಗೆ,

ಸಂಪಾದಕರು,

'ಸ್ವಯಂಪ್ರಕಾಶ' ಮಾಸಪತ್ರಿಕೆ

ಶ್ರೀಮಠ, ಹರಿಹರಪುರ

ಆದಾಗಿ, ಶ್ರೀ ಸವಾರಿಯು ಶ್ರೀ ಖರ ನಾಮ ಸಂವತ್ಸರದ ಆಷಾಡ ಶುದ್ಧ ಪೂರ್ಣಿಮೆ (ದಿನಾಂಕ 15-07-2011) ಗುರುವಾರದಂದು ತಮ್ಮ 18ನೇ ಚಾತುರ್ಮಾಸ್ಯ ವ್ರತ ಸಂಕಲ್ಪವನ್ನು ಅಶೋಕೆಯ ವಸತಿಯಲ್ಲಿ ಕೈಗೊಂಡು ಸಮಸ್ತ ಜನತೆಯ ಯೋಗಕ್ಷೇಮಗಳನ್ನು ಸಂಪ್ರಾರ್ಥಿಸುತ್ತಾ ಸದ್ಯ ಈ ಮುಕ್ಕಾಂನಲ್ಲಿ ಕ್ಷೇಮದಿಂದ ವಸತಿ ಮಾಡಿದೆ.

ಸಾಹಿತ್ಯವೆಂದರೆ ಜೀವನಕ್ಕೆ ಚೇತನ ತರುವ ಅಮೃತವಾಗಿ ಸನಾತನ ಸಾಹಿತ್ಯ ಬರಡು ಬದುಕನ್ನು ಹಸನಾಗಿಸುತ್ತದೆ. ಅವಿಚಾರಕ್ಕೆ ಸುವಿಚಾರ ಸಿಂಚನ ಮಾಡುತ್ತದೆ. ಬುದ್ಧಿಗೆ ವಿವೇಕ ನೀಡುತ್ತದೆ. ಅಂತಹ ಸಾಹಿತ್ಯನಿಧಿಯನ್ನು ಆಧುನಿಕ ಮನಸ್ಸು - ಬುದ್ಧಿಗಳಿಗೆ ಗೃಹೀತವಾಗುವಂತೆ ನಿರೂಪಿಸಿ, ಅದನ್ನು ಅವರಿಗೆ ತಲುಪಿಸುವ ಕಾರ್ಯ ಧರ್ಮಸಂಸ್ಥೆಗಳ ಕರ್ತವ್ಯಗಳಲ್ಲೊಂದು.

ಪ್ರಕೃತ, 'ಸ್ವಯಂಪ್ರಕಾಶ' ಮಾಸಪತ್ರಿಕೆ ಆ ಕಾರ್ಯವನ್ನು ಮಾಡುತ್ತಾ ಬಂದಿದೆ. ಸಾರ್ಥಕ ದಶಕವನ್ನು ಪೂರೈಸಿದೆ. ಅದನ್ನು ದಾಖಲಿಸುವ ಸ್ಮರಣ ಸಂಚಿಕೆಯನ್ನು ಹೊರತರುತ್ತಿದೆ ಎನ್ನುವುದನ್ನು ಅರಿತು ಸಂತುಷ್ಟಾಂತರಂಗರಾಗಿದ್ದೇವೆ. ಸಂಚಿಕೆ ಸರ್ವಾಂಗ ಸುಂದರವಾಗಿ ಹೊರಬರಲಿ, ಪತ್ರಿಕೆ ನಿರಂತರ ಸತ್ಕಾರ್ಯ ನಡೆಸುತ್ತಾ ಮುನ್ನಡೆಯಲಿ. ಓದುಗರಿಗೆ ಒಳಿತಾಗಲಿ ಎಂದು ಶ್ರೀ ಮಹಾಸಂಸ್ಥಾನದವರು ಹಾರೈಸಿದ ಸಂಗ್ತಿ ಶ್ರುತ ಪಡಿಸಿದೆ.

ಶ್ರೀ ಸಂಸ್ಥಾನದ ಅಪ್ಪಣೆಯ ಮೇರೆಗೆ

ಶ್ರೀ ಸವಾರಿ ಶ್ಯಾನಭೋಗರು

ಮಿತಿ ಶ್ರೀ ಖರ ಸಂ॥ದ ಶ್ರಾವಣ ಶುಕ್ಲ ಚತುರ್ಥಿ, ಬುಧವಾರ

ವಸತಿ . ಅಶೋಕವನ, ಶ್ರೀಕ್ಷೇತ್ರ, ಗೋಕರ್ಣ

। ಶ್ರೀ ಚತುರ್ಭುಜ ಷಡ್ಭಾಧಿರಾಮೋ ವಿಜಯತೇ ।

ಯದತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠ

ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ – 571 602 ಮೈಸೂರು ಜಿಲ್ಲೆ.

☎ : 08223-262471, 264371. ಇಮೇಲ್ : ysysmath@yahoo.com

ಶಾಖಾಮಠ : ಕೋಟೆ, ಹೊಳೆನರಸೀಪುರ-573 211, ಹಾಸನ ಜಿಲ್ಲೆ, ☎ : 08175-273464

ಉಲ್ಲೇಖ ಯ. ಶ್ರೀ. ಯೋ.ಸ.ಮ./ಕೃ.ರಾ.ನ/11-25

ದಿನಾಂಕ : 12-08-2011
ಸ್ಥಳ : ಜಪದಕಟ್ಟೆ

ಗೆ,

ಗುರುಸೇವಾರತ್ನ ಶ್ರೀಯುತ ಹರಿಹರಪುರ ಬಿ.ಸುಬ್ರಹ್ಮಣ್ಯಂ

ಸಂಪಾದಕರು,

'ಸ್ವಯಂಪ್ರಕಾಶ' ಮಾಸಪತ್ರಿಕೆ

ಶ್ರೀಮಠ, ಹರಿಹರಪುರ

ಮಾನ್ಯರೇ,

ನೀವು ಪತ್ರದ ಮೂಲಕ ಅಪೇಕ್ಷಿಸಿದ ಶುಭ ಸಂದೇಶದ ವಿಚಾರವನ್ನು ಪರಮಪೂಜ್ಯ ಶ್ರೀ ಶ್ರೀಗಳವರ ಚರಣಾರವಿಂದಗಳಲ್ಲಿ ನಿವೇದಿಸಲಾಯಿತು.

"ಆಸ್ತಿಕರಿಗೆ ಅನುಕೂಲವಾಗಲೆಂದು ಹರಿಹರಪುರ ಶ್ರೀಮಠದಿಂದ ಪ್ರಕಾಶಿಸುತ್ತಿರುವ 'ಸ್ವಯಂಪ್ರಕಾಶ' ಪತ್ರಿಕೆಗೆ ಈಗ ದಶಮಾನೋತ್ಸವ ಸಂಭ್ರಮವೆಂದು ತಿಳಿದು ಅತ್ಯಂತ ಹರ್ಷವಾಗಿದೆ. ಲೋಕಕ್ಕೆ ಧಾರ್ಮಿಕ ಹಾಗೂ ಆಧ್ಯಾತ್ಮಿಕವಾದ ಜ್ಞಾನವನ್ನು ತಿಳಿಸುವಲ್ಲಿ ಯೋಗ್ಯವಾದ ಪತ್ರಿಕೆಗಳ ಅವಶ್ಯಕತೆ ಇದೆ. ಈ ಅಂಶವನ್ನು ಗಮನದಲ್ಲಿಟ್ಟು ಕಳೆದ ಹತ್ತು ವರ್ಷಗಳಿಂದ ವಿಶೇಷ ಪರಿಶ್ರಮವನ್ನು ವಹಿಸಿ ಪತ್ರಿಕೆಯನ್ನು ನಡೆಸುತ್ತಿರುವುದು ಸಂತೋಷದ ವಿಷಯವಾಗಿದೆ. ಇನ್ನು ಮುಂದೆಯೂ ಇತೋಪ್ಯತಿಶಯವಾಗಿ ಸ್ವಯಂಪ್ರಕಾಶ ಪತ್ರಿಕೆಯು ಆಸ್ತಿಕರ ವಿಷಯದಲ್ಲಿ ತನ್ನ ಸೇವೆಯನ್ನು ಮಾಡುತ್ತಾ ಬೆಳೆಯಲಿ ಎಂಬುದಾಗಿ ಹಾರೈಸುತ್ತೇವೆ. ಪತ್ರಿಕೆಯನ್ನು ಪ್ರಕಾಶಪಡಿಸಲು ಪರಿಶ್ರಮಿಸುತ್ತಿರುವ ಸಕಲರಿಗೂ ಸನ್ಮಂಗಳವನ್ನುಂಟುಮಾಡಲಿ ಎಂಬುದಾಗಿ ನಮ್ಮ ಆರಾಧ್ಯಮೂರ್ತಿಯನ್ನು ಪ್ರಾರ್ಥಿಸುತ್ತೇವೆ" ಎಂದು ಪರಮಪೂಜ್ಯ ಶ್ರೀ ಶ್ರೀಗಳವರು ಆಶೀರ್ವದಿಸಿರುತ್ತಾರೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಜಿ. ಅನಂತಪದ್ಮನಾಭ
ಮುಖ್ಯ ಆಡಳಿತಾಧಿಕಾರಿ

ಶ್ರೀ ಆದಿಶಕ್ತ್ಯಾತ್ಮಕ ಅನ್ನಪೂರ್ಣೇಶ್ವರೀ ಅಮ್ಮನವರ ದೇವಸ್ಥಾನ

ಶ್ರೀ ಕ್ಷೇತ್ರ ಹೊರನಾಡು - ೫೭೭ ೧೮೧, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ

ದೂರವಾಣಿ : ೦೮೨೬೩ - ೨೬೯೬೦೪, ೨೬೯೬೦೪ ಫ್ಯಾಕ್ಸ್ : ೦೮೨೬೩ - ೨೬೯೬೦೯

ಶುಭ ಸಂದೇಶ

'ಸ್ವಯಂಪ್ರಕಾಶ' ಮಾಸಪತ್ರಿಕೆಯು ದಶಮಾನೋತ್ಸವವನ್ನು ಆಚರಿಸುತ್ತಿರುವ ವಿಚಾರ ತಿಳಿದು ಸಂತೋಷವಾಯಿತು. ಈ ಸಂದರ್ಭದಲ್ಲಿ ಹೊರತರಲಿರುವ ಸ್ಮರಣ ಸಂಚಿಕೆಯು ಧಾರ್ಮಿಕ ಮತ್ತು ಆಧ್ಯಾತ್ಮ ವಿಷಯಗಳ ಲೇಖನಗಳನ್ನೊಳಗೊಂಡು, ಮಠದ ಸಂಪೂರ್ಣ ವಿವರಗಳುಳ್ಳ ಮಾಹಿತಿಯನ್ನೊಳಗೊಂಡು, ಸಮೃದ್ಧ ಸಾಹಿತ್ಯದಿಂದ ಒಡಗೂಡಿ ಸಂಗ್ರಾಹಯೋಗ್ಯ ಸಂಚಿಕೆಯಾಗಿ ಮೂಡಿಬರಲೆಂದು ಹಾಗೂ ಮಾಸಪತ್ರಿಕೆಯು ಶತಮಾನೋತ್ಸವವನ್ನು ಆಚರಿಸುವಂತಾಗಲೆಂಬ ಶುಭಕಾಮನೆಗಳನ್ನು ವ್ಯಕ್ತಪಡಿಸುತ್ತೇವೆ.

ಶ್ರೀ ಮಾತೆಯ ಅನುಗ್ರಹವಿರಲಿ.

ಅಂಬಾಚರಣದಾಸ
ಜಿ. ಭೀಮೇಶ್ವರ ಜೋಷಿ
ಧರ್ಮಕರ್ತರು
ಶ್ರೀ ಆದಿಶಕ್ತ್ಯಾತ್ಮಕ ಅನ್ನಪೂರ್ಣೇಶ್ವರೀ ಅಮ್ಮನವರ
ದೇವಸ್ಥಾನ, ಶ್ರೀಕ್ಷೇತ್ರ, ಹೊರನಾಡು

ಡಿ. ವೀರೇಂದ್ರ ಹೆಗ್ಗಡೆಯವರು

ಶ್ರೀ ಧರ್ಮಸ್ಥಳ - 574 216
ದಕ್ಷಿಣ ಕನ್ನಡ, ಕರ್ನಾಟಕ
ಕಛೇರಿ (08256) 277121
Fax 277116
E-Mail : dvheggade@hotmail.com

ಸಂದೇಶ

ಚಿಕ್ಕಮಗಳೂರು ಜಿಲ್ಲೆ ಹರಿಹರಪುರ ಶ್ರೀಮಠದ ವತಿಯಿಂದ ಪ್ರಕಟಗೊಳ್ಳುತ್ತಿರುವ 'ಸ್ವಯಂಪ್ರಕಾಶ' ಮಾಸಪತ್ರಿಕೆಯು 10 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ವಿಚಾರ ತಿಳಿದು ಸಂತೋಷವಾಯಿತು.

ಪತ್ರಿಕೆಯ ಪ್ರಗತಿಗಾಗಿ ಶ್ರಮಿಸಿರುವ ಸಂಪಾದಕ ಮಂಡಳಿಯ ಸರ್ವಸದಸ್ಯರನ್ನು ಅಭಿನಂದಿಸುತ್ತಾ ಮುಂದೆಯೂ ಕೂಡಾ ಈ ಪತ್ರಿಕೆಯು ಉತ್ತರೋತ್ತರ ಪ್ರಗತಿಯನ್ನು ಸಾಧಿಸಿ ಕೀರ್ತಿಗಳಿಸುವಂತಾಗಲೆಂದು ಆಶಿಸುತ್ತೇನೆ.

ದಶಮಾನೋತ್ಸವದ ಈ ಶುಭ ಸಂದರ್ಭದ ಸವಿನೆನಪಿಗಾಗಿ "**ದಶಾಸ್ಮರಣಂ**" ಎಂಬ ವಿಶೇಷ ಸಂಚಿಕೆಯೊಂದನ್ನು ಹೊರತರಲಿರುವುದು ಔಚಿತ್ಯಪೂರ್ಣವಾಗಿದೆ. ಪತ್ರಿಕೆಯ ಧ್ಯೇಯೋದ್ದೇಶ, ಶ್ರೀಮಠದ ಸೇವಾಚಟುವಟಿಕೆಗಳನ್ನು ಪ್ರತಿಬಿಂಬಿಸಬಲ್ಲ ವಿವಿಧ ವಿಚಾರಪೂರ್ಣ ವಿಷಯಗಳನ್ನೊಳಗೊಂಡ ಮೌಲಿಕ ಲೇಖನಗಳಿಂದೊಡಗೂಡಿ ಪತ್ರಿಕೆಯು ಆಕರ್ಷಕವಾಗಿ ಪ್ರಕಟವಾಗಲೆಂದು ಆಶಿಸುತ್ತೇನೆ.

ಈ ದಿಸೆಯಲ್ಲಿ ನಿಮ್ಮೆಲ್ಲ ಪ್ರಯತ್ನ - ಪರಿಶ್ರಮ ಸಫಲವಾಗುವಂತೆ ಶ್ರೀ ಮಂಜುನಾಥ ಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ.

(ಡಿ. ವೀರೇಂದ್ರ ಹೆಗ್ಗಡೆಯವರು)

RAMAKRISHNA MATH
BULL TEMPLE ROAD
BANGALORE 560 019
✆ 2661 3149, 2667 1010
E-mail : rkmblr@dataone.in
office@rkmathbangalore.org

ಆಶೀರ್ವಚನ

‘ಸ್ವಯಂಪ್ರಕಾಶ’ ಮಾಸ ಪತ್ರಿಕೆಯು ದಶಮಾನೋತ್ಸವವನ್ನು ಆಚರಿಸುತ್ತಿದೆಯೆಂದು ಕೇಳಿ ತುಂಬ ಸಂತೋಷವಾಗಿದೆ.

ಸತ್ಸಂಸ್ಕಾರಗಳ ಜತೆಗೆ ಸಾಮಾಜಿಕ ಮೌಲ್ಯಗಳನ್ನೂ ತಿಳಿಯಪಡಿಸುತ್ತಿರುವುದು ಮತ್ತೂ ಪ್ರಶಂಸನೀಯ.

ಈ ಸಂದರ್ಭದಲ್ಲಿ ಹೊರತರುತ್ತಿರುವ ಸ್ಮರಣ ಸಂಚಿಕೆಯಲ್ಲಿ ಸಾಮಾನ್ಯ ಪ್ರಜೆಗಳಿಗೂ ಮತ್ತು ಮುಮುಕ್ಷುಗಳಿಗೂ ಅನುಕೂಲವಾಗುವಂತಹ ಲೇಖನಗಳು ಇರುತ್ತವೆಂದು ಭಾವಿಸುತ್ತೇವೆ.

ಸ್ವಯಂಪ್ರಕಾಶ ಮಾಸ ಪತ್ರಿಕೆಯು ಸರ್ವತೋಮುಖ ಏಳ್ಗೆಯನ್ನು ಪಡೆಯಲೆಂದು ಹಾರೈಸುತ್ತೇವೆ.

ಸ್ವಾಮಿ ಹರ್ಷಾನಂದ
ಅಧ್ಯಕ್ಷ
ರಾಮಕೃಷ್ಣ ಮಠ
ಬೆಂಗಳೂರು – 560 019

ಡಿ.ಎನ್. ಜೀವರಾಜ್
ಸರ್ಕಾರಿ ಮುಖ್ಯ ಸಚೇತಕರು
ಕರ್ನಾಟಕ ವಿಧಾನ ಸಭೆ

☎ ಕಛೇರಿ : 22353376
22033406
22342548
ಕೊಠಡಿ ಸಂಖ್ಯೆ : 225, 2ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560 001

ಸಂ:ಸಮುಸ:ಕವಿಸ: 450 :2011

ದಿನಾಂಕ 25-07-2011

ಸಂದೇಶ

ಪರಮಪೂಜ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರು ಪ್ರಾರಂಭಿಸಿದ "ಸ್ವಯಂಪ್ರಕಾಶ" ಮಾಸ ಪತ್ರಿಕೆಯು ಈ ವರ್ಷದ ಸೆಪ್ಟೆಂಬರ್ ತಿಂಗಳಿಗೆ ತನ್ನ 10 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸುತ್ತಿರುವುದು ಅತಿ ಹೆಮ್ಮೆಯ ಸಂಗತಿಯಾಗಿದೆ..

ಆಧ್ಯಾತ್ಮಿಕ ಲೇಖನಗಳು ಹಾಗೂ ಇನ್ನಿತರ ಭಾವನಾತ್ಮಕ ಲೇಖನಗಳನ್ನು ಪ್ರಕಟಿಸಿ, ಭಕ್ತರ ಮನಸ್ಸಿಗೆ ಮುದಕೊಡುವ ಮಾಸ ಪತ್ರಿಕೆಯು ಯಶಸ್ವಿಯಾಗಿ ಸೂರ್ಯನಂತೆ ಪ್ರಜ್ವಲಿಸುತ್ತಿದೆ.

ದಶಮಾನೋತ್ಸವ ಸಮಾರಂಭದ ಸ್ಮರಣ ಸಂಚಿಕೆಯು ಅತ್ಯುತ್ತಮವಾದ ಆಧ್ಯಾತ್ಮಿಕವಾದ ವಿಚಾರಗಳನ್ನು ಒಳಗೊಂಡು ಭಕ್ತರ ತನು - ಮನಗಳಲ್ಲಿ ಎಂದೆಂದೂ ನಿರಂತರವಾಗಿ ನೆಲೆಸಲಿ ಎಂದು ಹಾರೈಸುತ್ತೇನೆ ಹಾಗೂ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳವರ ಕೃಪಾಶೀರ್ವಾದವು ಎಲ್ಲರ ಮೇಲಿರಲಿ ಎಂದು ಪ್ರಾರ್ಥಿಸುತ್ತೇನೆ.

(ಡಿ. ಎನ್. ಜೀವರಾಜ್)

Dr. V. PARAMESHVARA
M B B S F R C.P (LONDON), F R C P. (EDIN), F.A C C.(U S.A.), F.A.P.I., F.C.S.I., F.I.S.E , F.A.I.I.D., F.I.M S A., F.I A.M.S , F I C.N., F.G.S I
CONSULTING PHYSICIAN AND CARDIOLOGIST

Consultation Chambers 44, Race Course Road, Bangalore - 560 001 Phones 22264217, 22264882
E-mail : parameshvara@bsnl.in vparameshvara@yahoo.com
Residence 54 (10/3), Kumarakrupa Road, Bangalore - 560 001 Phone : 22268991 Mobile : 9611225793

ಸಂದೇಶ

'ಸ್ವಯಂಪ್ರಕಾಶ' ಮಾಸ ಸಂಚಿಕೆಯು ಕಳೆದ ಹತ್ತು ಸಂವತ್ಸರಗಳಿಂದ ಎಡರುತೊಡರುಗಳನ್ನೆದುರಿಸಿ ತನ್ನ ಸ್ವಯಂಪ್ರಕಾಶದಿಂದ ಸತತವಾಗಿ ಮುಂದುವರಿದು ಬಂದಿರುವುದು ಆಸ್ತಿಕ ಮಹಾಶಯರುಗಳಿಗೆಲ್ಲಾ ಸಂತಸ ತಂದಿರುವ ಶುಭ ಸಂಗತಿ.

ಪ್ರವಚನಗಳು ಗಮನವಿಟ್ಟು ಲಾಲಿಸುವ ಸಭಿಕರಿಗೆ ಸೀಮಿತವಾಗಿರುತ್ತವೆ. ಲಿಖಿತ ಭೋಧನೆಗಳು ಶಾಶ್ವತವಾಗಿರುವುವು. ಸಮಾಜದ ಮೂಲೆ ಮೂಲೆಗೆ ತಲುಪುವುವು. ವರ್ತಮಾನದಲ್ಲೂ, ಭವಿಷ್ಯಕ್ಕೂ ಉಪಯುಕ್ತವಾಗುವುವು. ಇಷ್ಟಾರ್ಥಿಗಳು (ಅವರ ಸಂಖ್ಯೆಗೆ ಏನೂ ಕಡಿಮೆಯಿಲ್ಲ) ಪುನಃಪಠಣ ಮತ್ತು ವಿಮರ್ಶೆ ಮಾಡುವ ಮೂಲಕ ಅನುಮಾನಗಳನ್ನು ಹೋಗಲಾಡಿಸಿಕೊಳ್ಳಬಹುದು. ವಿಷಯಗಳನ್ನು ಜೀರ್ಣಿಸಿಕೊಂಡು ಜ್ಞಾನಭಂಡಾರವನ್ನು ವಿಸ್ತಾರವಾಗಿ ಬೆಳೆಸಿಕೊಳ್ಳಬಹುದು. ತಿಳಿದುಬಂದ ಅಂಶಗಳನ್ನು ಸಮಯ ಸಂದರ್ಭಗಳಿಗನುಗುಣವಾಗಿ ಉಪಯೋಗಿಸಿ ಕೃತಾರ್ಥರಾಗಬಹುದು. ಅಕ್ಕ ಪಕ್ಕದವರಲ್ಲಿ ವಿನಿಮಯ ಮಾಡಿ ಹಂಚಿಕೊಳ್ಳಬಹುದು. ಈ ದಿಕ್ಕಿನಲ್ಲಿ ಸ್ವಯಂಪ್ರಕಾಶ ಮಾಸ ಸಂಚಿಕೆಗಳು ತನ್ನ ಹೆಸರಿಗೆ ತಕ್ಕಮ್ತೆ ಶ್ರೇಷ್ಠಸ್ಥಾನವನ್ನು ಗಳಿಸಿದೆ.

ಸುಲಲಿತವಾದ ಲೇಖನಗಳು, ಜನಸಾಮಾನ್ಯರಿಗೆ ಮನಮುಟ್ಟುವಂತಹ ಬರಹಗಳು, ನೀತಿ ಭೋಧನೆಗಳನ್ನೊಳಗೊಂಡ ಅನುಭವದ ಮಾತುಗಳು, ಮೃದುವಾದ ಭಾಷೆ, ಸ್ವಚ್ಛವಾದ ಸಂಕೇತಗಳು, ಪಂಡಿತರು ಮೆಚ್ಚುವ ಶೈಲಿ, ಮಾಸದ ಧಾರ್ಮಿಕ ಕಾರ್ಯಗಳ ಕೈಪಿಡಿ, ನಾಸ್ತಿಕರನ್ನು ಆಸ್ತಿಕರನ್ನಾಗಿ ಪರಿವರ್ತಿಸಬಲ್ಲ ದೃಷ್ಟಾಂತಗಳು, ಆಸ್ತಿಕರಿಗೆ ಸನಾತನ ಧರ್ಮದಲ್ಲಿ ನಿರಂತರ ಆಸಕ್ತಿಯನ್ನುಂಟು ಮಾಡಿ ಕುತೂಹಲವನ್ನು ಕೆರಳಿಸುವಂತಹ ಬರವಣಿಗೆಗಳು, ನಿಷ್ಪಕ್ಷಪಾತವಾದ ಅಭಿಪ್ರಾಯಗಳು ಸಮತೋಲನದ ಮತ್ತು ಸಮಯೋಚಿತವಾದ ಹೇಳಿಕೆಗಳು, ಶ್ರದ್ಧಾಭಕ್ತಿಗಳನ್ನು ಇಮ್ಮಡಿಸುವ ಪೌರಾಣಿಕ ಮತ್ತು ಐತಿಹಾಸಿಕ ಪ್ರಕರಣಗಳು. ಮುಂದಿನ ಪೀಳಿಗೆಗಳಿಗೆ ಸನಾತನ ಧರ್ಮದ ಬಗ್ಗೆ ತಿಳುವಳಿಕೆ ನೀಡಲು ಅರ್ಹವಾದ ಕಥಾಸಾರಾಂಶಗಳು. ಈ ಎಲ್ಲಾ ಸಂದೇಶಗಳನ್ನೊಳಗೊಂಡ 'ಸ್ವಯಂಪ್ರಕಾಶ' ಸಂಚಿಕೆಗಳು ತನ್ನ ಸ್ವಯಂಪ್ರಕಾಶದಿಂದಲೇ ಸಮಾಜದಲ್ಲಿ ಒಂದು ಅಗ್ರಸ್ಥಾನವನ್ನು ಗಳಿಸಿ ಪ್ರಜಾಸಕ್ತಿಯಿಂದ ಸೇವೆ ಸಲ್ಲಿಸುತ್ತಾ ಬಂದಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯ. 'ಸ್ವಯಂಪ್ರಕಾಶ' ಉತ್ತಮಶ್ರೇಣಿಯ ಮಾಸಪತ್ರಿಕೆ.

'ಸ್ವಯಂಪ್ರಕಾಶ'ದ ಸಂಸ್ಥೆಯವರು ಧನ್ಯರು. ಸಹೃದಯರೂ, ಸಂಪಾದಕರೂ ಆದ ವೇ. ಬ್ರಂ. ಶ್ರೀ ಬಿ.ಸುಬ್ರಹ್ಮಣ್ಯರವರು ಓದುಗರ ಮತ್ತು ಸಾರ್ವಜನಿಕರ ಮೆಚ್ಚಿಗೆಯನ್ನು ಪಡೆದು ನಮ್ಮೆಲ್ಲರ ಅಭಿಮಾನವನ್ನು ಗಳಿಸಿದ್ದಾರೆ. ಭಗವಂತನ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ. ಅವರಿಗೆ ಅಭಿನಂದನೆಗಳು, ದಯಾಮಯನಾದ ದೇವರು 'ಸ್ವಯಂಪ್ರಕಾಶ'ವನ್ನು ಚಿರಕಾಲ ಬಾಳಿ ಬೆಳಗುವಂತೆ ಮಾಡಲೆಂದು ಪ್ರಾರ್ಥಿಸುತ್ತೇನೆ.

ದಿನಾಂಕ 15-08-2011
ಬೆಂಗಳೂರು

ವಿ ಪರಮೇಶ್ವರ
ಡಾ. ವಿ. ಪರಮೇಶ್ವರ

ಪರಿವಿಡಿ...

1.	Publishers Note	P.N. Viswanathan	01
2.	ಸಂಪಾದಕೀಯ	"ಗುರುಸೇವಾರತ್ನ" ಹರಿಹರಪುರ ಬಿ.ಸುಬ್ರಹ್ಮಣ್ಯಂ	03
3.	From the Administrator's desk	P.N. Viswanathan	07
4.	ಸ್ವಯಂಪ್ರಕಾಶೋ ನಿತರಾಂ ವಿರಾಜತೇ	ಶ್ರೀ ಶೇಷಾದ್ರಿ ಭಟ್	11
5.	ಋಷಿಗಳ ರಾಷ್ಟ್ರಾಭಿಮಾನ	ವಿದ್ವಾನ್ ಎನ್. ರಂಗನಾಥ ಶರ್ಮಾ	12
6.	ಸುಸಂಸ್ಕೃತ ಸಮಾಜ ಇಂದಿನ ಅಗತ್ಯ	ಡಾ॥ ಎಂ.ಎಲ್. ನರಸಿಂಹ ಮೂರ್ತಿ	15
7.	ಸ್ವಯಂಪ್ರಕಾಶ	ಶ್ರೀ ಎಸ್. ರಾಮಚಂದ್ರ ಶಾಸ್ತ್ರಿ	17
8.	ಧರ್ಮಃ ವಿಶ್ವದ ಸದಾಚಾರ ಸಂಹಿತೆ	ಡಾ॥ ಎಚ್.ವಿ. ನರಸಿಂಹ ಮೂರ್ತಿ	20
9.	ಮುಕುಂದ ಮಾಲಾ	ಶ್ರೀ ಟಿ.ಎಸ್. ವೆಂಕಣ್ಣಯ್ಯ	22
10.	ಭಗವದ್ಗೀತಾ ಕಿಂಚಿದಧೀತಾ	ವಿದ್ವಾನ್ ಶ್ರೀ ಎಂ. ಸುಬ್ರಹ್ಮಣ್ಯ ಭಟ್	25
11.	ಹುಟ್ಟು ಕುರುಡರಾಗಿದ್ದ ಮಹಾಜ್ಞಾನಿ	ವೇ.ಬ್ರಂ ಶ್ರೀ ಎಂ.ವಿ. ನರಸಿಂಹ ಮೂರ್ತಿ ಶಾಸ್ತ್ರೀ	27
12.	ಪೂರ್ಣಾವತಾರಿ ಶ್ರೀಕೃಷ್ಣ	ಯೋಗಶ್ರೀ ಕೆ. ಕೇಶವಮೂರ್ತಿ	29
13.	ದಶಪ್ರಾಣ, ದಶನಾದ ದರ್ಶನ	ಡಾ॥ ಅನಂತರಾಮನ್ ಎಮ್.ಎನ್.	33
14.	ನಮ್ಮ ದೇಶ – ನಮ್ಮ ಸಂಸ್ಕೃತಿ	ಶ್ರೀ ರಘುನಾಥ ಶಾಸ್ತ್ರಿ	37
15.	ಪರೀಕ್ಷಿತ ರಾಜ	ಶ್ರೀ ಕೋಟೇಶ್ವರ ಸೂರ್ಯನಾರಾಯಣ ರಾವ್	40
16.	ಪಾಪ – ಪುಣ್ಯ	ಶ್ರೀ ಶೇಷಾದ್ರಿ ಭಟ್	42
17.	ನಿರ್ವಾಣ ಷಟ್ಕ	ವಿದ್ವಾನ್ ಡಾ॥ ಟಿ.ವಿ. ಸತ್ಯನಾರಾಯಣ,	44
18.	ದಾರಿ ಹಲವು ಗುರಿಯೊಂದೇ	ಶ್ರೀ ಕ.ವಿ. ಸುರೇಶ್	47
19.	ಗಾವೋ ವಿಶ್ವಸ್ಯ ಮಾತರಃ	ವಿದ್ವಾನ್ ಶ್ರೀ ಬಿ.ಕೆ. ಶೇಷಗಿರಿ ಭಟ್	50
20.	ಸ್ವಯಂಪ್ರಕಾಶಕ್ಕೆ ಹತ್ತು ವತ್ಸರಗಳು	ಶ್ರೀ ಅನಂತ ಹೆಬ್ಬಾರ್	54
21.	ಬೆಳಗಿ ಬೆಳಗಿಸುವ ಸಂಸ್ಕೃತಿ	ಶ್ರೀಮತಿ ಶ್ರುತಿ ಅಚ್ಯುತ	55
22.	ನಮ್ಮ ಹಿಂದೂ ಸಂಸ್ಕೃತಿಯಲ್ಲಿ 'ರಂಗೋಲಿ'ಯ ಮಹತ್ವ	ಡಾ॥ ಬಿ.ಆರ್. ಪದ್ಮ	57
23.	ನಾವು ಭ್ರಷ್ಟರೇ	ಶ್ರೀ ಹೊರಂಟೂರು ನಾಗಣ್ಣ	60
24.	'ನಮ್ಮ ಸ್ವಯಂಪ್ರಕಾಶ'	ಶ್ರೀ ಅಣ್ಣುಕೊಡಿಗೆ ನಾಗರಾಜ್	62
25.	ಒಪ್ಪಿ ಅಪ್ಪುವ ಮನೋಭಾವ ನಮ್ಮದಾಗಲಿ	ಶ್ರೀ ಕಿರಣ್ ಕಮ್ಮಾರಳ್ಳಿ	63
26.	ಹತ್ತು ವರ್ಷಗಳ ಹಿಂದೆ 'ಸ್ವಯಂಪ್ರಕಾಶ' ಪತ್ರಿಕೆ ಬಿಡುಗಡೆ		65
27.	ಜಾಹಿರಾತುಗಳು ಹಾಗೂ ಫೋಟೋ ಗ್ಯಾಲರಿ (2001 – 2011)		

Publishers Note

Sri Swayamprakasha Trust, founded by Sri Swamiji on his ascension to the Peetam publishes a Kannada monthly dharmic magazine called, Swayamprakasha, which completes its 10 years of publication. In this fast and glaring media age, publishing and sustaining such a magazine is not an easy task. In 2003, this trust started publishing an English monthly magazine called Sadguru's Blessings in order to reach out to people far and wide. The form and contents of both these monthly magazines are well appreictated by all. With more support and participation from readers, subscribers and advertisers, Sri Swamiji with these magazines is a beacon of light for Dharmic guidance.

This Trust also manages the 'Anna Dana' programme of Sreemath at Hariharapura, maintains the Sri Lakshminivas Guest House, a Goshala [cow shelter where about 70 cows and calves are maintained] and the Swayamprakasha Samskrutha Veda Vidyalaya. In addition, this Trust publishes various spiritual books, audio and video CDs, DVDs etc.

This Sòuvenir is brought in commemoration of completion of 10 years of Swayamprakasha, the monthly Kannada Magazine. Sri Hariharapura B. Subramaniam, a nonagenarian, who is associated with Sreemath for over six decades, is the Editor of Swayamprakasha magazine, of which he is justifiably proud and happy. We should remember and acknowledge his contribution to Sreemath and Swayampraksha. On behalf of all of us, I extend warm and sincere regards to him and pray that blessings of Sadguru be on him and his family always

I, P.N. Viswanathan, Administrator of Sreemath, Hariharapura and Trustee of various Trusts founded by Sri Swamiji consider it a great blessing to have this opportunity of serving Sri Swamiji and work under his guidance. I appeal to all

to visit this holy land, have dharshan of Sri Swamiji and I am sure that you and your family will be immediately attracted by the 'kataksham' and blessings of His Holiness and feel the urge to participate and be part of many noble activities guided by Sri Swamiji. As I had mentioned earlier, to sustain the 'dharma prachara' vision of Sri Swamiji, the two monthly magazines, Swayamprakasha and Sadguru's Blessings are two messengers, which will reach your home every month and this needs your inclination. You can subscribe or gift it to your dear and near ones. This is also a Guru Seva in one way.

With the support of all well-wishers and advertisers for this special souvenir, we have made a 'photographic' presentation of 10 years of Sreemath and I am sure you will enjoy and cherish this copy forever. I wish to express our sincere thanks to the Advertisers, who have happily responded to our appeal and our wishes and prayers to Sri Swamiji to bestow all prosperity, happiness and well being in their endeavours and am sure their participation in our future efforts also. I also thank our Dharmakarthas of various regions for their effort to make this possible. Special mention is to be made of Sri Nagaraj, 'Sanchalak' of Swayamprakasha at Hariharapura and Mr. Narayanan Kumar of Chennai for their successful efforts and out best wishes to them. I also wish to express our sincere thanks to Mr Prabhakara, Parimala Mudranalaya, Bangalore and Praveena Mudrana, Karkala for their association in bringing out the monthly magazines, earlier. Most of all, I wish to express our thanks and best wishes to Mr. & Mrs. Radhakrishana for their sustained, continuous and patient contribution from preparation, design artwork etc. Our sincere thanks and best wishes to Sri Prakash, Aditya Printers, who from the beginning was very enthusiastic and supportive, in bringing out this excellent "Dhashasmaranam" Souvenir and let Sadguru's Blessings be showered on him and his family in all their future endeavours.

P.N. Viswanathan
Administrator

ಸಂಪಾದಕೀಯ...

''ಗುರುಸೇವಾರತ್ನ'' ಹರಿಹರಪುರ ಬಿ.ಸುಬ್ರಹ್ಮಣ್ಯಂ

ದೈವೀಕೃಪೆಯಿಂದ ಮತ್ತು ಸ್ವಪ್ರಯತ್ನದಿಂದ ಮಾನವನ ಬದುಕಿನಲ್ಲಿ ಸಂಭ್ರಮ - ಉತ್ಸಾಹ - ಸಂತಸದ ಘಟನೆಗಳು ಕ್ವಚಿತ್ತಾಗಿ ಸಂಭವಿಸುವಂತೆ ಸಂಘ - ಸಂಸ್ಥೆಗಳ ಕಾಲಮಾನದಲ್ಲಿಯೂ ಅವು ಒದಗಿ ಬರುತ್ತಿರುತ್ತವೆ. ನಮ್ಮ ಹರಿಹರಪುರ ಶ್ರೀಮಠದ ವಿಷಯದಲ್ಲಿ ಅದೂ ಈಚೆಗಿನ 10 ವರ್ಷಗಳಲ್ಲಿ ಇದು ಕ್ವಚಿತ್ತಾಗಿ ಅಲ್ಲ! ಮೇಲಿಂದ ಮೇಲೆ ಸಂಭವಿಸುತ್ತಿರುವುದನ್ನು ಕಾಣುವ - ಕಂಡು ಸಂಭ್ರಮಿಸುವ ಭಾಗ್ಯ ನಮಗೆಲ್ಲ ಒದಗಿಬರುತ್ತಿದೆ. ಹತ್ತು ವರ್ಷಗಳ ಹಿಂದೆ 2001ರ ಮೇ ತಿಂಗಳಲ್ಲಿ **ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರು** ಶ್ರೀಮಠದ ಧರ್ಮಪೀಠದಲ್ಲಿ ಪಟ್ಟಾಭಿಷಿಕ್ತರಾಗಿ ಪೀಠಾಧಿಕಾರ ವಹಿಸಿಕೊಂಡರು. ಅದಾದ ನಾಲ್ಕೇ ತಿಂಗಳ ನಂತರ ಅಕ್ಟೋಬರ್ ತಿಂಗಳಿನಲ್ಲಿ **''ಸ್ವಯಂಪ್ರಕಾಶ''** ಮಾಸಪತ್ರಿಕೆಯನ್ನು ಅವರು ಸಂಸ್ಥಾಪಿಸಿದರು. ಈ ವರ್ಷದ ಇದೇ ಸೆಪ್ಟೆಂಬರ್ ತಿಂಗಳಿಗೆ ಅದು ತನ್ನ 10 ವರ್ಷಗಳನ್ನು ಪೂರೈಸಿದೆ. ಇದೀಗ ಈ ಎರಡು ಮಹಾ ಘಟನೆಗಳ ದಶಮಾನೋತ್ಸವದ ಸಂಭ್ರಮ. ಈ ಸಂಭ್ರಮದ ಸವಿನೆನಪನ್ನು ಶಾಶ್ವತವಾಗಿ ಇಡಲು ಈ **''ದಶಾ ಸ್ಮರಣಂ''** ವಿಶೇಷ ಸಂಚಿಕೆಯ ಪ್ರಕಟಣೆ.

''ದಶಾ ಸ್ಮರಣಂ'' ಅಂದರೆ ಏನು? ''ದಶ'' ಅಂದರೆ ಹತ್ತು ''ದಶಾ'' ಅಂದರೆ ಸ್ಥಿತಿ, ಅವಸ್ಥೆ, ಕಾಲ, ಅದೃಷ್ಟ ಎಂಬ ಅರ್ಥಗಳಿವೆ. ಸ್ಮರಣ ಅಂದರೆ ನೆನಪು ಮಾಡಿಕೊಳ್ಳುವುದು, ಅಂದರೆ, ಹತ್ತು ವರ್ಷಗಳ ಕಾಲ ನಡೆಯಲ್ಲಿ ಸಂಭವಿಸಿದ ಸ್ಥಿತಿ, ಅವಸ್ಥೆ, ಅದೃಷ್ಟ ಇವುಗಳನ್ನು ನೆನಪು ಮಾಡಿಕೊಳ್ಳುವುದು. ಈ ಕಾಲದ ನಡೆಯಲ್ಲಿ ಅದೃಷ್ಟದ ಜೊತೆಗೆ ದುರಾದೃಷ್ಟವೂ ಸಂಭವಿಸಿರಬಹುದು. ಅದನ್ನೆಲ್ಲಾ ಸಿಂಹಾವಲೋಕನ ಮಾಡಿ ಮುಂದಿನ ದಾರಿಯನ್ನು ರೂಪಿಸಿಕೊಳ್ಳುವುದೇ ಈ **''ದಶಾ ಸ್ಮರಣಂ''** ವಿಶೇಷ ಸ್ಮರಣೆ ಸಂಚಿಕೆಯ ಉದ್ದೇಶ.

ಮೊದಲಿಗೆ ಪರಮ ಪೂಜ್ಯ ಗುರುವರ್ಯ ಶ್ರೀ ಶಂಕರಾಚಾರ್ಯ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರ ಪೀಠಾಧಿಕಾರದ ಹತ್ತು ವರ್ಷಗಳು :- ಈ ಹತ್ತು ವರ್ಷಗಳು ಯಾವ ಒಂದು ಸಣ್ಣ ಕೊರತೆಯೂ ಇಲ್ಲದೆ ಮಹತ್ತಾಗಿ ಗುರುತಿಸಲ್ಪಡಬಹುದಾದ ಸರ್ವತೋಮುಖ ಅಭಿವೃದ್ಧಿಯೊಂದಿಗೆ ನಡೆದು ಬಂದಿರುವುದು ಸಂಸ್ಥೆಯ ಶಿಷ್ಯ - ಭಕ್ತಾಭಿಮಾನಿ ಸಮುದಾಯದ ಮಹಾದ್ಭಾಗ್ಯವೇ ಸರಿ.

ಧರ್ಮಸಂಸ್ಥೆಗಳಾದ ಮಠ ಮಾನ್ಯಗಳ ಆದ್ಯ ಪ್ರವರ್ತಕ ಪರಮ ಪೂಜ್ಯ ಆಚಾರ್ಯ ಶ್ರೀ ಶಂಕರ ಭಗವತ್ಪಾದರು ಪುನಃ ಪ್ರತಿಷ್ಠಾಪಿಸಿದ ಭಾರತೀಯ ಸನಾತನ ಧರ್ಮದ ನಿರಂತರ ಮುನ್ನಡೆಗಾಗಿ ಮಠ ಮಾನ್ಯವನ್ನು ವ್ಯವಸ್ಥೆಗೊಳಿಸಿ ತ್ಯಾಗ - ನಿಷ್ಠೆ - ನಿಃಸ್ಪೃಹತೆ - ಸಮಭಾವನೆಗಳನ್ನುಳ್ಳ ಸಂನ್ಯಾಸಿಗಳನ್ನೇ ಅವುಗಳ ಮುಖ್ಯಸ್ಥರನ್ನಾಗಿ ಸಂಯೋಜಿಸಿದರು. ಆಚಾರ್ಯರ ಮೂಲಭೂತ ಉದ್ದೇಶಗಳೊಂದಿಗೆ ಆಯಾಯ ಕಾಲದ ಪರಿಸ್ಥಿತಿಗೆ ತಕ್ಕಂತೆ ಧರ್ಮಕ್ಕೆ ವಿರುದ್ಧವಲ್ಲದ ಪರಿವರ್ತನೆಗಳೊಂದಿಗೆ ಜನತೆಯನ್ನು ಸನ್ಮಾರ್ಗದಲ್ಲಿ ಪ್ರವರ್ತಿಸುವ ಕಾರ್ಯದಲ್ಲಿ ಈ ಧರ್ಮ ಪೀಠಗಳು ನಿರತವಾಗಿವೆ.

ಹಿಂದೊಂದು ಕಾಲದಲ್ಲಿ 7 - 8 ವರ್ಷದ ಬಾಲಕನಿಗೆ ಸಂನ್ಯಾಸ ನೀಡಿ ಮಠಗಳ ಉತ್ತರಾಧಿಕಾರಿಯನ್ನಾಗಿ ಮಾಡಲಾಗುತ್ತಿತ್ತು. ಆದರೆ ಆ ನಿಯಮ - ಅದರಲ್ಲಿಯೂ ಸ್ಮಾರ್ತ ಸಂಪ್ರದಾಯದ ಪೀಠಗಳಲ್ಲಿ ಈಗ ಮಾಯವಾಗಿ ಹೋಗಿದೆ. ವಿದ್ಯಾಭ್ಯಾಸ ನಿರತರಾಗಿ ಪ್ರಾಪಂಚಿಕ ಅರಿವಿನ ಜೊತೆಗೆ ಧಾರ್ಮಿಕ ಮನೋಭಾವವನ್ನು ರೂಢಿಸಿಕೊಂಡ ಯುವಕರೇ ಪೀಠಾಧಿಕಾರಕ್ಕೆ ಬರುತ್ತಿರುವುದರಿಂದ ಧಾರ್ಮಿಕ ಕ್ಷೇತ್ರಕ್ಕೆ ಹಾಗೂ ಸಮಾಜಕ್ಕೆ ಅತ್ಯಗತ್ಯವಾದ ಮಾರ್ಗದರ್ಶನ - ಸೇವೆಗಳು ದೊರೆಯುತ್ತಿವೆ.

ನಮ್ಮ ಶ್ರೀಮಠದ ಹಿಂದಿನ ಪರಮ ಪೂಜ್ಯ ಗುರುವರ್ಯ ಶ್ರೀ ಜಗದ್ಗುರು ಶಂಕರಾಚಾರ್ಯ ಶ್ರೀ ಸ್ವಯಂಪ್ರಕಾಶ ಅಭಿನವ ರಾಮಾನಂದ ಸರಸ್ವತೀ ಸ್ವಾಮೀಜಿಯವರು ತಮ್ಮ 18ನೇ ವಯಸ್ಸಿನಲ್ಲಿ ಪೀಠಕ್ಕೆ ಬಂದು 1939ರ ಪೂರ್ತಿ 60 ವರ್ಷಗಳ ತಮ್ಮ ಪೀಠಾಧಿಪತ್ಯದ ಅವಧಿಯಲ್ಲಿ ಧಾರ್ಮಿಕ – ಸಾಮಾಜಿಕ ಕ್ಷೇತ್ರಗಳಿಗೆ ಉತ್ತಮ ಕೊಡುಗೆಗಳನ್ನು ನೀಡಿ, ಮಠ – ದೇಗುಲಗಳನ್ನು ಅಭಿವೃದ್ಧಿಪಡಿಸಿ ಶಿಷ್ಯಪರಿಗ್ರಹ ಮಾಡದೇ ಬ್ರಹ್ಮೈಕ್ಯರಾದಾಗ ಶ್ರೀಮಠದ ಮುನ್ನಡೆ ಕುಂಠಿತವಾಯಿತು. ಸುಮಾರು 1¾ವರ್ಷ ಕಳೆದರೂ ಉತ್ತರಾಧಿಕಾರಿಯನ್ನು ಪಡೆಯಲಾಗಲಿಲ್ಲ. ಆಗ ನಮ್ಮ ಶ್ರೀಮಠಕ್ಕೆ ಒದಗಿಬಂದುದು ಪರಮ ಪೂಜ್ಯ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಅನುಗ್ರಹದ ಮಹಾಭಾಗ್ಯ. ಶಿಷ್ಯ – ಭಕ್ತಾಭಿಮಾನಿಗಳ ಪ್ರಾರ್ಥನೆಯಂತೆ, 4 ವರ್ಷದಿಂದ ತಮ್ಮ ಆಶ್ರಯದಲ್ಲಿ ವೇದಾಂತ ಅಧ್ಯಯನ ನಿರತರಾಗಿದ್ದ ಶೃಂಗೇರಿ ಸಮೀಪದ ಉಳುವೆ ಗ್ರಾಮದ ನೈಷ್ಠಿಕ ಬ್ರಹ್ಮಚಾರಿ ಶ್ರೀ ನಾಗರಾಜ ಶರ್ಮರನ್ನು ನಮ್ಮ ಶ್ರೀಮಠಕ್ಕೆ ಕಳುಹಿಸಿಕೊಟ್ಟರು.

ಶ್ರೀ ನಾಗರಾಜ ಶರ್ಮರು, ಕಂಪ್ಯೂಟರ್ ಸೈನ್ಸ್ ಪದವೀಧರರಾಗಿ ಕೇಂದ್ರೀಯ ವಿಜ್ಞಾನ ಸಂಸ್ಥೆಯಲ್ಲಿ ಇಂಜಿನಿಯರಾಗಿ ಕೈತುಂಬಾ ಸಂಪಾದಿಸುತ್ತಿದ್ದವರು. ಶ್ರೀರಾಮಕೃಷ್ಣಾಶ್ರಮದ ಸಂಪರ್ಕದಿಂದ ಆಧ್ಯಾತ್ಮ ಅಧ್ಯಯನದ ದಾರಿ ಹಿಡಿದವರು. ಪ್ರಾಪಂಚಿಕವಾದ ಎಲ್ಲವನ್ನೂ ತ್ಯಾಗಮಾಡಿ ಜಗದ್ಗುರುಗಳವರ ಸಲಹೆಯಂತೆ ಶೃಂಗೇರಿಗೆ ಬಂದು ಅಧ್ಯಯನ ನಿರತರಾಗಿದ್ದವರು. ಪೀಠಾಧಿಕಾರಕ್ಕೆ ಬಂದಾಗ ಅವರ ವಯಸ್ಸು 31 ವರ್ಷಗಳು. ಸಂನ್ಯಾಸಕ್ಕೆ ಅತ್ಯಗತ್ಯ ಅರ್ಹತೆಗಳಾದ ತ್ಯಾಗ – ನಿಸ್ಪೃಹತೆ – ಔದಾರ್ಯ – ಸರಳತನ – ಸರ್ವಸಮಭಾವನೆ – ಇಂದ್ರಿಯ ನಿಗ್ರಹಗಳನ್ನು ಮೈಗೂಡಿಸಿಕೊಂಡಿರುವ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರು ಈ 10 ವರ್ಷಗಳಲ್ಲಿ ಸಾಧಿಸಿ ಮುನ್ನಡೆಸುತ್ತಿರುವ ಕಾರ್ಯಗಳ ಸಂಕ್ಷಿಪ್ತ ನೋಟ ಹೀಗಿದೆ. ಹಿಂದಿನ ಗುರುಗಳ ಅಧಿಷ್ಠಾನಗಳ ನವೀಕರಣ, ಅತಿಥಿಗೃಹ, 'ಸ್ವಯಂಪ್ರಕಾಶ' ಮಾಸಪತ್ರಿಕೆಯ ಸ್ಥಾಪನೆ, 'ಸದ್ಗುರೂಸ್ ಬ್ಲೆಸ್ಸಿಂಗ್ಸ್' ಆಂಗ್ಲ ಮಾಸಪತ್ರಿಕೆ ಪ್ರಾರಂಭ, ಸೋಮೇಶ್ವರ ಯಾಗಶಾಲೆಯ ಭವ್ಯ ಕಟ್ಟಡ ನಿರ್ಮಾಣ, ಭಕ್ತಿಮಂದಿರ ನಿರ್ಮಾಣ, ಶ್ರೀಮಠದ ಹಳೆಯ ಜೀರ್ಣ ಸ್ಥಾವರಗಳ ಪುನರ್ ನಿರ್ಮಾಣದ ಕೋಟ್ಯಾಂತರ ರೂಪಾಯಿ ವೆಚ್ಚದ ಕಾರ್ಯಗಳು ಪ್ರಾರಂಭ, ಜನಸಾಮಾನ್ಯರ ಅನುಕೂಲ – ಸಮಾಜದಲ್ಲಿ ಭಾವೈಕ್ಯತೆ ಉಂಟುಮಾಡುವ ''ಲೀವ್ ಹ್ಯಾಪಿಲಿ ಫೌಂಡೇಷನ್'', ಶಿವದೀಕ್ಷಾ ಕಾರ್ಯಕ್ರಮ, ಎಲ್ಲ ವರ್ಣ, ವರ್ಗದ ಮಹಿಳೆಯರಿಗಾಗಿ ಗಾಯತ್ರೀ ಉಪಾಸಕ್ ಪರಿಷತ್ತಿನ ಶಿಬಿರಗಳು, ದೀನರು – ದಲಿತರು – ಸಂತ್ರಸ್ತರು – ಬಡ ವಿದ್ಯಾರ್ಥಿಗಳು – ರೋಗಗ್ರಸ್ತರಿಗೆ ಸಹಾಯ, ವಿದ್ಯಾಸಂಸ್ಥೆಗಳಿಗೆ ಸಹಾಯ, ನಿರ್ವಹಣೆ, ಸಾಮಾನ್ಯವಾಗಿ ಪ್ರತಿ ತಿಂಗಳಲ್ಲಿ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲಿ ವ್ಯಾಪಕ ಧರ್ಮ ಪ್ರಚಾರ ಪ್ರವಾಸ (ಈ ಪ್ರವಾಸಗಳಲ್ಲಿ ಮಹಿಳೆಯರಿಗೆ ಗಾಯತ್ರೀ ಉಪಾಸನಾ ಶಿಬಿರ, ಸ್ತ್ರೀ – ಪುರುಷರಿಗೆ ಶಿವದೀಕ್ಷಾ ಶಿಬಿರಗಳನ್ನು ನಡೆಸುತ್ತ ಈಗಾಗಲೇ 6 ಲಕ್ಷ ಮಂದಿಗೆ ದೀಕ್ಷೆ ನೀಡಿ ರಾಷ್ಟ್ರದಲ್ಲಿ ಭಾವೈಕ್ಯತೆ ಉಂಟುಮಾಡಿ ಮುಂದುವರಿಯುತ್ತಿದ್ದಾರೆ), ಉಪಯುಕ್ತ ಧಾರ್ಮಿಕ ಗ್ರಂಥಗಳ ಪ್ರಕಟಣೆ, ಗೋಶಾಲೆ ಸ್ಥಾಪನೆ, ಬೆಂಗಳೂರು ಗಿರಿನಗರದಲ್ಲಿ ಭಕ್ತರೊಬ್ಬರು ಕಟ್ಟಿಸಿಕೊಟ್ಟ ಭವ್ಯ ಭಕ್ತಿ ಮಂದಿರ ಇತ್ಯಾದಿ ಇತ್ಯಾದಿ ಸಾಧನೆಗಳ ಪಟ್ಟಿ ಮುಂದುವರಿದಿದೆ. ಮೇ 6 ರಂದು ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯ ದೇಗುಲ ಪುನರ್ ನಿರ್ಮಾಣದ ತಳಪಾಯದಲ್ಲಿ ಶಿಲಾ ಗರುಡ ಯಂತ್ರ – ಶ್ರೀಲಕ್ಷ್ಮೀ ನರಸಿಂಹ ವಜ್ರ ಯಂತ್ರ ಶಿಲಾ ಸ್ತಂಭ ಸ್ಥಾಪನೆ (ಸುಮಾರ 60 ಟನ್ ತೂಕದ 15 ಅಡಿ ಎತ್ತರದ ಆಗಮೋಕ್ತ ಶಿಲಾಸ್ತಂಭ)ಯನ್ನು ಶ್ರೀ ಶ್ರೀಗಳವರು ಶಾಸ್ತ್ರೀಯ ವಿಧಿ ವಿಧಾನಗಳಿಂದ ಸ್ಥಾಪಿಸಿದಾಗ ಸೇರಿದ್ದ ಸಹಸ್ರಾರು ಭಕ್ತಾದಿಗಳು ಬೇರೆಲ್ಲೂ ಇಲ್ಲದ ಈ ಸಮಾರಂಭವನ್ನು ನೋಡಿ ಅತ್ಯಂತ ಸಂತಸಕ್ಕೊಳಗಾದರು. ದಿನಾಂಕ 28-06-2011ಕ್ಕೆ 41 ವರ್ಷ ಪೂರ್ತಿಯಾಗಿದ್ದರೂ 25 – 30ರ ಹುರುಪು – ಚೈತನ್ಯಗಳು ಅವರಲ್ಲಿ ತುಂಬಿಕೊಂಡಿದ್ದು ಇದು ಶ್ರೀ ಶಾರದಾ – ಲಕ್ಷ್ಮೀನೃಸಿಂಹ ಸ್ವಾಮಿಯ ಕೃಪೆಯಿಂದ ಹೀಗೆಯೇ ಮುನ್ನಡೆಯುತ್ತ ಬಹುಕಾಲ ಅವರ ಮಹತ್ತರ ಬಹುಮುಖ ಕಾರ್ಯಸಾಧನೆಯನ್ನು ನಾವೆಲ್ಲ ನೋಡುತ್ತ, ಅವರ ಆಶೀರ್ವಾದ ಪಡೆಯುವ ಭಾಗ್ಯ ನಮ್ಮದಾಗಲಿ, ''ದಶಾ ಸ್ಮರಣಂ'' ಶತಸ್ಮರಣೆಯನ್ನು ಕಾಣುವಂತಾಗಲಿ! ಎಂದು ಪ್ರಾರ್ಥಿಸಿ ಕೃತಕೃತ್ಯರಾಗೋಣ.

ಶ್ರೀ ಸಚ್ಚಿದಾನಂದ ಯತೀಶ್ವರೋಽಯಂ ವೇದಾಂತ - ವಿಜ್ಞಾನ - ತಪೋನುರಕ್ತಃ।
ಧರ್ಮ ಪ್ರಚಾರೇ ವಿಹಿತಃ ಶ್ರಮೋಽಯಂ ಸ್ವಯಂಪ್ರಕಾಶೇನ ಜಯತ್ಯಸೌ ಸದಾ ॥

ಸ್ವಯಂಪ್ರಕಾಶದ 10 ವರ್ಷಗಳು : - ಪರಮಪೂಜ್ಯ ಶೃಂಗೇರಿ ಜಗದ್ಗುರುಗಳ ಪೂರ್ಣಾಶೀರ್ವಾದದಿಂದ ನಮ್ಮ ಪೂಜ್ಯ ಗುರುವರ್ಯರು ಸಂಸ್ಥಾಪಿಸಿದ ಈ ಮಾಸಪತ್ರಿಕೆ ಇದೀಗ 10 ವರ್ಷಗಳನ್ನು ಮುಗಿಸಿ 11ನೇ ವರ್ಷಕ್ಕೆ ಕಾಲಿಡುತ್ತಿದೆ. ಪತ್ರಿಕೆಯೊಂದರ ಸಾರ್ಥಕತೆ - ಯಶಸ್ಸು ಮುಂತಾದವುಗಳ ವಿಷಯ ಮುಖ್ಯವಾಗಿ ಪತ್ರಿಕೆಯ ಗ್ರಾಹಕರು ಮತ್ತು ಅದರ ಓದುಗರ ಅಭಿಪ್ರಾಯ ಅನಿಸಿಕೆಗಳು ಬಹುತೇಕ ಧನಾತ್ಮಕವಾಗಿಯೇ ಇರುವುದು ಪತ್ರಿಕೆಯ ಭಾಗ್ಯ. ''ಪತ್ರಿಕೆ ಚೆನ್ನಾಗಿ ಬರುತ್ತಿದೆ'' ಎಂಬ ಮಾತನ್ನು ಅನೇಕರು ಮಾತಿನ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ಬರಹದ ಮೂಲಕವೂ ಸದಭಿಪ್ರಾಯ ವ್ಯಕ್ತವಾಗುತ್ತಿದೆ. ಆದರೆ ಪತ್ರಿಕೆಯನ್ನು ಇನ್ನಷ್ಟು ಜನಪ್ರಿಯವಾಗುವಂತೆ ಮಾಡುವ ಕರ್ತವ್ಯದ ಹೊಣೆಯನ್ನು ನಾವು ಮರೆಯಲಾಗದು. ಕುಂದು - ಕೊರತೆಗಳನ್ನು ಸರಿಪಡಿಸಿಕೊಳ್ಳುತ್ತ ಪತ್ರಿಕೆಯನ್ನು ಮುನ್ನಡೆಸುವ ಪಣವನ್ನು ಈ ದಶಮಾನೋತ್ಸವ ಸಂದರ್ಭದಲ್ಲಿ ಸಂಬಂಧಪಟ್ಟ ನಾವೆಲ್ಲ ತೊಡೋಣ.

ನಮ್ಮ ಪತ್ರಿಕೆಯ ಮುಖ್ಯಭಾಗವೆಂದರೆ ಒಳ್ಳೆಯ ಲೇಖನಗಳ ಪೂರೈಕೆ. ಯಾವಾಗಲೂ ಲೇಖನಗಳ ಕೊರತೆ ನಮಗೆ ಎದುರಾಗಿಲ್ಲ. ಉತ್ತಮ ಲೇಖನಗಳನ್ನು ನಿರಂತರವಾಗಿ ಪೂರೈಸುತ್ತ ಸಹಕರಿಸುತ್ತಿರುವ ಲೇಖಕ ಬಳಗದವರನ್ನು ಹೃತ್ಪೂರ್ವಕ ಅಭಿನಂದಿಸುತ್ತೇನೆ.

ಪತ್ರಿಕೆಯ ಸಂಚಾಲಕರಾಗಿ ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬಿ.ಕಾಂ. ಪದವೀಧರರಾದ **ಶ್ರೀ ಅಣ್ಣುಕುಡಿಗೆ ನಾಗರಾಜ್,** ಒಬ್ಬ ಒಳ್ಳೆಯ ಕಾರ್ಯಕರ್ತರು. ಅವರ ಸ್ಫೂರ್ತಿ - ಉತ್ಸಾಹ - ಜನಸಂಪರ್ಕ ಎಷ್ಟು ಗಟ್ಟಿಮುಟ್ಟದೆಂಬುದಕ್ಕೆ ಅವರು ಈ ದಶಾ ಸ್ಮರಣಂ ವಿಶೇಷ ಸಂಚಿಕೆಗೆ ಸಂಪಾದಿಸಿಕೊಟ್ಟಿರುವ ಅತ್ಯಧಿಕ ಜಾಹಿರಾತುಗಳ ಸಂಖ್ಯೆಯೇ ಸಾಕ್ಷಿ. ಅವರಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ದೊರೆತು ಪತ್ರಿಕೆಯ ಮುನ್ನಡೆಗೆ ಸಹಾಯಕವಾಗಲಿ ! ಎಂದು ಆಶಿಸುತ್ತ ಅವರಿಗೆ ಹಾರ್ದಿಕ ಶುಭಕಾಮನೆ ಸಲ್ಲಿಸುತ್ತಿದ್ದೇನೆ.

ಪತ್ರಿಕೆಯ ಪ್ರಕಟಣೆಯಲ್ಲಿ ಆಸಕ್ತಿ ವಹಿಸುತ್ತಿರುವ ಶ್ರೀಮಠದ ಆಡಳಿತಾಧಿಕಾರಿ **ಶ್ರೀ ಪಿ.ಎನ್.ವಿಶ್ವನಾಥನ್**ರವರು, ಪತ್ರಿಕೆಗೆ ಉತ್ತಮ ಲೇಖನ ನೀಡುತ್ತ, ವಿಶೇಷ ಸನ್ನಿವೇಶದಲ್ಲಿ ಸೂಕ್ತ ಸಲಹೆ ನೀಡುತ್ತ ಸಹಕರಿಸುತ್ತಿರುವ ಶ್ರೀ ಶ್ರೀ ಗುರುವರ್ಯರ ಆಪ್ತ ಸಹಾಯಕ, ಚಟುವಟಿಕೆಯ ತರುಣ **ವೇ. ಶ್ರೀ ರಘುನಾಥ ಶಾಸ್ತ್ರಿ** ಬೆಂಗಳೂರು ಶಾಖೆಯಲ್ಲಿ ಸ್ವಯಂಪ್ರಕಾಶದ ವಿಷಯಗಳನ್ನು ಶ್ರದ್ಧೆ - ಉತ್ಸಾಹಗಳಿಂದ ನೋಡಿಕೊಳ್ಳುತ್ತಿರುವ ಮ್ಯಾನೇಜರ್ **ಶ್ರೀ ಚಂದ್ರಶೇಖರ್,** ಬೆಂಗಳೂರಿನಲ್ಲಿ ಪ್ರತಿ ತಿಂಗಳೂ ಪತ್ರಿಕೆಗಳು ಅಂಚೆಯ ಮೂಲಕ ರವಾನೆಯಾಗಲು ಶ್ರಮಿಸುತ್ತಿರುವ ಶ್ರೀಮಠದ ಕೋ-ಆರ್ಡಿನೇಟರ್ **ಶ್ರೀ ಸಚ್ಚಿದಾನಂದ್** ಇವರೆಲ್ಲರಿಗೆ ಹಾರ್ದಿಕ ಅಭಿನಂದನೆಗಳು.

ಪ್ರತಿ ತಿಂಗಳೂ ಕಾಲಕ್ಕೆ ಸರಿಯಾಗಿ ಲೇಖನಗಳನ್ನು ಡಿಟಿಪಿ ಮಾಡಿ ಚಿತ್ರಗಳನ್ನು ಹೊಂದಿಸಿ, ಪುಟ ವಿನ್ಯಾಸ ರಚಿಸಿ ಮುದ್ರಣಕ್ಕೆ ಕಳುಹಿಸುತ್ತಿರುವ **ನೆಮ್ಮಾರು - ಕಲ್‌ಚಾವಡಿ ಶ್ರೀ ರಾಧಾಕೃಷ್ಣ**ರವರ ಕಾರ್ಯ ಶ್ರದ್ಧೆ - ಅಚ್ಚುಕಟ್ಟುತನ - ಶ್ರಮವರಿಯದ ಕಾರ್ಯನಿಷ್ಠೆ ಪತ್ರಿಕೆಯ ಮುನ್ನಡೆಗೆ ತುಂಬ ಸಹಕಾರಿಯಾಗಿದೆ. ಅವರಿಗೆ ಹಾರ್ದಿಕ ಶುಭಕಾಮನೆಗಳು.

ಈಗ ಪತ್ರಿಕೆಯ ಮುದ್ರಕರಾಗಿರುವ ಜ್ವಾಲಾಮುಖಿ ಮುದ್ರಣಾಲಯದ **ಶ್ರೀ ಶಿವಕುಮಾರ್, ಶಂಕರ್ ಮತ್ತು ರವಿಯವರು** ಸಕಾಲಕ್ಕೆ ಉತ್ತಮ ರೀತಿಯಲ್ಲಿ ಮುದ್ರಣ ಪೂರೈಸಿಕೊಡುತ್ತ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಪ್ರಾರಂಭದ ವರ್ಷಗಳಲ್ಲಿ ಪತ್ರಿಕೆಯ ವಿನ್ಯಾಸ – ಮುದ್ರಣಕಾರರಾಗಿ ಉತ್ತಮ ಸಹಕಾರ ನೀಡಿದ ಪರಿಮಳ ಮುದ್ರಣಾಲಯದ **ಶ್ರೀ ಚಿದಂಬರಯ್ಯನವರು**, ಅವರು ಚಿರಂಜೀವಿ **ಶ್ರೀ ಪ್ರಭಾಕರ್**ರವರನ್ನು ಈ ದಶಮಾನೋತ್ಸವ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ಪ್ರವೀಣ್ ಮುದ್ರಣಾಲಯ, ಕಾರ್ಕಳ, ಇವರೂ ಸಹ ಕೆಲವು ಕಾಲ ನಮ್ಮ ಪತ್ರಿಕೆಯ ಮುದ್ರಕರಾಗಿ ಸೇವೆಸಲ್ಲಿಸಿರುತ್ತಾರೆ, ಇವರೂ ಸಹ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಪತ್ರಿಕೆಯ ಚಂದಾದಾರರ ನಿರಂತರ ಸಹಕಾರದಿಂದಾಗಿಯೇ ಪತ್ರಿಕೆಯು ದಶಮಾನೋತ್ಸವ ಆಚರಿಸಿಕೊಳ್ಳುವ ಸಂಭ್ರಮದ ಘಟ್ಟಕ್ಕೆ ತಲುಪಿದೆ. ಅವರೆಲ್ಲರ ಸಹಕಾರ ನಿರಂತರವಾಗಿರಲೆಂದು ವಿನಂತಿ ಮಾಡಿಕೊಳ್ಳುತ್ತ ಹೃತ್ಪೂರ್ವಕ ಶುಭಾಶಯ ಸಹಿತ ಅಭಿನಂದನೆ ಸಲ್ಲಿಸುತ್ತೇನೆ.

ಈ ವಿಶೇಷ ಸ್ಮರಣಿಕೆಯ ಮುದ್ರಣ ಕಾರ್ಯವೊಂದು ಹೊರತು ಉಳಿದೆಲ್ಲ ರೀತಿಯಲ್ಲಿ ಸಂಚಿಕೆ ಹೊರತರಲು ಈ ಮೇಲೆ ಉಲ್ಲೇಖಿಸಿದವರೆಲ್ಲರ ಉತ್ಸಾಹಪೂರ್ಣ ಸಹಕಾರ ಕೂಡಿ ಬಂದಿದೆ. ಆಕರ್ಷಣೀಯವಾಗಿ ಈ ಸಂಚಿಕೆಯನ್ನು ಮುದ್ರಿಸಿ ಕೊಟ್ಟಿರುವ ಪ್ರಸಿದ್ಧ **ಆದಿತ್ಯ ಪ್ರಿಂಟರ್ಸ್**ನ ಉತ್ಸಾಹೀ ಯುವಕ **ಶ್ರೀ ಕೆ. ಸಿ. ಪ್ರಕಾಶ್**ರವರಿಗೆ ಹಾರ್ದಿಕ ಶುಭಕಾಮನೆಗಳು.

ವಿಶೇಷ ಸಂಚಿಕೆಗೆ ಲೇಖನ ಕಳುಹಿಸುವಂತೆ ಪರಿಪತ್ರದ ಮೂಲಕ ವಿನಂತಿ ಮಾಡಿಕೊಂಡಿದ್ದ ಲೇಖಕರು ಉಪಯುಕ್ತ ಮೌಲ್ಯಗಳ ಲೇಖನಗಳನ್ನು ನೀಡಿ ಸಹಕರಿಸಿದ್ದಾರೆ. ಹಾಗೆಯೇ ಶುಭಸಂದೇಶ ನೀಡಲು ವಿನಂತಿ ಮಾಡಿಕೊಂಡಿದ್ದ ಗಣ್ಯರು ಸಂದೇಶ ಕಳುಹಿಸಿಕೊಟ್ಟು ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ. ಅವರೆಲ್ಲರಿಗೂ ಹಾರ್ದಿಕ ಧನ್ಯವಾದ ಸಮರ್ಪಿಸುತ್ತೇನೆ.

ವಿಶೇಷ ಸಂಚಿಕೆ ಹೊರಬರಲು ಪ್ರಾಯೋಜಕರು – ಜಾಹಿರಾತುದಾರರ ಸಕ್ರಿಯ ಸಹಕಾರ ಅತ್ಯಗತ್ಯ. ಹಾಗೆಯೇ ಅವರನ್ನು ಹೊಂದಿಸಲು ಕಾರ್ಯಕರ್ತರ ಪರಿಶ್ರಮ ಬಹಳ ಮುಖ್ಯ. ಅವೆಲ್ಲ ಈ ಸಂಚಿಕೆಗೆ ಉತ್ತಮವಾಗಿ ಒದಗಿಬಂದಿದೆ. ಅವರೆಲ್ಲರಿಗೂ ಧನ್ಯವಾದಗಳು.

ಈ ಒಂದು ಮಹಾಕಾರ್ಯ ಯಶಸ್ವಿಯಾಗಲು ಸಹಕಾರ ನೀಡಿದ ಎಲ್ಲರಿಗೂ ಪರಮ ಪೂಜ್ಯ ಗುರುವರ್ಯರ ಕೃಪೆಯಿಂದ ಒಳಿತಾಗಲಿ ಎಂದು ಪ್ರಾರ್ಥಿಸುತ್ತೇನೆ.

10 ವರ್ಷದ ಹಿಂದೆ 84ನೇ ವಯಸ್ಸಿನಲ್ಲಿ ಅನಿರೀಕ್ಷಿತವಾಗಿ ನನಗೆ ಪರಮಪೂಜ್ಯ ಗುರುವರ್ಯರು ನೀಡಿದ ಈ ಸ್ವಯಂಪ್ರಕಾಶದ ಸಂಪಾದಕತ್ವದ ಟಾನಿಕ್ ಈಗ 95ನೇ ವಯಸ್ಸಿಗೆ ತಂದು ಬಿಟ್ಟಿದ್ದು, ಹೀಗೆ ಇನ್ನೆಷ್ಟು ಮುಂದೆ ಒಯ್ಯುವುದೋ? ಅದು ಗುರುಕೃಪೆ! ದೈವಾನುಗ್ರಹ.

ಕೊನೆಯದಾಗಿ **ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು** ಪತ್ರಿಕೆಯ ಪ್ರಾರಂಭದಲ್ಲಿ ಅನುಗ್ರಹಿಸಿದ ಸ್ಥಿರ ಆಶೀರ್ವಚನ ಶ್ಲೋಕದೊಂದಿಗೆ ಈ ಸಂಪಾದಕೀಯವನ್ನು ಸಂಪನ್ನಗೊಳಿಸುತ್ತಿದ್ದೇನೆ.

ಶಾರದಾ ಚಂದ್ರಮೌಳೀಶ ಕೃಪಯಾ ಧರ್ಮಬೋಧಿನೀ ।
ಸ್ವಯಂಪ್ರಕಾಶ ಸಂಜ್ಞೇಯಂ ಪತ್ರಿಕಾ ವರ್ಧತಾಂ ಚಿರಂ ॥

From the

Administrator's desk

I, P.N. Viswanathan, Administrator of Sreemath, Hariharapura and Trustee of various Trusts founded by Sri Swamiji consider it a great blessing to have this opportunity of serving Sri Swamiji and work under his guidance. I appeal to all to visit this holy land, have dharshan of Sri Swamiji and I am sure that you and your family will be immediately attracted by the 'kataksham' and blessings of His Holiness and feel the urge to participate and be part of many noble activities guided by Sri Swamiji

Sri Adishankaracharya Sharada Lakshmi Narasimha Peetam, Sree Math, is situated on the banks of River Tunga at Hariharapura in Chikmagalur Dist. Karnataka. This Dharma Peetam, established by Jagadguru Sri Adi Shankaracharya has been upholding and propagating our Sanatana Dharma despite the many upheavals and changes in our country politically, spiritually and economically. This was possible only due to the tapas shakti of the successive gurus who adorned this Peetam. The present Peetadhipathi, Srimad Jagadguru Shankaracharya Sri Swayamprakasha Sri Sachidananda Saraswathi Mahaswamiji, the 25th in the guru lineage, continues and maintains the traditions of the Peetam and also works hard to reach out to people far and wide, spreading the Sanatana Dharma. Sri Swamiji, in his utmost compassion to people and their welfare, renounced all worldly matters, including a successful career, to be initiated as Peetadhipathi in 2001.

Sthala Purana

Hariharapura, the holy land is attributed with three specialties. According to Skanda Purana, the great Daksha Maha Yajna was performed at this place and

hence this place came to be known as Yaga Bhoomi. Even today, in our exclusive Someshwara Yagashala, which was constructed according to Shastras, various homas, yajanas are performed according to traditional practices.

Legend is that Sage Agastya did tapas here worshipping the 'saligrama' of Sri Lakshminarasimha, which is worshipped in the main shrine even today. Hence this place became a Tapo Bhoomi. Later Jagadguru Sri Adishankara installed the sacred Sri Chakra and the idol of Mother Sharadamba and initiated the first Guru, Sri Swayamprakasha Sri Krishna Yogendra Saraswathi. This Peetam is hence called **Sri Adishankaracharya Sharada Lakshminarasimha Peetam**. (For more details of this Dharma Peetam, kindly visit our website: www.hariharapura.org.)

In his 10 years as Peetadhipathi, Sri Swamiji has taken upon himself as his number one duty to mitigate the suffering of people in society by guiding them in the right path. For this Sri Swamiji has initiated many trusts and activities.

Math Activities

Sri Swayamprakasha Trust, founded by Sri Swamiji on his ascension to the Peetam publishes a Kannada monthly dharmic magazine called, **Swayamprakasha**, which completes its 10 years of publication. In this fast and glaring media age, publishing and sustaining such a magazine is not an easy task. In 2003, this trust started publishing an English monthly magazine called Sadguru's Blessings in order to reach out to people far and wide. This Trust also manages the '**Anna Dana**' programme of Sreemath at Hariharapura, maintains the **Sri Lakshminivas Guest House**, a Goshala [cow shelter where about 70 cows and calves are maintained] and the **Swayamprakasha Samskrutha Veda Vidyalaya**. In addition, this Trust publishes various spiritual books, audio and video CDs, DVDs etc.

This Souvenir is brought in commemoration of completion of 10 years of Swayamprakasha, the monthly Kannada Magazine. Sri Hariharapura B.

Subramaniam, a nonagenarian, who is associated with Sreemath for over six decades, is the Editor of Swayamprakasha magazine, of which he is justifiably proud and happy. We should remember and acknowledge his contribution to Sreemath and Swayampraksha. On behalf of all of us, I extend warm and sincere regards to him and pray that blessings of Sadguru be on him and his family always.

Live Happily Foundation, focuses in three areas, Education, Health and Total well-being. It supports the poor and needy for education, manages the Saraswathi Seva Hospital, an ayurvedic clinic and dispensary and plans are on for creating and providing traditional health care and creating an ambience for practicing total well-being.

Vishwa Gayathri Upasak Parishat, a non-profit company founded by Sri Swamiji focuses on women by teaching them Devi and Gayathri Upasana. So far about 75,000 ladies in Karnataka, Tamil Nadu and Andhra Pradesh have been initiated in these Upasana.

Shiva Diksha

To bring unity and harmony among society and community and to inculcate our Sanatana Dharma, Sri Swamiji has initiated the Shiva Diksha. All people, including women, irrespective of caste, and creed are initiated in Shiva Mantra Upadesa by Sri Swamiji. So far more than seven and half lakhs people, mostly from rural and village areas from A.P, T.N and Karnataka have been initiated into this. Every year on Mahashivarathri, we arrange to send "mruthika Lingams' to all these centers, where such Shivadiksha were held, so that people could do puja with their own hands. These people are those neglected by society and to bring in minimum 'samskaras', Sri Swamiji strives hard and focuses on this Dharma Prachara and Samrakshana.

Rebuilding the ancient temple to its grand glory:

At Hariharapura, there are shrines of Sharadamba and Sri Lakshminarasimha Swami and under the able directions and guidance of Sri Swamiji the

"Rebuilding this ancient Temple to its Grand Glory", a project estimated at Rs.25 crores, is going on at excellent pace. This temple is very unique in the world, and the Yantra Prathisha done at Hariharapura is completely authentic. Noted architects and sthapathis are working to create the whole temple in stone with appropriate sculptures. A unique participation by well wishers and devotees, named as "Punya Shila Kanike" is available for devotees, in which any one who desire to contribute for one or many stones each for Rs 5001 [estimated need is about 20,000 stones] can do so and reap the blessings and benefits bestowed not only on that person, but also on their family and their future generations.

At Sreemath, Hariharapura 'anna santharpane' is a permanent feature and food is given day and night freely to all those who visit the math. To accommodate devotees visiting and staying, an aesthetic Sri Lakshminivas Guest House is available. Functions and festivals throughout the year are performed at Sreemath. The main ones being, Sharadamba Prathista day, Narasimha Jayanthi, Shankara jayanthi, Rama Navami, Hanumath Jayanthi, Sri Swamiji's Vardhanthi, Navarathri mahotsava plus usual festivals like Gowri/Ganapathi utsava, Janmashtami, Datta Jayanthi, Gita Jayanthi, aradhanas for previous Gurus, Chaturmasya Vrata etc. Situated on the serene banks of River Tunga, the calm and tranquil atmosphere of the Holy land attracts many devotees who visit, have darshan.

Music is part of life here and music festivals like Navarathri concerts, Shravana Sukra Vara Sangeetha Seva, Thyagaraja Aradhana etc happen every year. Any one who visit the place and meets our Sri Swamiji will be spellbound by the beauty of the place and compassion of His Holiness.

P.N. Viswanathan
Administrator

॥ ಸ್ವಯಂಪ್ರಕಾಶೋ ನಿತರಾಂ ವಿರಾಜತೇ ॥

ಶ್ರೀ ಶೇಷಾದ್ರಿ ಭಟ್, ಶಾರದಾರಾಧಕ, ಶ್ರೀಮಠ, ಹರಿಹರಪುರ

ಶ್ರೀ ಭಾರತೀ ತೀರ್ಥ ಮಹಾಮಹಿಮ್ನಾ
ಸ್ವಯಂಪ್ರಕಾಶೇತಿ ಸಮರ್ಥನಾಮ್ನಾ ।
ಅಧ್ಯಾತ್ಮವಿದ್ಯಾದಿ ವಿಶೇಷಯುಕ್ತಃ
ಸ್ವಯಂಪ್ರಕಾಶೋ ನಿತರಾಂ ವಿರಾಜತೇ ॥

ಶೃಂಗಗಿರಿ ಶ್ರೀ ಶ್ರೀ ಶ್ರೀ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಮಹಾಮಹಿಮೆಯಿಂದ "ಸ್ವಯಂಪ್ರಕಾಶ" ಎಂಬ ಅನ್ವರ್ಥನಾಮವನ್ನು ಪಡೆದ ಈ ಮಾಸಪತ್ರಿಕೆಯು ಅಧ್ಯಾತ್ಮ ವಿಷಯಗಳೇ ಮುಖ್ಯವಾದ ಅನೇಕ ಸಂಗತಿಗಳಿಂದ ಕೂಡಿದ್ದು ಚೆನ್ನಾಗಿ ಶೋಭಿಸುತ್ತಿದೆ.

ಜಗದ್ಗುರೋಃ ಪೂರ್ಣಕೃಪಾಕಟಾಕ್ಷಾತ್
ಶ್ರೀ ಸಚ್ಚಿದಾನಂದ ಗುರು ಪ್ರಸಾದಾತ್ ।
ಸರ್ವಾಂಗ ಸೌಂದರ್ಯ ಸುಶೋಭಮಾನಃ
ಸ್ವಯಂಪ್ರಕಾಶೋ ನಿತರಾಂ ವಿರಾಜತೇ ॥

ಜಗದ್ಗುರುಗಳ ಸಂಪೂರ್ಣ ಕೃಪಾಕಟಾಕ್ಷದಿಂದಲೂ, ಶ್ರೀ ಶ್ರೀ ಸಚ್ಚಿದಾನಂದ ಮಹಾಸ್ವಾಮಿಗಳ ರಕ್ಷಣೆಯಿಂದಲೂ ಈ ಮಾಸಿಕ ಪತ್ರಿಕೆಯು ಸರ್ವಾಂಗ ಸೌಂದರ್ಯದಿಂದ ಓದುಗರಿಗೆ ಮುದವನ್ನು ನೀಡುತ್ತಾ ವಿರಾಜಿಸುತ್ತಿದೆ.

ಪ್ರಪಂಚ ವಿಸ್ತಾರಿತ ಚಾರುಕೀರ್ತಿಃ
ದ್ವಿಪಂಚ ವರ್ಷೈರಭಿನಂದಿತೋಽಯಮ್ ।
ಬಹೂಪಯುಕ್ತಃ ಸುಮನೋಹರಶ್ಚ
ಸ್ವಯಂಪ್ರಕಾಶೋ ನಿತರಾಂ ವಿರಾಜತೇ ॥

ಹತ್ತು ವರ್ಷಗಳಿಂದ ಎತ್ತೆತ್ತಲೂ ಹರಡುತ್ತಿರುವ ಕೀರ್ತಿಯಿಂದ ಜನರ ಮೆಚ್ಚುಗೆಯನ್ನು ಗಳಿಸಿದುದರಿಂದಲೇ ಬಹೂಪಯುಕ್ತವೂ, ಅತ್ಯಂತ ರಮಣೀಯವೂ ಆದ ಈ ಸಂಚಿಕೆಯು ಸದಾ ಶೋಭಿಸುತ್ತಿದೆ.

ಅನೇಕ ವಿದ್ವಜ್ಜನಲೇಖ ಪೂರ್ಣಃ
ಬಹುಪ್ರಕಾರೈರ್ವಿಷಯೈರ್ವಿಶಿಷ್ಟಃ ।
ಆರಂಭವರ್ಷಾದ್ದಶ ವರ್ಷದೃಷ್ಟಃ
ಸ್ವಯಂಪ್ರಕಾಶೋ ನಿತರಾಂ ವಿರಾಜತೇ ॥

ದಶಮಾನೋತ್ಸವವನ್ನು ಮಾಡಿಸಿಕೊಳ್ಳಲು ಸಮರ್ಥವಾದ ಈ "ಸ್ವಯಂಪ್ರಕಾಶ" ಮಾಸಿಕ ಸಂಚಿಕೆಯು ಅನೇಕ ವಿದ್ವಾಂಸರಿಂದ ಬರೆಯಲ್ಪಟ್ಟ ವೈವಿಧ್ಯಮಯವಾದ ಲೇಖನಗಳಿಂದೊಡಗೂಡಿ ದಶಮಾನೋತ್ಸವ ವಿಶೇಷ ಸಂಚಿಕೆಯಾಗಿ ಹೊರಹೊಮ್ಮುತ್ತಾ ವಾಚಕರಿಗಾನಂದವನ್ನುಂಟು ಮಾಡುತ್ತಾ ಚೆನ್ನಾಗಿ ಬೆಳಗುತ್ತಿದೆ. ಶತಮಾನೋತ್ಸವವನ್ನೂ ವೈಭವದಿಂದ ಆಚರಿಸಲೆಂದು ಹಾರೈಸುತ್ತೇನೆ.

ಸ್ವಯಂಪ್ರಕಾಶ ಪ್ರಕಟಣೆಯ 10 ವರ್ಷ

ಋಷಿಗಳ ರಾಷ್ಟ್ರಾಭಿಮಾನ

ಮಹಾಮಹೋಪಾಧ್ಯಾಯ ವಿದ್ವಾನ್ ಎನ್ ರಂಗನಾಥ ಶರ್ಮಾ, ಬೆಂಗಳೂರು

ನಮ್ಮ ಕನ್ನಡನಾಡಿನಲ್ಲಿ ವೇದ - ಶಾಸ್ತ್ರ - ಸಂಸ್ಕೃತ - ಕನ್ನಡಗಳಲ್ಲಿ ತಲಸ್ಪರ್ಶಿಯಾದ ಪಾಂಡಿತ್ಯ, ಸರಳ - ಸೌಜನ್ಯಪೂರ್ಣ ನಡೆನುಡಿಯ, ಧೀಮಂತ ಹಿರಿಯ ವ್ಯಕ್ತಿ ಮಹಾಮಹೋಪಾಧ್ಯಾಯ ವಿದ್ವಾನ್ ಎನ್ ರಂಗನಾಥ ಶರ್ಮಾರವರು ಸ್ವಯಂಪ್ರಕಾಶದ ಪ್ರಾರಂಭದ ವರ್ಷಗಳಲ್ಲಿ ವಿದ್ವತ್ಪೂರ್ಣ ಲೇಖನಗಳನ್ನು ನೀಡಿ ಆಶೀರ್ವದಿಸುತ್ತ ಈ ವಯೋವೃದ್ಧರು ಪತ್ರಿಕೆಯ ಮೇಲಿನ ಅಭಿಮಾನದಿಂದ ಈ ವಿಚಾರಪೂರ್ಣ ಲೇಖನವನ್ನು ಬರೆದು ನಮಗೆ ಕಳುಹಿಸಿಕೊಟ್ಟಿರುವ ಪರಿಶ್ರಮಕ್ಕಾಗಿ ಅವರಿಗೆ ಗೌರವಪೂರ್ಣ ಅಭಿವಾದನ ಸಲ್ಲಿಸುತ್ತೇನೆ.

– ಸಂಪಾದಕ

ರಾಷ್ಟ್ರವೆಂಬ ಶಬ್ದವು ದೇಶ, ರಾಜ್ಯ, ಪ್ರಾಂತ ಎಂಬ ಶಬ್ದಗಳಿಗಿಂತ ಹೆಚ್ಚು ವ್ಯಾಪಕವಾದ ಅರ್ಥವನ್ನು ಕೊಡುತ್ತದೆ. ರಾಷ್ಟ್ರದಲ್ಲಿ ದೇಶ, ರಾಜ್ಯ, ಪ್ರಾಂತಗಳು ಅಡಕವಾಗುತ್ತವೆ. ಕರ್ನಾಟಕ ದೇಶ, ಕರ್ನಾಟಕ ರಾಜ್ಯ, ಕರ್ನಾಟಕ ಪ್ರಾಂತ ಎಂದು ಹೇಳಬಹುದು. ಆದರೆ ಕರ್ನಾಟಕ ರಾಷ್ಟ್ರ ಎಂದು ಕರೆಯಲಾಗುವುದಿಲ್ಲ, ಒಂದೇ ಬಗೆಯ ಸಂಸ್ಕೃತಿ, ವಿಚಾರಶೀಲತೆ, ಆಶೋತ್ತರಗಳಿಂದ ಕೂಡಿದ ಪ್ರಜಾಸಮುದಾಯವಿರುವ ಮತ್ತು ರಾಜಕೀಯವಾಗಿ ಒಂದೇ ಆಡಳಿತಕ್ಕೆ ಒಳಪಟ್ಟಿರುವ ವಿಶಾಲವಾದ ಭೂಖಂಡವನ್ನು ಸಾಮಾನ್ಯವಾಗಿ ರಾಷ್ಟ್ರ ಎನ್ನಬಹುದು. ರಾಜಕೀಯದ ಏಕತೆಗಿಂತ ಸಂಸ್ಕೃತಿ, ವಿಚಾರಗಳ ಏಕತೆಯೇ ಇಲ್ಲಿ ಮುಖ್ಯವಾದದ್ದು. ಕನ್ಯಾಕುಮಾರಿಯಿಂದ ಹಿಮಾಲಯದವರೆಗಿನ ಭೂಭಾಗವು ಒಂದು ರಾಷ್ಟ್ರವೆಂದು ಪ್ರಸಿದ್ಧವಾಗಿದೆ. ಇಲ್ಲಿ ಅನೇಕ ಭಾಷೆಗಳಿದ್ದರೂ ಜನರ ಸಂಸ್ಕೃತಿ, ವಿಚಾರ, ನಂಬಿಕೆ ಇವುಗಳಲ್ಲಿ ಏಕಸೂತ್ರತೆ ಸ್ಥಿರವಾಗಿ ನೆಲೆಸಿತ್ತು. ಇದಕ್ಕೆ ಕಾರಣ ವೇದವಾಙ್ಮಯದ ಮಹಿಮೆ ಮತ್ತು ಸಂಸ್ಕೃತ ಭಾಷೆಯ ಸಾರ್ವತ್ರಿಕ ವ್ಯಾಪ್ತಿಯೇ ಸರಿ. ಮುಖ್ಯವಾಗಿ ಭರತಖಂಡದ ವಿಭಿನ್ನ ಪ್ರಾಂತಗಳನ್ನು ಮುತ್ತುಗಳಂತೆ ಪೋಣಿಸಿ ಏಕಸೂತ್ರತೆಯಲ್ಲಿ ಶಾಶ್ವತವಾಗಿ ಹಿಡಿದಿಟ್ಟ ಕೀರ್ತಿ ಸಂಸ್ಕೃತ ಭಾಷೆಗೆ ಸಲ್ಲುತ್ತದೆ.

ಬರಿಯ ನೆಲ, ಬೆಟ್ಟ, ಕಾಡುಗಳು ಮಾತ್ರವೇ ರಾಷ್ಟ್ರವೆನಿಸುವುದಿಲ್ಲ, ಅಲ್ಲಿ ನೆಲೆಸಿರುವ ಪ್ರಜಾಸಮುದಾಯವೇ ರಾಷ್ಟ್ರದ ಜೀವಾಳ. ಒಂದೇ ಬಗೆಯ ಧ್ಯೇಯವುಳ್ಳ ಅಥವಾ ಸಮಾನ ಸಂಸ್ಕೃತಿಯುಳ್ಳ ಜನಸಮುದಾಯವು ನೆಲಸಿರುವ ಭೂಖಂಡವನ್ನು ಒಂದು ರಾಷ್ಟ್ರವೆಂದು ವ್ಯವಹರಿಸುತ್ತೇವೆ. ಜನಪದವೆಂಬ ಇನ್ನೊಂದು ಶಬ್ದವೂ ಕೂಡ ರಾಷ್ಟ್ರವೆಂಬ ಅರ್ಥದಲ್ಲಿ ಬಳಸಬಹುದಾದದ್ದು.

ವಿಷ್ಣುಪುರಾಣವು ರಾಷ್ಟ್ರಪ್ರೇಮಾತಿಶಯದಿಂದ ಹೀಗೆ ಹೇಳಿದೆ:–

ಅತ್ರ ಜನ್ಮ ಸಹಸ್ರಾಣಾಂ ಸಹಸ್ರೈರಪಿ ಸತ್ತಮ ।
ಕದಾಚಿಲ್ಲಭತೇ ಜಂತುಃ ಮಾನುಷ್ಯಂ ಪುಣ್ಯ ಸಂಚಯಾತ್ ॥
ಗಾಯಂತಿ ದೇವಾಃ ಕಿಲ ಗೀತಕಾನಿ ಧನ್ಯಾಸ್ತು ಯೇ ಭಾರತಭೂಮಿಭಾಗೇ ।
ಸ್ವರ್ಗಾಪವರ್ಗಾಸ್ಪದಮಾರ್ಗಭೂತೇ ಭವಂತಿ ಭೂಯಃ ಪುರುಷಾಃ ಸುರತ್ವಾತ್ ॥

''ಸಾವಿರಾರು ಜನ್ಮಗಳಲ್ಲಿ ಪುಣ್ಯವಿಶೇಷದಿಂದ ಯಾವುದೋ ಒಂದು ಜನ್ಮ ಮನುಷ್ಯನಿಗೆ ಈ ಭಾರತ ಭೂಮಿಯಲ್ಲಿ ಲಭಿಸುತ್ತದೆ. ಇಲ್ಲಿ ಹುಟ್ಟಿದವರೇ ಧನ್ಯರು ಎಂದು ದೇವತೆಗಳು ಹಾಡಿಹೊಗಳುತ್ತಾರೆ. ಯಾಕೆಂದರೆ ಈ ಭರತ ಖಂಡವು ಸ್ವರ್ಗ ಮತ್ತು ಮೋಕ್ಷಗಳಿಗೆ ಮಾರ್ಗವನ್ನು ತೋರಿಸುತ್ತದೆ. ದೇವತಾ ಜನ್ಮ ಕಳೆದ ನಂತರ ಅವರು ಮತ್ತೆ ಇಲ್ಲಿ ಮನುಷ್ಯರಾಗಿ ಹುಟ್ಟುತ್ತಾರೆ.

ವಿಷ್ಣು ಪುರಾಣ – 2–3–23, 24

ಮನುಷ್ಯನು ತನ್ನ ಅಭ್ಯುದಯ ನಿಃಶ್ರೇಯಸ್ಸುಗಳನ್ನು ಸಾಧಿಸಲು ಭಾರತ ಭೂಮಿಯಷ್ಟು ಪ್ರಶಸ್ತವಾದ ಸಾಧನ ಕ್ಷೇತ್ರ ಇನ್ನೊಂದಿಲ್ಲ. ಋಷಿಗಳ ರಾಷ್ಟ್ರಾಭಿಮಾನ ಎಷ್ಟು ದೊಡ್ಡದು! ಆದರೆ ಇಂದು ಭರತಖಂಡದ ಪರಿಸ್ಥಿತಿ ಹೇಗಿದೆ?

ಶ್ರೀ ಸೂಕ್ತದಲ್ಲಿ:-

''ಪ್ರಾದುರ್ಭೂತೋಽಸ್ಮಿ ರಾಷ್ಟ್ರೇಸ್ಮಿನ್ ಕೀರ್ತಿಮೃದ್ಧಿಂ ದದಾತು ಮೇ'' ''ನಾನು ಈ ಭಾರತ ರಾಷ್ಟ್ರದಲ್ಲಿ ಹುಟ್ಟಿದ್ದೇನೆ. ಕಾರಣ ನನಗೆ ಯಶಸ್ಸನ್ನೂ, ಸಮೃದ್ಧಿಯನ್ನೂ ಶ್ರೀದೇವಿಯು ಅನುಗ್ರಹಿಸಲಿ'' ಎಂಬುದಾಗಿ ಪ್ರಾರ್ಥನೆ ಕಂಡುಬರುತ್ತದೆ. ಅಥರ್ವವೇದದ ಪೃಥ್ವೀಸೂಕ್ತದಲ್ಲಿ ಮಂತ್ರದ್ರಷ್ಟಾರರಾದ ಋಷಿಗಳ ರಾಷ್ಟ್ರಾಭಿಮಾನವು ಪವಿತ್ರ ಗಂಗಾ ಪ್ರವಾಹದಂತೆ ಹರಿಯುತ್ತಿರುವುದನ್ನು ಗುರುತಿಸಬಹುದು.

''ಮಾತಾ ಭೂಮಿಃ ಪುತ್ರೋಽಹಂ ಪೃಥಿವ್ಯಾಃ'' ಎಂಬೀ ಮಂತ್ರವು ನಮ್ಮ ಮಾತೃಭೂಮಿ, ತಾಯಿನಾಡು ಎಂಬೀ ವ್ಯವಹಾರಕ್ಕೆ ಪ್ರೇರಕವಾಯಿತು. ''ಸತ್ಯ, ಋತ, ತಪಸ್ಸು, ದೀಕ್ಷೆ, ಪರಮೇಶ್ವರ, ಯಜ್ಞ - ಇವು ನಮ್ಮ ಈ ಭೂಮಿಯನ್ನು ಧರಿಸಿವೆ. ಹಿಂದೆ ಇದ್ದ ಇಂದು ಇರುವ ಮತ್ತು ಮುಂದೆ ಹುಟ್ಟುವ ಸಕಲ ಪ್ರಾಣಿವರ್ಗವನ್ನೂ ಈ ಪೃಥ್ವಿಯು ಪಾಲಿಸುತ್ತದೆ. ಇದು ವಿಸ್ತಾರವಾಗಲಿ'' ಎಂದು ಮುಂತಾಗಿ ಈ ರಾಷ್ಟ್ರದ ಬಗೆಗೆ ನಮ್ಮ ಪ್ರಾಚೀನ ಋಷಿಗಳ ಮಹೋನ್ನತವಾದ ಸಾತ್ವಿಕ ಆಶಯಗಳು ಪೃಥ್ವೀಸೂಕ್ತದಲ್ಲಿ ವ್ಯಕ್ತವಾಗಿವೆ. ಐತರೇಯ ಬ್ರಾಹ್ಮಣದಲ್ಲಿ **''ಸಮುದ್ರಪರ್ಯಂತಾಯ್ಯೆ ಪೃಥಿವ್ಯೆವ ಏಕರಾಟ್''** ಇಡೀ ಭಾರತಭೂಮಿಗೆ ಒಬ್ಬನೇ ಸಮ್ರಾಟ್ ಇರಲಿ ಎಂಬುದಾಗಿ ಹಾರೈಕೆ ಕಂಡುಬರುತ್ತದೆ. **''ಆಸಮುದ್ರಕ್ಷಿತೀಶಾನಾಂ''** ಎಂಬ ಕಾಳಿದಾಸನ ಮಾತು ಇಲ್ಲಿ ನೆನಪಾಗುತ್ತದೆ.

ರಾಜನಿರುವುದು ಪ್ರಜೆಗಳಿಗಾಗಿಯೇ ಹೊರತು ಪ್ರಜೆಗಳಿರುವುದು ರಾಜನಿಗಾಗಿ ಅಲ್ಲವೆಂಬುದನ್ನು ವಾಜಸನೇಯ ಸಂಹಿತೆಯ **''ವಿಶಿ ರಾಜಾ ಪ್ರತಿಷ್ಠಿತಃ''** ಎಂಬ ಉಕ್ತಿಯು ಸೂಚಿಸುತ್ತದೆ. ವಿಶಿ ಎಂದರೆ ಪ್ರಜೆಗಳಲ್ಲಿ ಎಂದರ್ಥ. ಪ್ರಜೆಗಳಿಂದ ಆರಿಸಲ್ಪಟ್ಟವನು ರಾಜ ಎಂದು ಅಭಿಪ್ರಾಯ. ರಾಜನಿಗೆ ಪಟ್ಟಾಭಿಷೇಕ ಮಾಡುವ ಕಾಲದಲ್ಲಿ ಋಷಿಗಳು ಅವನಿಗೆ ನೀಡುತ್ತಿದ್ದ ಉಪದೇಶ ಋಗ್ವೇದದಲ್ಲಿದೆ:- ''ಎಲೈ ರಾಜನೇ! ನಾವು ನಿನ್ನನ್ನು ರಾಜ್ಯಪೀಠದಲ್ಲಿ ಸ್ಥಾಪಿಸಿದ್ದೇವೆ. ನೀನು ಇಲ್ಲಿ ಸ್ಥಿರನಾಗಿರು, ಸಕಲ ಪ್ರಜೆಗಳೂ ನಿನ್ನನ್ನು ಬಯಸಿ ಪ್ರೀತಿಸುವಂತಾಗಲಿ, ಚಂಚಲನಾಗಬೇಡ, ನಿನ್ನಿಂದ ರಾಷ್ಟ್ರವು ಭ್ರಷ್ಟವಾಗಬಾರದು. ರಾಷ್ಟ್ರವು ನಿನ್ನಿಂದ ದೂರವಾಗದಿರಲಿ. ನೀನು ಇಲ್ಲಿಯೇ ಸ್ಥಿರನಾಗಿರು. ಪರ್ವತದಂತೆ ಅಚಲನಾಗಿರು, ಇಂದ್ರನಂತೆ ಪ್ರತಾಪಿಯಾಗಿ ರಾಷ್ಟ್ರವನ್ನು ರಕ್ಷಿಸು. ಆಕಾಶ, ಪೃಥಿವೀ, ಪರ್ವತಗಳು ಹೇಗೆ ಸ್ಥಿರವಾಗಿವೆಯೋ, ಹಾಗೆ ನೀನು ನಿನ್ನ ಕರ್ತವ್ಯದಲ್ಲಿ ಸ್ಥಿರನಾಗು''

(ಋಗ್ವೇದ 10 -17-3)

ರಾಷ್ಟ್ರವನ್ನು ಕಟ್ಟುವುದಕ್ಕಾಗಿ ಋಷಿಗಳು ವಿಶೇಷವಾಗಿ ಶ್ರಮಿಸಿದ್ದರೆಂಬುದನ್ನು **''ಭದ್ರಮಿಚ್ಛಂತ ಋಷಯಃ''** ಎಂಬೀ ಮಂತ್ರವು ತಿಳಿಸುತ್ತದೆ. ''ಆತ್ಮಜ್ಞಾನಿಗಳಾದ ಋಷಿಗಳು ಸಕಲರ ಕಲ್ಯಾಣವನ್ನು ಬಯಸತಕ್ಕವರಾಗಿ ಪೂರ್ವದಲ್ಲಿ ತಪೋದೀಕ್ಷೆಯನ್ನು ತೊಟ್ಟರು. ಆದರಿಂದ ರಾಷ್ಟ್ರದ ನಿರ್ಮಾಣವಾಯಿತು. ರಾಷ್ಟ್ರದಲ್ಲಿ ಬಲ - ಪರಾಕ್ರಮಗಳು ಹೆಚ್ಚಿದವು. ಆದ್ದರಿಂದ ಈ ರಾಷ್ಟ್ರಕ್ಕಾಗಿ ವಿದ್ವಾಂಸರು, ತಿಳಿವಳಿಕೆಯುಳ್ಳ ಪ್ರಜೆಗಳು, ನಮ್ರತೆಯಿಂದ ನಡೆದುಕೊಳ್ಳಬೇಕು'' ಈ ಮಾತನ್ನು ಇಂದು ಪ್ರಜೆಗಳೂ ವಿಶೇಷವಾಗಿ ಪ್ರಜಾಪ್ರತಿನಿಧಿಗಳು ಗಮನಿಸಬೇಕು. **''ತಪೋದೀಕ್ಷೆ''** ಎಂದರೆ ವೈಯಕ್ತಿಕವಾದ ಎಲ್ಲ ಬಗೆಯ ಸುಖವನ್ನು ತ್ಯಾಗಮಾಡಿ ಏಕನಿಷ್ಠೆಯಿಂದ ಸತತವಾಗಿ ರಾಷ್ಟ್ರಕಾಗಿ, ದೇಶಕ್ಕಾಗಿ, ಪ್ರಜೆಗಳಿಗಾಗಿ ದುಡಿಯಬೇಕಾದ ನಿಷ್ಕಾಮ ಕರ್ಮಯೋಗ. ಅದು ಜ್ಞಾನಪೂರ್ವಕವಾದದ್ದು. ತಪಃಶಬ್ದಕ್ಕೆ ಜ್ಞಾನವೆಂದೂ ಅರ್ಥವಿದೆ. ಇಂತಹ ಜ್ಞಾನಪೂರ್ವಕವಾದ, ನಿರಂತರವಾದ,

ನಿಷ್ಕಾಮಕರ್ಮಯೋಗದಿಂದಲೇ ರಾಷ್ಟ್ರನಿರ್ಮಾಣ ಸಾಧ್ಯ. ಪುರಾತನ ಋಷಿಗಳ ತಪೋದೀಕ್ಷೆಯಿಂದ ರೂಪುಗೊಂಡ ರಾಷ್ಟ್ರ ಭಾರತ. ಋಷಿಗಳು ಹಾಕಿಕೊಟ್ಟ ಕಟ್ಟುಪಾಡುಗಳಿಗೆ ಒಳಪಟ್ಟು ಧರ್ಮದಿಂದ ಪ್ರಜಾಪಾಲನೆ ಮಾಡಬೇಕೆಂಬ ಎಚ್ಚರಿಕೆಯನ್ನಿಲ್ಲಿ ಕೊಡಲಾಗಿದೆ. ಪ್ರಜಾಪ್ರತಿನಿಧಿಗಳು ಗಮನಿಸಬೇಕಾದದ್ದು ಸೂಕ್ತ.

ಒಂದೊಂದು ಕಾಲದಲ್ಲಿ ರಾಜನಾಗಲಿ ಸರಕಾರವಾಗಲಿ ಇರಲಿಲ್ಲವೆಂದೂ ಪ್ರಜೆಗಳು ಪರಸ್ಪರ ಸಹಕರಿಸಿ ಧರ್ಮದಿಂದಲೇ ತಮ್ಮನ್ನು ತಾವು ರಕ್ಷಿಸಿಕೊಳ್ಳುತ್ತಿದ್ದರೆಂದು ಮಹಾಭಾರತದಲ್ಲಿ ಹೇಳಿದೆ. ಆದರೆ ಮುಂದೆ ಜನಸಂಖ್ಯೆ ಬೆಳೆಯುತ್ತ ಹೋದಾಗ, ನಾನಾ ವಾಣಿಜ್ಯವೃತ್ತಿಗಳೂ, ಜೀವನ ಮಾರ್ಗಗಳೂ ವಿಸ್ತರಿಸಿದಾಗ, ಪರದೇಶಗಳಿಂದ ಬಂದು ಇಲ್ಲಿ ನುಗ್ಗುವ ದುಸ್ಯುಗಳ ಕಾಟ ಹೆಚ್ಚುತ್ತಿರುವಾಗ ಜನರಲ್ಲಿ ಸಂಘಟನೆಯೂ. ನಿಯಮಪಾಲನೆಯೂ ಅವಶ್ಯಕವಾಗುತ್ತವೆ. ದಸ್ಯುಗಳೊಡನೆ ಹೋರಾಡಲು ವ್ಯವಸ್ಥಿತವಾದ ಸೇನೆ ಬೇಕಾಗುತ್ತದೆ. ಆಂತರಿಕ ಭದ್ರತೆಯು ಕೇಂದ್ರೀಕೃತವಾಗಬೇಕಾಗುತ್ತದೆ. ಪ್ರಜೆಗಳು ಧರ್ಮಮಾರ್ಗದಿಂದ ಎಡವಿದಾಗ ಅದನ್ನು ತಡೆಯಲು ನಿಯಾಮಕನೊಬ್ಬನು ಬೇಕಾಗುತ್ತಾನೆ. ಇವೇ ಮೊದಲಾದ ಕಾರಣಗಳಿಂದ ರಾಷ್ಟ್ರಕ್ಕೆ ಅಧಿನಾಯಕನಾದ ರಾಜನನ್ನು ಕಾಲಕ್ರಮದಲ್ಲಿ ಗೊತ್ತುಮಾಡಿಕೊಳ್ಳಲಾಯಿತು. ಇವೆಲ್ಲ ಪ್ರಜೆಗಳ ಅಪೇಕ್ಷೆಗನುಗುಣವಾಗಿ ನಡೆದ ಪರಿವರ್ತನೆಗಳು. ಸೂಕ್ಷ್ಮದರ್ಶಿಗಳೂ, ಕಾರ್ಯದಕ್ಷರೂ, ಪ್ರಜಾ ಹಿಂತಚಿಂತಕರೂ ಆದ ಋಷಿಗಳು ಈ ಪರಿವರ್ತನೆಯ ಅವಶ್ಯಕತೆಯನ್ನು ಮನಗಂಡು ಪ್ರಜೆಗಳ ಸುಖಾಭ್ಯುದಯಗಳಿಗಾಗಿ ಮತ್ತು ಧರ್ಮದ ರಕ್ಷಣೆಗಾಗಿ ರಾಷ್ಟ್ರನಿರ್ಮಾಣದಲ್ಲಿ ಆಸಕ್ತರಾದರು. ರಾಷ್ಟ್ರದ ರಕ್ಷಣೆಗಾಗಿ ಅವರು ವಿವಿಧ ಪ್ರಯೋಗಗಳನ್ನು ಮಾಡಿದರೆಂದು ಹೇಳಬಹುದಾಗಿದೆ. ಈ ದಿಶೆಯಲ್ಲಿ ಅಂದರೆ ರಾಜ್ಯಶಾಸನದಲ್ಲಿ ಋಷಿಗಳು ನಾನಾ ಪ್ರಕಾರಗಳನ್ನು ತೂಗಿನೋಡಿ ಶಾಸನಕ್ರಮವನ್ನು ನೆಲೆಗೊಳಿಸಿದ್ದರೆನ್ನಬಹುದು.

ಯಜುರ್ವೇದದ ''**ಆ ಬ್ರಹ್ಮನ್.....................**'' ಎಂದು ಆರಂಭವಾಗುವ ಮಂತ್ರವು ''**ವೈದಿಕ ರಾಷ್ಟ್ರಗೀತೆ**''ಯೆಂದು ಗೃಹೀತವಾಗಿದೆ. ಇದರಲ್ಲಿ ವ್ಯಷ್ಟಿ - ಸಮಷ್ಟಿಯ ರೂಪದಲ್ಲಿ ಪ್ರಜೆಗಳ ಹಾಗೂ ಒಟ್ಟು ರಾಷ್ಟ್ರದ ಪುರೋಭಿವೃದ್ಧಿಯನ್ನು ಅಡಕಗೊಳಿಸಿ ಹೀಗೆ ಹಾರೈಸಲಾಗಿದೆ.

''ಹೇ ಪರಮೇಶ್ವರ! ನಮ್ಮ ರಾಷ್ಟ್ರದಲ್ಲಿ ಬ್ರಾಹ್ಮಣನು ಬ್ರಹ್ಮವರ್ಚಸ್ಸಿನಿಂದ ತೇಜಸ್ವಿಯಾಗಿರಲಿ. ರಾಜನು ಶೂರನೂ, ಶತ್ರುಗಳನ್ನು ಬಾಣಗಳಿಂದ ಹೊಡೆದುರುಳಿಸುವ ಮಹಾರಥನೂ ಆಗಿರಲಿ. ಹಸುವು ಹಾಲು ಹಿಂಡುತ್ತಿರಲಿ. ಎತ್ತು ಸಶಕ್ತವಾಗಿ ಭಾರ ಎಳೆಯಲು ಸಮರ್ಥವಾಗಿರಲಿ. ಕುದುರೆಯು ವೇಗಶಾಲಿಯಾಗಿರಲಿ. ಸ್ತ್ರೀಯು ಬುದ್ಧಿವಂತೆಯೂ, ಶೀಲವಂತೆಯೂ ಆಗಿರಲಿ. ಕುಟುಂಬದ ಯಜಮಾನ ಪುರುಷನಿಗೆ ರಥದಲ್ಲಿ ಕುಳಿತು ಜಯಗಳಿಸುವಂತಹ ಹಾಗೂ ಸಭೆಗಳಲ್ಲಿ ಸಂಮಾನ್ಯನಾಗುವಂತಹ ಯುವಕರಾದ ವೀರಪುತ್ರರಿರಲಿ. ನಮ್ಮ ರಾಷ್ಟ್ರದಲ್ಲಿ ಮೋಡವು ಕಾಲಕಾಲಕ್ಕೆ ಮಳೆ ಸುರಿಸಲಿ. ಓಷಧಿಗಳು ಕಾಲಕಾಲಕ್ಕೆ ಬೆಳೆ ಕೊಡುತ್ತಿರಲಿ. ನಮ್ಮೆಲ್ಲರ ಯೋಗಕ್ಷೇಮಗಳು ಸರಿಯಾಗಿ ನಡೆಯಲಿ''

ಈ ಪ್ರಕಾರವಾಗಿ ಋಷಿಗಳು ಲೌಕಿಕ ದೃಷ್ಟಿಯಿಂದ ರಾಷ್ಟ್ರದ ಯೋಗಕ್ಷೇಮಗಳನ್ನು ಬಯಸುತ್ತಿದ್ದರೆಂಬುದು ನಾವು ಹೆಮ್ಮೆ ಪಡಬೇಕಾದ ವಿಷಯವಾಗಿದೆ. ಋಷಿಗಳಿಗೂ ಸಹ ಲೋಕದೃಷ್ಟಿ ಇತ್ತೆಂದು ಸ್ಪಷ್ಟವಾಗುತ್ತದೆ. ವೈದ್ಯಶಾಸ್ತ್ರ ಶಿಲ್ಪಶಾಸ್ತ್ರ, ಸೂಪಶಾಸ್ತ್ರ ಮೊದಲಾದ ಜನಸಾಮಾನ್ಯರೆಲ್ಲರಿಗೂ ಅವಶ್ಯವಾಗಿ ಬೇಕಾದ ಜೀವನೋಪಯೋಗಿ ವಿದ್ಯೆಗಳನ್ನು ಬರೆದಿಟ್ಟು ಲೋಕಕ್ಕೆ ಉಪಕಾರ ಮಾಡಿದ್ದಾರೆ. ಚಾಣಕ್ಯನ ರಾಜನೀತಿ, ಶುಕ್ರನ ನೀತಿಸಾರ ಮುಂತಾದ ಗ್ರಂಥಗಳು ಲೋಕವನ್ನೇ ಉದ್ದೇಶಿಸಿ ಬರೆದವುಗಳಾಗಿವೆ. ಆದ್ದರಿಂದ ಋಷಿಗಳು ಅಧ್ಯಾತ್ಮ ಮಾರ್ಗವನ್ನು ಅವಲಂಬಿಸಿದವರಾದರೂ ಲೋಕಹಿತವನ್ನು ಕಡೆಗಣಿಸಿದವರಲ್ಲವೆಂಬುದನ್ನು ನಾವು ಗ್ರಹಿಸಬೇಕು.

ಸುಸಂಸ್ಕೃತ ಸಮಾಜ ಇಂದಿನ ಅಗತ್ಯ

ಡಾ|| ಎಂ.ಎಲ್ ನರಸಿಂಹ ಮೂರ್ತಿ, ಮಿಗನಕಲ್ಲು (ತಿರುಪತಿ)

ಶ್ರೀಯುತರು ಶೃಂಗೇರಿ ಶ್ರೀ ಜಗದ್ಗುರು ಸಂಸ್ಥಾನ - ಬೆಂಗಳೂರು ಶ್ರೀ ಶಂಕರಮಠಗಳಲ್ಲಿ ವೇದಾಂತದ ಅಧ್ಯಯನ ಮಾಡಿ ವಿದ್ವತ್ಪದವಿ ಪಡೆದು ನಂತರ ಪಿ.ಹೆಚ್.ಡಿ ಮಾಡಿ ಡಾಕ್ಟರೇಟ್ ಪಡೆದ ವಿದ್ವನ್ಮಣಿಗಳು ಪ್ರಸ್ತುತ ತಿರುಪತಿಯ ಕೇಂದ್ರೀಯ ಸಂಸ್ಕೃತ ಪ್ರತಿಷ್ಠಾನದಲ್ಲಿ ಪ್ರಾಧ್ಯಾಪಕರಾಗಿರುವ, ಶ್ರೀಯುತರು ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿ ಉತ್ತಮ ವಾಗ್ಮಿಗಳು, ಬರಹಗಾರರೂ ಆಗಿದ್ದಾರೆ. ತಜ್ಞ ಅಧ್ಯಾಪಕರಾಗಿ ವಿಚಾರಪೂರ್ಣ ವಿಷಯದ ಲೇಖನ ನೀಡಿರುವ ಅವರಿಗೆ ಹಾರ್ದಿಕವಂದನೆಗಳು.

– ಸಂಪಾದಕ

ಪ್ರಾಣಿಗಳೆಲ್ಲೆಲ್ಲಾ ಮನುಷ್ಯ ಜನ್ಮವೇ ಶ್ರೇಷ್ಠವೆನ್ನುತ್ತೇವೆ. ಏಕೆಂದರೆ ಮನುಷ್ಯನಲ್ಲಿ ವಿವೇಚನಾ ಶಕ್ತಿ ಇರುವುದರಿಂದ. ಇದರಿಂದ ಮನುಷ್ಯನಾದವನು ಕರ್ತವ್ಯಾಕರ್ತವ್ಯಗಳನ್ನು ನಿರ್ಣಯಿಸುವ ಸಾಮರ್ಥ್ಯ ಹೊಂದಿರುತ್ತಾನೆ. ಮನುಷ್ಯನು ಸಂಘಜೀವಿ. ಅವನ ನಡೆ ನುಡಿಗಳೆಲ್ಲಾ ಸಮಾಜದಿಂದ ಪ್ರಭಾವಿತವಾಗಿರುತ್ತವೆ. ಸಮಾಜ ಮಧ್ಯದಲ್ಲೇ ಬೆಳೆದುಬಂದ ಪ್ರತಿಯೊಬ್ಬ ಮನುಷ್ಯನಿಗೂ ಹಾಗೇ ಸಾಮಾಜಿಕ ಜವಾಬ್ದಾರಿಯೂ ಇರಲೇಬೇಕಾಗುತ್ತದೆ. ಈ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಿದಾಗಲೇ ನಾವು ಸಮಾಜದ ಋಣವನ್ನು ತೀರಿಸಿದಂತಾಗುತ್ತದೆ. ಹಾಗಾಗಿ ಸಾಮಾಜಿಕ ಜವಾಬ್ದಾರಿಯ ತಿಳುವಳಿಕೆ ಪ್ರತಿಯೊಬ್ಬ ಮನುಷ್ಯನಿಗೂ ಇರಬೇಕಾಗುತ್ತದೆ. ಇಂತಹ ತಿಳುವಳಿಕೆ ವಿದ್ಯೆಯಿಂದಾಗಲೀ, ಸಂಸ್ಕಾರದಿಂದಾಗಲೀ ಬರಬೇಕು. ವಿದ್ಯೆಯೆಂದರೆ ಯಾವುದೋ ಒಂದೆರಡು ವಿಷಯಗಳ ಅಧ್ಯಯನದಿಂದ ಬರುವ ಜ್ಞಾನವಲ್ಲ, ವಿಭಿನ್ನ ವಿಷಯಗಳ ಜ್ಞಾನವನ್ನೇ ವಿಜ್ಞಾನವೆನ್ನುವುದು. ಜ್ಞಾನವೆಂದರೆ ಆಧ್ಯಾತ್ಮಿಕಜ್ಞಾನ. ಅರ್ಥಾತ್ ಆತ್ಮಜ್ಞಾನ. ಅಂದರೆ ವೈಷಯಿಕ ಜ್ಞಾನವು ಕಿಂಚಿತ್ತಾದರೂ ಆಧ್ಯಾತ್ಮಿಕಜ್ಞಾನದಿಂದ ಕೂಡಿದಾಗಲೇ ಅದು ಸಾರ್ಥಕವಾಗುವುದು. ಇಲ್ಲವಾದಲ್ಲಿ ಆ ವೈಷಯಿಕ ಜ್ಞಾನವು ಅಷ್ಟೊಂದು ಸಮಾಜೋನ್ಮುಖಿಯಾಗಲಾರದು. ಇಂತಹ ಆಧ್ಯಾತ್ಮಿಕ ಜ್ಞಾನದಿಂದ ಕೂಡಿದಾಗ ಅದು ವ್ಯಕ್ತಿಯಲ್ಲಿ ಒಂದು ವಿಶಿಷ್ಟರೀತಿಯ ಸಂಸ್ಕಾರವನ್ನುಂಟು ಮಾಡುತ್ತದೆ. ಅದರಿಂದ ವ್ಯಕ್ತಿಯು ಸುಸಂಸ್ಕೃತನಾಗುತ್ತಾನೆ. ಇಂತಹ ಸಂಸ್ಕಾರವನ್ನು ನೀಡದಿದ್ದಲ್ಲಿ ಅಂತಹ ಜ್ಞಾನ ಜ್ಞಾನವೇ ಅಲ್ಲ. ಜ್ಞಾನವಿದ್ದೂ ಸಂಸ್ಕಾರಹೀನನಿಗೆ ಸಮಾಜದಲ್ಲಿ ಬೆಲೆ ಇಲ್ಲ. ಜ್ಞಾನವಿಲ್ಲದಿದ್ದರೂ ಸಂಸ್ಕಾರವಂತನಾಗಿದ್ದಲ್ಲಿ ಅಂತಹವನಿಗೆ ಸಮಾಜದಲ್ಲಿ ಖಂಡಿತ ಮನ್ನಣೆ ಇದೆ. ಸುಸಂಸ್ಕೃತರ ಸಮಾಜವನ್ನು ಕಟ್ಟುವುದು ಪ್ರತಿಯೊಬ್ಬರ ಜವಾಬ್ದಾರಿಯೂ ಹೌದು. ಇಂತಹ ಸಮಾಜವನ್ನು ನಿರ್ಮಾಣ ಮಾಡುವ ಕಾರ್ಯ ಪ್ರತಿಯೊಬ್ಬನೂ ತನ್ನ ಮನೆಯಿಂದಲೇ ಆರಂಭಿಸಬೇಕು. ಹಾಗಾಗಬೇಕಾದಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಯಲ್ಲಿ ತಮ್ಮ ಮಕ್ಕಳು ಸುಸಂಸ್ಕೃತರಾಗಬೇಕಾದರೆ ಏನೆಲ್ಲಾ ಬೇಕೋ ಅದನ್ನು ಬಾಲ್ಯದಲ್ಲಿಯೇ ನೀಡಬೇಕು. ಮುಖ್ಯವಾಗಿ ಬಾಲ್ಯದಲ್ಲಿ ನೀಡಿದ ಸಂಸ್ಕಾರ ಯಾವತ್ತೂ ಭದ್ರವಾಗಿರುತ್ತದೆ. ಮಕ್ಕಳಿಗೆ ಪ್ರಧಾನವಾಗಿ ನ್ಯಾಯ, ನೀತಿ, ಧರ್ಮ, ದಯೆ, ಅಹಿಂಸೆ, ಸತ್ಯ ಮತ್ತು ಪಾಪಭೀತಿ ಇವುಗಳನ್ನು ಮನದಟ್ಟಾಗುವಂತೆ ತಿಳಿಸಬೇಕು. ಇವೆಲ್ಲವೂ ಜಗತ್ತಿನಲ್ಲಿರುವ ಪ್ರತಿಯೊಬ್ಬ ಮಾನವನಿಗೂ ಸಾರ್ವಕಾಲಿಕವಾಗಿಯೂ ಉಪಯೋಗವಾಗುವಂತಹವು. ಇವುಗಳ ಬೋಧನೆಗಾಗಿ ಯಾವುದೇ ಗ್ರಂಥಗಳ ಆಧಾರವನ್ನು ಪಡೆಯಬಹುದು. ಅದು ಹಿಂದೂ ಧರ್ಮದಲ್ಲಿರಲಿ, ಇಸ್ಲಾಂ ಧರ್ಮದಲ್ಲಿರಲಿ, ಕ್ರೈಸ್ತ ಧರ್ಮದಲ್ಲಿರಲಿ, ಫಾರಸಿ ಧರ್ಮದಲ್ಲಿರಲಿ, ಯಹೂದಿ ಧರ್ಮದಲ್ಲಿರಲಿ ಅಥವಾ ಬೌದ್ಧಧರ್ಮದಲ್ಲಿರಲಿ ಎಲ್ಲವೂ ಗ್ರಾಹ್ಯವೇ. ಒಳ್ಳೆಯದು ಎಲ್ಲಿದ್ದರೂ ಅದು ಗ್ರಾಹ್ಯವೇ. ''**ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ**'' ಎಂಬ ಋಮಂತ್ರವು ಇದನ್ನೇ ಹೇಳುತ್ತದೆ. ಅದಕ್ಕಾಗಿಯೇ ಹಿಂದೆಲ್ಲಾ ಇಂತಹ ವಿಚಾರಗಳನ್ನೆಲ್ಲ ಬೋಧಿಸುವಂತಹ ರಾಮಾಯಣ, ಮಹಾಭಾರತಾದಿಗಳ ಆಖ್ಯಾನಗಳನ್ನೆಲ್ಲ ಮಕ್ಕಳ ಪಠ್ಯಪುಸ್ತಕಗಳಲ್ಲಿ ಸೇರಿಸಿ ಬೋಧಿಸುತ್ತಿದ್ದರು. ಬರಬರುತ್ತಾ ಕ್ರಮೇಣ ಅವುಗಳನ್ನೆಲ್ಲ ''ಇವೆಲ್ಲ ಹಿಂದೂ ಧರ್ಮಕ್ಕೆ ಸೇರಿದವು, ನಮ್ಮದು ಸೆಕ್ಯುಲರ್ ರಾಷ್ಟ್ರ, ಇವೆಲ್ಲ ಇರಬಾರದು'' ಎಂಬ

ಪೂರ್ವಾಗ್ರಹ ಪೀಡಿತರಿಂದ ಪೀಡಿತರಾಗಿ ಅದನ್ನೆಲ್ಲ ತೊಲಗಿಸಿದರು. ಹೋಗಲಿ! ರಾಮಾಯಣ, ಮಹಾಭಾರತಾದಿಗಳೆಲ್ಲ ಬೇಡ. ಆದರೆ ನೈತಿಕ ಶಿಕ್ಷಣವನ್ನು ಮಕ್ಕಳಿಗೆ ನೀಡಲೇನು ಅಡ್ಡಿ? ಮಕ್ಕಳಿಗೆ ಮನೆಯಲ್ಲಿ ಮತ್ತು ಶಾಲೆಯಲ್ಲಿ ತಪ್ಪು ಒಪ್ಪುಗಳನ್ನು ತಿಳಿಸಿಹೇಳಬೇಕಲ್ಲವೇ? ಇಂದು ದೃಶ್ಯಮಾಧ್ಯಮವು ಎಲ್ಲಕ್ಕಿಂತ ಹೆಚ್ಚು ಪ್ರಭಾವಶಾಲಿಯಾಗಿ ಬೆಳೆಯುತ್ತಿದೆ. ಮಕ್ಕಳು ಹೆಚ್ಚು ಹೊತ್ತು ಟಿವಿಗಳ ಮುಂದೆ ಕಾಲಕಳೆಯುತ್ತಾರೆ. ಆ ಟಿವಿ ಕಾರ್ಯಕ್ರಮಗಳೋ ದೇವರಿಗೇ ಪ್ರೀತಿ, ರಿಯಾಲಿಟಿ ಶೋಗಳ ಹೆಸರಿನಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಹೆಣ್ಣು – ಗಂಡುಗಳ ಅಸಹ್ಯಕರವಾದ ಪ್ರದರ್ಶನಗಳನ್ನು ನಡೆಸುವ ಅಂತಹ ಕಾರ್ಯಕ್ರಮ ಪ್ರಾಯೋಜಕರಿಗೆ ಸಾಮಾಜಿಕ ಜವಾಬ್ದಾರಿ ಬೇಡವೇ? ಅಂತಹ ಅಸಹ್ಯ ಪ್ರದರ್ಶನಗಳಿಗೆ ಅವರಾದರೂ ತಮ್ಮ ಅಕ್ಕ – ತಂಗಿ – ಹೆಂಡತಿ ಮುಂತಾದವರನ್ನು ಸೇರಿಸುವರೇ? ಇಲ್ಲ (ಮುಂದೆ ಅಂತಹ ದಿನ ಬಂದರೂ ಬರಬಹುದೇನೋ). ಸಮಾಜಕ್ಕೆ ಪೂರಕ ಹಾಗೂ ಪೋಷಕವಾಗುವ ಕಾರ್ಯಕ್ರಮಗಳು ಬರಬೇಕು. ದೃಶ್ಯ ಮಾಧ್ಯಮವು ಸಮಾಜಕ್ಕೆ ಶಿಕ್ಷಣ ನೀಡುವಲ್ಲಿ ಪ್ರಬಲ ಸಾಧನ. ಅದನ್ನು ಜಾಣ್ಮೆಯಿಂದ ಉಪಯೋಗಿಸಬೇಕು. ಇಲ್ಲವಾದಲ್ಲಿ ಅನರ್ಥವಾಗುವುದು ನಿಶ್ಚಿತ. ಹಾಗೆಂದು ದೃಶ್ಯ ಮಾಧ್ಯಮದ ಎಲ್ಲಾ ಕಾರ್ಯಕ್ರಮಗಳು ಸರಿ ಇಲ್ಲವೆನ್ನುತ್ತಿಲ್ಲ. ಕೆಲವೊಂದು ಅತಿರೇಕದ ಕಾರ್ಯಕ್ರಮಗಳು ಹಾಗಿವೆ. ಅಪರಾಧಿ ಪ್ರಪಂಚದ ಘಟನೆಗಳನ್ನು ತೋರಿಸೋದಾದರೂ ಯಾತಕ್ಕೆ? ಇದನ್ನು ನೋಡಿದ ಎಳೆಯ ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮವಾಗುವುದಿಲ್ಲವೇ? ಇತ್ತೀಚೆಗೆ ಶಾಲೆಗಳಲ್ಲಿ ಭಗವದ್ಗೀತೆಯನ್ನು ಹೇಳಿಕೊಡುವ ವಿಚಾರದಲ್ಲಿ ಸರ್ಕಾರದ ಸುತ್ತೋಲೆಯನ್ನಿಟ್ಟುಕೊಂಡು ದೊಡ್ಡ ರಾದ್ಧಾಂತವನ್ನೇ ಮಾಡಿದರು. ಪ್ರಸಾರ ಮಾಧ್ಯಮದಲ್ಲಿ ಅನೇಕ ವಿಧವಾದ ವಾದಗಳೂ ಮಂಡನೆಯಾದವು. ಆದರೆ ಭಗವದ್ಗೀತೆ ಹಿಂದೂಗಳ ಗ್ರಂಥ ಎಂಬ ಒಂದು ಕಾರಣಕ್ಕಾಗಿ ವೋಟು ಬ್ಯಾಂಕಿನ ರಾಜಕೀಯದವರು ಅದನ್ನು ವಿರೋಧಿಸಿದರು. ಅದರಲ್ಲಿ ಹೇಳಿರುವ ವಿಚಾರಗಳು ಯಾವೊಂದು ಧರ್ಮದವರಿಗೂ ಸೀಮಿತವಾಗದೆ ಮಾನವ ಮಾತ್ರನಿಗೆ ಹೇಳಿದ ನೀತಿ. ಅದನ್ನೂ ಬೇಡ ಎಂದಾದರೆ ಭಗವದ್ಗೀತೆಗೆ ನಷ್ಟವಿಲ್ಲ, ಶ್ರೀಕೃಷ್ಣನಿಗೂ ನಷ್ಟವಿಲ್ಲ, ನಷ್ಟವಾಗುವುದಾದರೆ ಅದು ನಮಗೇ. ಇಂತಹ ಅರ್ಥಹೀನ ವಿರೋಧವನ್ನು ಕಂಡಾಗ ನಮ್ಮ ದೇಶವನ್ನು ಉದ್ಧಾರ ಮಾಡಲು ಇನ್ನೊಮ್ಮೆ ಭಗವಂತನೇ ಅವತರಿಸಿಬರಬೇಕೇನೋ ಅನ್ನಿಸುತ್ತೆ. ಇಂದು ದೇಶದ ಎಲ್ಲಾ ಕಡೆಯಲ್ಲೂ, ಎಲ್ಲಾ ಕ್ಷೇತ್ರಗಳಲ್ಲೂ ಭ್ರಷ್ಟಾಚಾರ, ಅನೀತಿ, ಅಧರ್ಮ, ಅಪ್ರಾಮಾಣಿಕತೆ ಹಿಂಸೆಯ ತಾಂಡವವನ್ನು ಕಾಣಬಹುದು. ಇದಕ್ಕೆಲ್ಲಾ ಕಾರಣ ನೈತಿಕ ಶಿಕ್ಷಣದ ಕೊರತೆ. ಸ್ವಾತಂತ್ರ್ಯ ಬಂದು ಆರು ದಶಕಗಳೇ ಸಂದರೂ ನಮಗೊಂದು ಸರಿಯಾದ ಶಿಕ್ಷಣದ ನೀತಿಯಿಲ್ಲ. ಪ್ರತಿಯೊಬ್ಬನಿಗೂ ಸರ್ಕಾರದಿಂದಲೇ ಹತ್ತನೇ ತರಗತಿಯವರೆಗೆ ಉಚಿತ ಕಡ್ಡಾಯ ಶಿಕ್ಷಣವು ಸಿಗುವಂತಾಗಬೇಕು. ಪ್ರಾಥಮಿಕ ಶಿಕ್ಷಣವನ್ನು ಖಾಸಗಿಯವರಿಗೆ ಕೊಡುವುದು ಸರಿಯಲ್ಲ. ಮಕ್ಕಳಿಗೆ ಶಿಕ್ಷಣದಲ್ಲಿ ನ್ಯಾಯ, ನೀತಿ, ಅಹಿಂಸೆ, ಪ್ರಾಮಾಣಿಕತೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ತಿಳಿಸುವಂತಹ ವಿಷಯಗಳನ್ನು ಧರ್ಮಾತೀತವಾಗಿ ತಿಳಿಸುವಂತಹ ಪಠ್ಯಪುಸ್ತಕಗಳಿರಬೇಕು. ಆಗ ಮಾತ್ರ ಸುಂದರ ಭ್ರಷ್ಟ ಮುಕ್ತ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯ. ಇಲ್ಲವಾದಲ್ಲಿ ತಿರೋಗಾಮಿಯಾದ ಇಂದಿನ ಮಾಧ್ಯಮಗಳ ಕಾರ್ಯಕ್ರಮಗಳಿಂದ ಇಂದಿನವರೆಗಿದ್ದ ಸಾಮಾಜಿಕ ಮೌಲ್ಯಗಳೂ, ಸಂಪ್ರದಾಯಗಳೂ ಹಾಳಾಗಿ ಭಾರತೀಯರಲ್ಲಿ ಭಾರತೀಯ ಸಂಸ್ಕೃತಿ, ಭಾರತೀಯತೆ ಹಾಳಾಗಿ ಪಾಶ್ಚಾತ್ಯ ಸಂಸ್ಕೃತಿಯ ವಿಕಟಾಟ್ಟಹಾಸವಾಗುವುದರಲ್ಲಿ ಸಂಶಯವಿಲ್ಲ. ಅರ್ಥಕಾಮ ಪ್ರಧಾನವಾದ ಸಮಾಜವನ್ನೇ ನಾವಿಂದು ನೋಡುತ್ತಿದ್ದೇವೆ. ಈ ಅರ್ಥಕಾಮಗಳು ನೈತಿಕ ತಳಹದಿಯನ್ನು ಹೊಂದಿದಾಗ ಮಾತ್ರ ಅವು ಸಮಾಜಕ್ಕೆ ಪೂರಕವಾಗಬಲ್ಲವು. ಇಲ್ಲವಾದಲ್ಲಿ ಮಾರಕವೇ ಸರಿ. ಎಲ್ಲ ಕಾಲಕ್ಕೂ ನಿಲ್ಲುವಂತಹ ಧರ್ಮವೇ ನಿಜವಾದ ಧರ್ಮ. ಅಂತಹ ಧರ್ಮದ ತಳಹದಿ ಇಂದಿನ ಅಗತ್ಯ. ಧರ್ಮವನ್ನು ಬಿಟ್ಟರೆ ಉಳಿಗಾಲವಿಲ್ಲ. ಧಾರ್ಮಿಕತೆ ಎಂದರೆ ಛಾಂದಸವಾದವಲ್ಲ. ಬದಲಾಗುವ ಕಾಲಕ್ಕೆ ತಕ್ಕಂತೆ ತನ್ನಲ್ಲೂ ಬದಲಾವಣೆಯಿಂದ ಸಕಲ ಸಮಾಜಕ್ಕೂ ಪೂರಕವಾದ ರೀತಿಯಲ್ಲಿ ಯಾವುದು, ಯಾವಾಗಲೂ ಇರುವಂತೆ ತನ್ನನ್ನು ಕಾಪಾಡಿಕೊಂಡು ಸಮಾಜಕ್ಕೆ ತಳಹದಿಯಾಗುವುದೋ ಅದೇ ಧರ್ಮ ಅಂತಹ ಧಾರ್ಮಿಕ, ನೈತಿಕ ತಳಹದಿಯ ಮೇಲೆ ಅರ್ಥಕಾಮಗಳಿಗೂ ಅವಕಾಶ ಇರುವಂತಹ ಆರೋಗ್ಯಕರ ಸಮಾಜದ ನಿರ್ಮಾಣ ಇಂದಿನ ಅಗತ್ಯ. ಅದಕ್ಕಾಗಿ ಎಲ್ಲರೂ ಶ್ರಮಿಸಬೇಕಾದುದು ಅತ್ಯಗತ್ಯ.

ಸ್ವಯಂಪ್ರಕಾಶ ಪ್ರಕಟಣೆಯ 10 ವರ್ಷ

ಸ್ವಯಂಪ್ರಕಾಶ

ಶ್ರೀ ಎಸ್ ರಾಮಚಂದ್ರ ಶಾಸ್ತ್ರಿ

ತ್ರಿಭಾಷಾ ಪಂಡಿತರಾದ ಪ್ರೊ.ಎಸ್.ರಾಮಚಂದ್ರ ಶಾಸ್ತ್ರಿಗಳು ಶಿಕ್ಷಣ ಕ್ಷೇತ್ರದಲ್ಲಿ ಪ್ರಾಂಶುಪಾಲರಾಗಿದ್ದವರು. ಶೃಂಗೇರಿ ಜಗದ್ಗುರು ಪೀಠದ 'ಶ್ರೀ ಶಂಕರ ಕೃಪಾ' ಮಾಸಿಕದ ಸಂಪಾದಕರಾಗಿ ಕೆಲಸ ನಿರ್ವಹಿಸಿದವರು. ಸಾಹಿತ್ಯರಚನೆಯಲ್ಲಿ ಸಿದ್ಧಹಸ್ತರು. ನಮ್ಮ ಸ್ವಯಂಪ್ರಕಾಶದ ಖಾಯಂ ಬರಹಗಾರರಾಗಿರುವ ಶ್ರೀಯುತರು ಸ್ವಯಂಪ್ರಕಾಶ ಅಂತರಾತ್ಮವನ್ನು ನಿರೂಪಿಸುವ ಈ ಲೇಖನ ನೀಡಿ ಸಹಕರಿಸಿ ಅಭಿನಂದನೆಗೆ ಪಾತ್ರರಾಗಿದ್ದಾರೆ.

– ಸಂಪಾದಕ

ಹರಿಹರಪುರದ ಶ್ರೀ ಆದಿಶಂಕರಾಚಾರ್ಯ ಶ್ರೀ ಶಾರದಾ ಲಕ್ಷ್ಮೀನೃಸಿಂಹ ಪೀಠದ ವತಿಯಿಂದ ಪ್ರಕಾಶಿಸುತ್ತಿರುವ 'ಸ್ವಯಂಪ್ರಕಾಶ' ಧಾರ್ಮಿಕ ಮಾಸಪತ್ರಿಕೆಗೆ ದಶಮಾನೋತ್ಸವದ ಸಂಭ್ರಮ. ಈ ಪತ್ರಿಕೆಗೆ ಕಾರಣೀಭೂತರಾದ ಶ್ರೀಮಠದ ಪೂಜ್ಯ ಶ್ರೀ ಸ್ವಾಮಿಗಳವರ ತಪಸ್ಸಿನ ಫಲದಿಂದ ಪತ್ರಿಕೆ ಸರ್ವಾಂಗ ಸುಂದರವಾಗಿ ಹೊರಬರುತ್ತಿದೆ. ಬಹುತೇಕ ಧಾರ್ಮಿಕ ವಿಷಯಗಳನ್ನೊಳಗೊಂಡ ಈ ಪತ್ರಿಕೆಯು ತನ್ನ ದಶಮಾನೋತ್ಸವವನ್ನು ಆಚರಿಸುತ್ತಿರುವುದು ಅತ್ಯಂತ ಸಂತಸದ ವಿಷಯ. ಪತ್ರಿಕೆಯಲ್ಲಿ ಬರುತ್ತಿರುವ ಲೇಖನಗಳೆಲ್ಲವೂ ಅತ್ಯಂತ ಉಪಯುಕ್ತವಾಗಿರುವುದು ಮಾತ್ರವಲ್ಲದೆ ನಮ್ಮ ಸನಾತನ ಧರ್ಮದ ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೆ. ಈ ಪತ್ರಿಕೆಯು ಇದೇ ರೀತಿ ಮುಂದುವರಿಯಲಿ. "**ಚಿರಮಭಿವರ್ಧತಾಮ್**".

ಈಗಿನ ಕಾಲದಲ್ಲಂತೂ ಮೌಲ್ಯಗಳನ್ನು ಕುರಿತು ಮಾತನಾಡುವುದು ಒಂದು ರೀತಿಯ Fashion ಆಗಿದೆ. ಮೌಲ್ಯಗಳನ್ನು ತಾವು ಅನುಸರಿಸಲಿ ಅಥವಾ ಬಿಡಲಿ, ಇನ್ನೊಬ್ಬರಿಗೆ ಉಪದೇಶವನ್ನಂತೂ ಮಾಡುತ್ತಾರೆ. ಮೌಲ್ಯಾಧಾರಿತ ರಾಜಕಾರಣ, ಇತ್ಯಾದಿಗಳಂತೂ ಕ್ಲೀಷೆಯ ಪದಗಳಾಗಿ ಹೋಗಿವೆ. ನಮ್ಮ ಸನಾತನ ಧರ್ಮದ ಮೌಲ್ಯಗಳನ್ನಂತೂ ನಮ್ಮ ಜನ ಸರಿಯಾಗಿ ಅರ್ಥಮಾಡಿಕೊಂಡಂತೆ ಕಾಣುವುದಿಲ್ಲ, ಇವರಿಗೆ ಧರ್ಮ ಎಂಬ ಪದದ ವಿಷಯದಲ್ಲಿ, ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿರುವ ಕಾರಣದಿಂದ ಒಂದು ರೀತಿಯ ಅಲರ್ಜಿ. ಇದಕ್ಕೆ ಮುಖ್ಯ ಕಾರಣ Secular ಎಂಬ ಪದವನ್ನು "ಧರ್ಮಾತೀತ" ಎಂಬುದಾಗಿ ಭಾಷಾಂತರ ಮಾಡಿದುದರ ಫಲ. ವಾಸ್ತವವಾಗಿ "ಜಾತ್ಯಾತೀತ" ಎಂದು ಭಾಷಾಂತರ ವಾಗಬೇಕು. ಧರ್ಮವನ್ನು ಉಪೇಕ್ಷೆಮಾಡಿ ಸಮಾಜ ಸುವ್ಯವಸ್ಥಿತವಾಗಿರುವುದಾದರೂ ಹೇಗೆ? ನಮ್ಮ ಸನಾತನ ಧರ್ಮದ ಮೌಲ್ಯಗಳನ್ನು ನಮ್ಮ ಕವಿಗಳು ಬಹುಸುಂದರವಾಗಿ ನಿರೂಪಣೆ ಮಾಡಿದ್ದಾರೆ. ಅವರು ಹೇಳಿರುವ ಮಾತುಗಳು ಸ್ಪಷ್ಟವಾಗಿ ಮೌಲ್ಯಗಳನ್ನು ಸೂಚಿಸುತ್ತವೆ ಹಾಗೂ ಸ್ವಯಂಪ್ರಕಾಶವಾಗಿವೆ. ಅಂತಹ ಮೂರು ಪ್ರಸಂಗಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಮಹಾಕವಿ ಕಾಳಿದಾಸನ ಶಾಕುಂತಲಾ ನಾಟಕದಲ್ಲಿ ಬರುವ ಪ್ರಸಂಗ : ಬೇಟೆಯನ್ನಾಡುತ್ತಾ ಸುತ್ತುತ್ತಿದ್ದ ಚಕ್ರವರ್ತಿ ದುಷ್ಯಂತನು ತನಗೆ ತಿಳಿಯದೆ ಬ್ರಹ್ಮರ್ಷಿ ಕಣ್ವರ ಆಶ್ರಮದ ಸಮೀಪಕ್ಕೆ ಬರುತ್ತಾನೆ. ಆಗ ಕುಶಸಮಿತ್ತುಗಳನ್ನು ಸಂಗ್ರಹಿಸುತ್ತಿದ್ದ ಕೆಲವು ಋಷಿಕುಮಾರರು, ಸಮೀಪದಲ್ಲಿಯೇ ಮಹರ್ಷಿ ಕಣ್ವರ ಆಶ್ರಮವಿದೆ, ಆಶ್ರಮಕ್ಕೆ ಭೇಟಿಕೊಟ್ಟು ಹೋಗಬೇಕೆಂದು ತಿಳಿಸುತ್ತಾರೆ. ಅನಾಯಾಸವಾಗಿ ಕಣ್ವರ ಆಶ್ರಮದ ಹತ್ತಿರಕ್ಕೆ ಬಂದಿರುವುದನ್ನು ತಿಳಿದ ದುಷ್ಯಂತನು ಕಣ್ವರನ್ನು ಸಂದರ್ಶಿಸಿ, ಅವರ ಆಶೀರ್ವಾದವನ್ನು ಪಡೆಯಬೇಕೆಂದು ಮನಸ್ಸು ಮಾಡುತ್ತಾನೆ. ಆಗ ರಥದಿಂದ ಇಳಿದು ಆಶ್ರಮಕ್ಕೆ ಹೊರಡಲು ಸಿದ್ಧನಾಗುತ್ತಾನೆ. ತಾನು ಹೋಗಿ ದರ್ಶನ ಮಾಡುತ್ತಿರುವುದು ಮಹಾಮಹಿಮರೂ, ಶ್ರೇಷ್ಠ ತಪಸ್ವಿಗಳೂ ಆದ ಕಣ್ವ ಮಹರ್ಷಿಗಳನ್ನು. ಅವರನ್ನು ದರ್ಶನ ಮಾಡುವುದಕ್ಕೆ ಹೇಗೆ ಹೋಗಬೇಕು, ತನ್ನ ಚಕ್ರವರ್ತಿ ಸೂಚಕವಾದ ಲಕ್ಷಣಗಳಿಂದ ಅಲ್ಲವೆಂದು ಯೋಚಿಸಿ,

''ವಿನೀತವೇಷೇಣ ಗಂತವ್ಯಾನಿ ತಪೋವನಾನಿ ನಾಮ'' ತಪೋವನಕ್ಕೆ ಹೋಗಬೇಕಾದರೆ ವಿನಯದಿಂದ ಹೋಗಬೇಕೆಂದು ತಿಳಿದು, ತನ್ನ ರಾಜಸೂಚಕವಾದ ವಸ್ತುಗಳೆಲ್ಲವನ್ನೂ ತೆಗೆದು ವಿನಯಪೂರ್ವಕವಾಗಿ ಸಾಧಾರಣ ವ್ಯಕ್ತಿಯಂತೆ ಕಾಲ್ನಡಿಗೆಯಲ್ಲಿ ಹೋಗುತ್ತಾನೆ. ದುಷ್ಯಂತನ ಈ ಮಾತು ಎಷ್ಟು ಅರ್ಥಪೂರ್ಣವಾಗಿದೆ ಹಾಗೂ ನಮ್ಮ ಸನಾತನ ಮೌಲ್ಯವನ್ನು ಹೇಗೆ ಪ್ರಕಾಶಪಡಿಸುತ್ತದೆ ಎಂಬುದನ್ನು ಗಮನಿಸಬೇಕು. ಇಂದು ನಾವು ಚಿತ್ರ ವಿಚಿತ್ರವಾದ ವೇಷಗಳನ್ನು ಧರಿಸಿ ವೈಯಕ್ತಿಕವಾದ ಪ್ರತಿಷ್ಠೆಯನ್ನು ಮೆರೆಸುವುದಕ್ಕೆ ಎಲ್ಲ ಕಡೆಯೂ ಹೋಗುತ್ತೇವೆ. ಅಷ್ಟೇಕೆ ದೇವಸ್ಥಾನಕ್ಕೆ ಹೋಗಬೇಕಾದರೂ ಸಂಪೂರ್ಣ ಸೂಟುಧಾರಿಗಳಾಗಿಯೇ ಹೋಗುತ್ತೇವೆ. ಇಂತಹ ಪ್ರವೃತ್ತಿಯಿಂದ ನಮಗೆ ಕಾಳಿದಾಸನು ದುಷ್ಯಂತನ ಮೂಲಕ ಹೇಳುವ ಈ ಮಾತುಗಳು ಎಂತಹ ಶ್ರೇಷ್ಠವಾದ ಆಚಾರವನ್ನು ತಿಳಿಸುತ್ತವೆ.

ಒಂದು ಸಭೆಯಲ್ಲಿ ಸೇರುವ ಜನರನ್ನು ಸಭ್ಯರೆಂದು ಕರೆಯುವುದು ಸಂಪ್ರದಾಯ. ಈ ರೀತಿ ನಾವು ಸಭ್ಯರೆನಿಸಿಕೊಳ್ಳಬೇಕಾದರೆ ನಮ್ಮ ಆಚಾರವು ಹೇಗಿರಬೇಕೆಂಬುದನ್ನು ಕಾಮಂದಕ ನೀತಿಸಾರದ ಈ ಶ್ಲೋಕ ತಿಳಿಸುತ್ತದೆ.

ಉಚ್ಚೈಃ ಪ್ರಹಸನಂ ಕಾಸಂ ಷ್ಠೀವನಂ ಕುತ್ಸನಂ ಕಥಾ ।
ಜೃಂಭೇಣ ಗಾತ್ರಭಂಗಶ್ಚ ಪರ್ವಾಸ್ಥೋ ಪಂಚ ವರ್ಜಯೇತ್ ॥

ಗಟ್ಟಿಯಾಗಿ ನಗುವುದು, ಕೆಮ್ಮುವುದು, ಕ್ಯಾಕರಿಸುವುದು, ನಿಂದಿಸುವುದು, ಆಕಳಿಸುವುದು, ಮೈಮುರಿಯುವುದು, ಚಿಟಿಕೆ ಹೊಡೆಯುವುದು ಮುಂತಾದವನ್ನು ಮಾಡಬಾರದು ಎಂದು ಹೇಳುತ್ತಾನೆ. ಎಂತಹ ಸಾರವತ್ತಾದ ಮಾತು. ಯಾವುದನ್ನು ಮಾಡಿದರೆ ಅಸಭ್ಯತೆಯಾಗುವುದು ಎಂದು ಕಾಮಂದಕನು ಹೇಳುತ್ತಾನೋ, ಅದೆಲ್ಲವನ್ನೂ ನಾವು ಪ್ರತ್ಯಕ್ಷವಾಗಿ ಸಭೆಗಳಲ್ಲಿ ಕಾಣುತ್ತೇವೆ. ಸಭೆಗಳಲ್ಲಿ ತಮ್ಮ ಪ್ರತಿಷ್ಠೆ ತೋರಿಸಿಕೊಳ್ಳುವುದಕ್ಕಾಗಿ ಮುಂದೆ ಹೋಗಿ ಕೂರುತ್ತಾರೆ. ವಿದ್ವಾಂಸರು ಉಪನ್ಯಾಸ ಮಾಡಲು ಪ್ರಾರಂಭಿಸಿದರೆ ಶುರುವಾಗುತ್ತದೆ ಇವರ ಆಕಳಿಕೆ, ಮೈಮುರಿತ ಇತ್ಯಾದಿ. ಇದರಿಂದ ವಿದ್ವಾಂಸರ ಮುಖಭಂಗವಾಗುವುದೆಂದು ಅವರಿಗೆ ತಿಳಿಯುವುದೇ ಇಲ್ಲ. ಸಭೆಗೆ ಬಂದಮೇಲೆ ಸಭಾ ಮರ್ಯಾದೆಯನ್ನು ಪಾಲಿಸಬೇಕೆಂಬ ತಾಳ್ಮೆ ಇರುವುದಿಲ್ಲ. ಉಪಾಧ್ಯಾಯ ವೃತ್ತಿಯಲ್ಲಿರುವವರಿಗೆ ಇದು ನಿತ್ಯದ ಅನುಭವ. ಮತ್ತೊಂದು, ಸಂಗೀತ ಕಛೇರಿಯಲ್ಲಿ ಹಾಡುಗಾರಿಕೆಯ ಸಂದರ್ಭದಲ್ಲಿ ನಿಶ್ಯಬ್ದವಾಗಿ ಕುಳಿತಿರುವ ಶ್ರೋತೃಗಳು ಮೃದಂಗದ ತನಿ ಕಛೇರಿ ಬಿಟ್ಟಾಗ, ಬಹು ತುರ್ತುಕೆಲಸವಿರುವಂತೆ ಸಭೆಯನ್ನು ಬಿಟ್ಟು ಹೊರಡುತ್ತಾರೆ. ಮೃದಂಗವೂ ಒಂದು ವಾದ್ಯ. ಹತ್ತಾರು ವರ್ಷಗಳು ಕಷ್ಟಪಟ್ಟು ಪ್ರೌಢಿಮೆಯನ್ನು ಸಂಪಾದಿಸಿರುತ್ತಾರೆ. ಅವರು ನುಡಿಸುವುದಕ್ಕೆ ಪ್ರಾರಂಭ ಮಾಡಿದಾಗ ಸಭೆಯಿಂದ Parade ಮಾಡಿದರೆ ವಿದ್ವಾಂಸರಿಗೆ ಅವಮಾನ ಮಾಡಿದಂತೆ ಎಂದು ತಿಳಿಯುವುದಿಲ್ಲ. ಇಂತಹ ಸಂದರ್ಭದಲ್ಲಿ ಈ ಶ್ಲೋಕವು ಎಂತಹ ಸಭ್ಯ ನಡವಳಿಕೆಯನ್ನು ತಿಳಿಸುತ್ತದೆ ಎಂಬುದನ್ನು ನಾವು ಗಮನಿಸಬೇಕು.

ಶ್ರೀಮದ್ರಾಮಾಯಣದಲ್ಲಿ ಶ್ರೀರಾಮನು ಹನುಮಂತನಿಗೆ ಹೇಳುವ ಮಾತು. ಸೀತಾಪಹರಣವಾದ ನಂತರ, ಆಕೆಯನ್ನು ಹುಡುಕುತ್ತಾ, ದುಃಖಿತನಾದ ರಾಮನ ಪರಿಸ್ಥಿತಿಯನ್ನು ಅರಣ್ಯಕಾಂಡದಲ್ಲಿ ವಾಲ್ಮೀಕಿಗಳು ವರ್ಣಿಸುತ್ತಾರೆ. ಸುಗ್ರೀವನ ಸಖ್ಯದ ನಂತರ, ಹನುಮಂತನು ನೂರು ಯೋಜನ ವಿಶಾಲವಾಗಿರುವ ಸಮುದ್ರವನ್ನು ದಾಟಿ ಲಂಕೆಗೆ ಹೋಗಿ ಸೀತೆಯನ್ನು ಕಂಡು, ಅವಳಿಂದ ಪ್ರತ್ಯಭಿಜ್ಞಾರೂಪವಾಗಿ ಚೂಡಾಮಣಿಯನ್ನು ಪಡೆದು, ಹಿಂದಿರುಗಿ ಬಂದು ರಾಮನಿಗೆ ಸುದ್ದಿಯನ್ನು ಮುಟ್ಟಿಸಿ ಶ್ರೀರಾಮನ ದುಃಖವನ್ನು ಶಮನ ಮಾಡುತ್ತಾನೆ. ಇದು ಸರ್ವಜನ ವಿದಿತ. ನೂರು ಯೋಜನ ಸಮುದ್ರವನ್ನ ಹಾರುವ ಪ್ರಯತ್ನ ಮಾಡಿದ ಹನುಮಂತನಿಗೆ ಆಯಾಸವಾಗಬಹುದೆಂದು ಯೋಚಿಸಿ ಮೈನಾಕನು ಸಮುದ್ರದಿಂದ ಮೇಲೆ ಬಂದು ಹನುಮಂತನಿಗೆ ಹೇಳುತ್ತಾನೆ. ಕ್ಷಣಕಾಲ ವಿಶ್ರಮಿಸಿ ಮುಂದೆ ಹೋಗಬಹುದು, ಏಕೆಂದರೆ **''ಕೃತೇ ಚ ಪ್ರತಿಕರ್ತವ್ಯಂ ಏಷ ಧರ್ಮಃ ಸನಾತನಃ''**

ಎಂಬುದು ಆರ್ಯೋಕ್ತಿ. ನಿನ್ನ ತಂದೆಯಿಂದ ನಾನು ಉಪಕೃತನಾಗಿದ್ದೇನೆ. ಆದ್ದರಿಂದ ಪ್ರತ್ಯುಪಕಾರ ಮಾಡುವುದು ನನ್ನ ಕರ್ತವ್ಯ ಎಂದು ಹೇಳುತ್ತಾನೆ. ಆದರೆ, ರಾಮನ ಮಾತು ಇದಕ್ಕೆ ವ್ಯತಿರಿಕ್ತ. ಹನುಮಂತ ಸೀತಾನ್ವೇಷಣೆ ಮಾಡಿದುದು ಮಾತ್ರವಲ್ಲದೆ, ಯುದ್ಧಭೂಮಿಯಲ್ಲಿ ಲಕ್ಷ್ಮಣನು ಮೂರ್ಛಿತನಾಗಿ ಬಿದ್ದಿದ್ದಾಗ, ವೈದ್ಯ ಸುಶೇಷನ ಮಾತಿನಂತೆ ಔಷಧವನ್ನು ತರಲು ಹೊರಟ ಹನುಮಂತನಿಗೆ ರಾಮ ಹೇಳುತ್ತಾನೆ. ''................ **ಭ್ರಾತೃಭಿಕ್ಷಾ ಪ್ರದೀಯತಾಂ । ಚತುರ್ಣಾಮೇವ ಭ್ರಾತೄಣಾಂ ಅಸ್ಮಾಕಂ ಪಂಚಮೋ ಭವಾನ್''** ಎಂದು. ಈ ಎರಡು ಪ್ರಸಂಗಗಳಲ್ಲಿ ರಾಮನು ದುಃಖಿತನಾಗಿ ಕಷ್ಟದಲ್ಲಿರುವವನು. ಹನುಮಂತನು ರಾಮನ ದುಃಖ-ಕಷ್ಟಗಳನ್ನು ದೂರಮಾಡಿ ರಾಮನಿಗೆ ಉಪಕಾರ ಮಾಡಿದವನು. ಮೇಲೆ ಹೇಳಿದ ಮೈನಾಕನ ಮಾತಿನಂತೆ ರಾಮನು ಹನುಮಂತನಿಗೆ ಉಚಿತ ರೀತಿಯಲ್ಲಿ ಪ್ರತ್ಯುಪಕಾರ ಮಾಡಬೇಕು. ಆದರೆ ಶ್ರೀರಾಮ ಹೇಳುವ ಮಾತನ್ನು ಗಮನಿಸಿ.

ಮಯ್ಯೇವ ಜೀರ್ಣತಾಂ ಯಾತು ಯತ್ತ್ವಯೋಪಕೃತಂ ಹರೇ ।
ನರಃ ಪ್ರತ್ಯುಪಕಾರಾರ್ಥೀ ವಿಪತ್ತಿಮಾಭಿಕಾಂಕ್ಷತಿ ॥

ಎಂತಹ ಅರ್ಥವತ್ತಾದ ಮಾತನ್ನು ಹೇಳುತ್ತಾನೆ. ಸನಾತನ ಮೌಲ್ಯವನ್ನು ಯಾವ ರೀತಿಯಲ್ಲಿ ಪ್ರಕಟಿಸುತ್ತಾನೆ. ಈ ಮಾತಿನಲ್ಲಿ, ಹೇ, ಹನುಮಂತ ನೀನು ಮಾಡಿದ ಉಪಕಾರ ನನ್ನಲ್ಲೇ ಜೀರ್ಣವಾಗಲಿ. ಪ್ರತ್ಯುಪಕಾರವನ್ನು ಮಾಡಬೇಕೆಂದು ಅಪೇಕ್ಷಿಸುವ ವ್ಯಕ್ತಿಯು, ಉಪಕಾರವನ್ನು ಮಾಡಿದ ವ್ಯಕ್ತಿಯ ವಿಪತ್ತಿಯನ್ನು ಇಚ್ಛಿಸುತ್ತಾನೆ ಎಂದು ಎಂತಹ ಮನೋಜ್ಞವಾದ ಮಾತು. ನಾವು ಕಷ್ಟದಲ್ಲಿದ್ದಾಗ ನಮಗೆ ಉಪಕಾರಮಾಡಿ ನಮ್ಮ ಕಷ್ಟವನ್ನು ಪರಿಹರಿಸಿರುತ್ತಾರೆ. ಆದರೆ ನಮಗೆ ಉಪಕಾರ ಮಾಡಿದ ವ್ಯಕ್ತಿಗೆ ನಾವು ಪ್ರತ್ಯುಪಕಾರವನ್ನು ಮಾಡಲು ಅಪೇಕ್ಷಿಸಿದರೆ, ಅವನಿಗೆ ಯಾವುದಾದರೂ ವಿಪತ್ತು ಉಂಟಾಗಲಿ ಎಂದು ಬಯಸಿದಂತೆ.

ಆದ್ದರಿಂದ ಹನುಮಂತ ನಿನಗೆ ಯಾವ ವಿಪತ್ತೂ ಬರುವುದು ಬೇಡ ಹಾಗೂ ನನಗೆ ಪ್ರತ್ಯುಪಕಾರ ಮಾಡುವ ಪ್ರಸಂಗವೇ ಬರುವುದು ಬೇಡ. ಎಂತಹ ಉಜ್ವಲವಾದ ಮಾತು.

ಈ ರೀತಿಯಾಗಿ ನಮ್ಮ ಸನಾತನ ಮೌಲ್ಯಗಳನ್ನು ಸೂಚಿಸುವ ನೂರಾರು ಪ್ರಸಂಗಗಳು ನಮ್ಮ ಸಾಹಿತ್ಯದಲ್ಲಿ ಕಂಡು ಬರುತ್ತವೆ. ಅವು ಸ್ಪಷ್ಟವಾಗಿ ತಿಳಿಸದಿದ್ದರೂ ಸ್ವಯಂಪ್ರಕಾಶಗಳು.

ಸ್ವಯಂಪ್ರಕಾಶ ಪ್ರಕಟಣೆಯ 10 ವರ್ಷ

ಧರ್ಮಃ ವಿಶ್ವದ ಸದಾಚಾರ ಸಂಹಿತೆ

ಡಾ|| ಎಚ್.ವಿ. ನರಸಿಂಹ ಮೂರ್ತಿ, ವಿಶ್ರಾಂತ ಪ್ರಾಧ್ಯಾಪಕರು, ಕೋಟೇಶ್ವರ, ಕುಂದಾಪುರ

ಈ ವಿಶ್ಲೇಷಣಾ ಲೇಖನ ನೀಡಿರುವ ಡಾ|| ಹೆಚ್.ವಿ. ನರಸಿಂಹ ಮೂರ್ತಿಯವರು ನಮ್ಮ ಸ್ವಯಂಪ್ರಕಾಶದ ಖಾಯಂ ಲೇಖಕರರಲ್ಲಿ ಒಬ್ಬರು. ಕಾಲೇಜಿನಲ್ಲಿ ಸಂಸ್ಕೃತ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ವಿಶ್ರಾಂತರಾಗಿರುವ ಇವರು ದಕ್ಷಿಣ ಕನ್ನಡ ಪ್ರದೇಶದಲ್ಲಿ ಶ್ರೀ ಶೃಂಗೇರಿ ಜಗದ್ಗುರು ಸಂಸ್ಥಾನದ ಧರ್ಮಾಧಿಕಾರಿಗಳಾಗಿ ಸೇವಾನಿರತರಾಗಿದ್ದಾರೆ. ಸಾಹಿತ್ಯ ಸೇವೆಯಲ್ಲಿ ತೊಡಗಿ ಗ್ರಂಥಕರ್ತರೂ ಆಗಿರುವ ಶ್ರೀಯುತರಿಗೆ ಹಾರ್ದಿಕ ಅಭಿನಂದನೆಗಳು.

– ಸಂಪಾದಕ

'ಧರ್ಮ' ಎಂದರೆ ಮತವಲ್ಲ, ಸಂಪ್ರದಾಯವಲ್ಲ, ಪರಮಾತ್ಮನ ಉಪಾಸನಾ ಮಾರ್ಗ (ರಿಲಿಜಿಯನ್)ವೂ ಅಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ, ಪ್ರತಿಯೊಂದು ಹಂತದಲ್ಲಿಯೂ ಅನುಸರಿಸಬೇಕಾದ ಒಳ್ಳೆಯ ನಿಯಮಗಳೇ 'ಧರ್ಮ'. ಸಂಸ್ಕೃತದ ಈ ಪದ ತುಂಬ ವ್ಯಾಪಕವಾದ ಅರ್ಥವನ್ನು ಕೊಡುತ್ತದೆ. ಅದಕ್ಕೆ ಸಮನಾದ ಪದ ಜಗತ್ತಿನ ಯಾವ ಭಾಷೆಯಲ್ಲೂ ಇಲ್ಲ. ವ್ಯಕ್ತಿ ಮತ್ತು ಸಮಾಜದ ಹಿತಗಳ ನಡುವೆ ಸಮನ್ವಯ ಸಾಧಿಸುವ ಏಕೈಕ ಮಾರ್ಗ 'ಧರ್ಮ'. ಸಮಗ್ರ ಮಾನವ ಸಮಾಜಕ್ಕೆ ನಮ್ಮ ಪೂರ್ವಜರು ನೀಡಿರುವ ಅತ್ಯಂತ ಅಮೂಲ್ಯ ಕೊಡುಗೆ 'ಧರ್ಮ'. ಇದು ಸಮಗ್ರ ವಿಶ್ವದ ಸದಾಚಾರ ಸಂಹಿತೆ. ಮಾನವನ ಎಲ್ಲ ಸಮಸ್ಯೆಗಳಿಗೂ ಪರಿಹಾರ ನೀಡುವ ಸಂಜೀವಿನಿ. ಇತ್ತೀಚೆಗೆ ಈ ದೇಶದ ಧರ್ಮಾಭಿಮಾನಿಯೊಬ್ಬರು ಹೂಡಿದ ಮೊಕದ್ದಮೆಯಲ್ಲಿ 'ಧರ್ಮ'ದ ಬಗ್ಗೆ ವ್ಯಾಪಕವಾಗಿ ಚರ್ಚೆಮಾಡಿ, ಅದರ ಅರ್ಥವನ್ನು ಭಾರತದ ಶ್ರೇಷ್ಠ ನ್ಯಾಯಾಲಯ ಈ ರೀತಿ ತಿಳಿಸಿದೆ. 'ಧರ್ಮವು ಮಾನವ ಸಮಾಜದ ಭದ್ರತೆಯನ್ನು ಎತ್ತಿ ಹಿಡಿಯುತ್ತದೆ. ಪೋಷಿಸುತ್ತದೆ, ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡುತ್ತದೆ ಮತ್ತು ಸರ್ವಾಂಗೀಣ ಯೋಗಕ್ಷೇಮವನ್ನೂ, ಪ್ರಗತಿಯನ್ನೂ ಸಾಧಿಸುತ್ತದೆ' (ಎ.ಐ.ಆರ್.1996, ಪುಟ 1765, ಪ್ಯಾರಾ: 81).

ಧರ್ಮದ ನಿಯಮಗಳನ್ನು 'ಪಂಚಶೀಲ'ವೆಂದು ಸ್ಮೃತಿಗಳು ಘೋಷಿಸಿವೆ. (ಅಹಿಂಸಾ ಸತ್ಯಮಸ್ತೇಯಃ ಶೌಚಮಿಂದ್ರಿಯ ನಿಗ್ರಹಃ। ಏತಂ ಸಾಮಾಸಿಕಂ ಧರ್ಮಂ.......................) ಯಾವ ಜೀವಿಯನ್ನೂ ಅನ್ಯಾಯವಾಗಿ ಹಿಂಸಿಸದಿರುವುದು, ಸದಾ ಸತ್ಯವನ್ನೇ ನುಡಿಯುವುದು, ಯಾವುದೇ ರೀತಿಯ ಮೋಸದಿಂದ ಹಣ – ಆಸ್ತಿ ಸಂಪಾದಿಸದಿರುವುದು, ತ್ರಿಕರಣ ಶುದ್ಧಿ (ಕಾಯೇನ, ವಾಚಾ, ಮನಸಾ ಶುದ್ಧವಾಗಿರುವುದು) ಹಾಗೂ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಅವುಗಳಿಂದ ಯಾವುದೇ ರೀತಿಯ ಅನ್ಯಾಯದ, ಅನೀತಿಯ ಕ್ರಿಯೆಗಳಾಗದಂತೆ ನೋಡಿಕೊಳ್ಳುವುದು – ಇವೇ ಪ್ರತಿಯೊಬ್ಬ ಮಾನವನು ಅನುಸರಿಸಬೇಕಾದ ಧರ್ಮದ ಪಂಚಶೀಲಗಳು. ನಮಗೆ ಬೇಕಾದ ಹಣ – ಆಸ್ತಿ (ಅರ್ಥ) ಹಾಗೂ ನಮ್ಮ ಮನಸ್ಸಿನಲ್ಲುಂಟಾಗುವ ಆಸೆಗಳನ್ನು (ಕಾಮ) ಧರ್ಮದ ಚೌಕಟ್ಟಿನಲ್ಲಿ ಪಡೆಯಬೇಕು ಅಥವಾ ಪೂರೈಸಿಕೊಳ್ಳಬೇಕು, ಎಂಬುದೇ ಧರ್ಮದ ಆದೇಶ.

ಧರ್ಮಕ್ಕನುಗುಣವಾಗಿಯೇ ಜೀವಿಸಬೇಕಾದ ಅತಿ ಮುಖ್ಯವಾದ ನಿಯಮವನ್ನು ನಿಷೇಧ ರೂಪದಲ್ಲಿ ನಮ್ಮ ಪೂರ್ವಿಕರು ಘೋಷಿಸಿದ್ದಾರೆ. **'ಪರಿತ್ಯಜೇದರ್ಥಕಾಮೌ ಮೌ ಸ್ಯತಾಂ ಧರ್ಮವರ್ಜಿತೌ'** ಧರ್ಮದ ನಿಯಮಗಳಿಗೆ ವಿರುದ್ಧವಾದ ಹಣವನ್ನು, ಆಸ್ತಿಯನ್ನು, ಆಸೆಗಳನ್ನು ತಿರಸ್ಕರಿಸಿರಿ ಎಂದು ಕರೆ ನೀಡಿದ್ದಾರೆ ಅವರು. ಬಹುಶಃ ಮಾನವನ ಸುಖ – ಸಂತೋಷಗಳಿಗೆ ಇದಕ್ಕಿಂತ ಉತ್ತಮವಾದ ನಿಯಮವನ್ನು ಊಹಿಸಲೂ ಅಸಾಧ್ಯ. ಈ ಸಿದ್ಧಾಂತವನ್ನು ಧರ್ಮ, ಅರ್ಥ ಮತ್ತು ಕಾಮವನ್ನೊಳಗೊಂಡ 'ತ್ರಿವರ್ಗ ಸಿದ್ಧಾಂತ'ವೆಂದು ಕರೆಯಲಾಗಿದೆ. ಇದರ ತಾತ್ಪರ್ಯವೇನೆಂದರೆ ಅರ್ಥ ಅಂದರೆ ಹಣ – ಆಸ್ತಿ – ಐಶ್ವರ್ಯ – ಇತ್ಯಾದಿ ಮತ್ತು ಕಾಮವೆಂದರೆ ಮಾನವನ ಎಲ್ಲ ಆಸೆ ಆಕಾಂಕ್ಷೆಗಳು, ಇವೆಲ್ಲವನ್ನು ಧರ್ಮದ ಚೌಕಟ್ಟಿನಲ್ಲೇ ಗಳಿಸಿ ಅನುಭವಿಸಬೇಕು. ಧರ್ಮದ ಮತ್ತೊಂದು ಅಂಶವೆಂದರೆ ಅದನ್ನು ಉಪನ್ಯಾಸಗಳ ಅಥವಾ ಲೇಖನಗಳ ಮೂಲಕ ಮಾತ್ರ

ಅನುಸರಿಸುವಂತೆ ಮಾಡುವುದು ಅಸಾಧ್ಯ. 'ಧರ್ಮ'ದ ನಿಯಮಗಳನ್ನು ಜೀವನದಲ್ಲಿ ಹಿರಿಯರು ಅನುಸರಿಸುವುದನ್ನು ನೋಡಿಯೇ ಕಿರಿಯರು ಕಲಿಯಬೇಕು. ಈ ಅಂಶವನ್ನೇ **'ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ'** ಹಿರಿಯರ ಆಚರಣೆಯನ್ನೇ ಕಿರಿಯರು ಅನುಸರಿಸುತ್ತಾರೆ ಎಂದು ಭಗವದ್ಗೀತೆಯ ವಾಕ್ಯ ತಿಳಿಸುತ್ತದೆ.

ಆದ್ದರಿಂದಲೇ ಮಹಾಭಾರತದ ಮೂಲತತ್ತ್ವ **'ಯತೋ ಧರ್ಮಃ ತತೋ ಜಯಃ'** ಎಂಬುದನ್ನು ವ್ಯಾಸರು ಸಮರ್ಥನೆ ಮಾಡಿದ್ದಾರೆ. ಧರ್ಮದ ಹಾದಿಯನ್ನು ಬಿಟ್ಟು ದುರ್ಯೋಧನ ಅಧರ್ಮದ ಹಾದಿ ಹಿಡಿದ. ಅವನಿಗೆ ಪಾಂಡವರ ರಾಜ್ಯವನ್ನು ಹೇಗಾದರೂ ಮಾಡಿ ಕಬಳಿಸಬೇಕೆಂಬ ಹಂಬಲ. ಅವನಿಗೆ ಶಕುನಿಯಂತಹ ನೀತಿಗೆಟ್ಟವರ ಬೆಂಬಲ. ಪಾಂಡವರ ರಾಜ್ಯವನ್ನು ಕಸಿಯಲು ಬಳಸಿದ ಕುತಂತ್ರಗಳು ಅನೇಕ. ಅವರನ್ನೇ ನಿರ್ನಾಮ ಮಾಡಲು ಸಿದ್ಧನಾಗಿದ್ದ, ಕೊನೆಗೆ ಯಾವುದೂ ಸಫಲವಾಗದೆ ಜೂಜಿನ ಕುತಂತ್ರ ಹೂಡಿದ. ಪಾಂಡವರನ್ನು ಸೋಲಿನ ಜಾಲಕ್ಕೆ ಸಿಕ್ಕಿಸಿ, ಅವರನ್ನು ವನವಾಸಿಗಳನ್ನಾಗಿ ಮಾಡಿದ. ದುರ್ಯೋಧನನ ಸಂಚಿಗೆಲ್ಲ ಪ್ರೋತ್ಸಾಹ ನೀಡಿದ, ಶಕುನಿ – ದುಶ್ಶಾಸನ ಮುಂತಾದವರಲ್ಲದೆ ಧೃತರಾಷ್ಟ್ರನೂ ಸೇರಿದ್ದ. ದುರ್ಯೋಧನ ಯಾರ ಮಾತಿಗೂ ಮನ್ನಣೆ ಕೊಡುವವನಲ್ಲ. ಕೊನೆಯ ಪಕ್ಷ ಧೃತರಾಷ್ಟ್ರನಿಗಾದರೂ ಸನ್ಮಾರ್ಗವನ್ನು ತಿಳಿಸಲು ವಿದುರ – ವ್ಯಾಸರು ಮುಂದಾದರು. ಆ ಹಿರಿಯರು ತಮ್ಮ ಕೈಲಾದ್ದನ್ನು ಮಾಡಿಸಲು ಯತ್ನಿಸಿದರು. ವಿದುರನು ಧೃತರಾಷ್ಟ್ರನಿಗೆ ಧರ್ಮದ ಪ್ರಾಮುಖ್ಯವನ್ನು ಹೇಳಿದ:

ತ್ರಿವರ್ಗೋಽಯಂ ಧರ್ಮಮೂಲೋ ನರೇಂದ್ರ ರಾಜ್ಯಂ ಚೇದಂ ಧರ್ಮಮೂಲಂ ವದಂತಿ ।
ಧರ್ಮೇ ರಾಜನ್ ವರ್ತಮಾನಾಃ ಸ್ವಶಕ್ತ್ಯಾ ಪುತ್ರಾನ್ ಸರ್ವಾನ್ ಪಾಹಿ ಪಾಂಡೋಃ ಸುತಾಂಶ್ಚ ॥

'ನರೇಂದ್ರ, ಧರ್ಮ–ಅರ್ಥ–ಕಾಮಗಳಿಗೆ ಧರ್ಮವೇ ಮೂಲ. ಅಷ್ಟೇ ಅಲ್ಲ, ಈ ರಾಜ್ಯವೆಲ್ಲ ಧರ್ಮದ ಆಧಾರದ ನಿಂತಿದೆ. ಆದ್ದರಿಂದ ಧರ್ಮದ ಆಸರೆಯಲ್ಲಿ ನಿನ್ನ ಶಕ್ತಿ ಇದ್ದಷ್ಟು ನಿನ್ನ ಮಕ್ಕಳನ್ನು ಪಾಂಡುವಿನ ಮಕ್ಕಳನ್ನು ನೋಡಿಕೋ' ಎಂದ ವಿದುರ.

ತೈತ್ತಿರೀಯ ಸಂಹಿತೆಯ ಶಿಕ್ಷಾವಲ್ಲಿ ಧರ್ಮದ ಮರ್ಮವನ್ನು ಸೊಗಸಾಗಿ ಪ್ರತಿಪಾದಿಸುತ್ತದೆ. 'ನಿಮ್ಮ ತಂದೆ – ತಾಯಿ – ವಿದ್ಯಾ ಗುರುಗಳು – ಇವರಲ್ಲಿ ದೈವತ್ವವನ್ನು ಗುರುತಿಸಿ, ಆರಾಧಿಸಿ, ಸತ್ಯಮಾರ್ಗದಲ್ಲಿ ನಡೆಯಿರಿ, ಧರ್ಮದ ನಿಯಮಗಳನ್ನು ಆಚರಿಸಿ, ಮಾಡಬಾರದ ಕೆಲಸಗಳನ್ನು ಮಾಡಬೇಡಿ' ಎಂದು ಬೋಧಿಸುತ್ತದೆ. ಅದು ಧರ್ಮಕ್ಕೆ ವಿರೋಧವಾಗಿ ನಡೆದುಕೊಂಡರೆ, ಅಂದರೆ ಮಾಡಬಾರದ ಕೆಲಸ ಮಾಡಿದರೆ ಪರಿಣಾಮವೇನಾಗುತ್ತದೆ ಎಂಬ ಎಚ್ಚರಿಕೆಯ ಮಾತುಗಳನ್ನೊಳಗೊಂಡಿರುವ ಶ್ಲೋಕವೊಂದು ಈ ರೀತಿ ಇದೆ.

ಅಧರ್ಮೇಣೈಧತೇ ತಾವತ್ ತತೋ ಭದ್ರಾಣಿ ಪಶ್ಯತಿ ।
ತತಸ್ಸಪತ್ನಾನ್ ಜಯತಿ ಸಮೂಲಸ್ತು ವಿನಶ್ಯತಿ ॥

ಅಂದರೆ 'ಅಧರ್ಮದಿಂದ ಅಧಿಕಾರ, ಹಣ ಇತ್ಯಾದಿ ಗಳಿಸಲು ಹೊರಟವರಿಗೆ ತಾತ್ಕಾಲಿಕವಾಗಿ ಸುಖ ಸಿಗುತ್ತದೆ. ವಿರೋಧಿಗಳನ್ನು ಗೆಲ್ಲುತ್ತಾರೆ. ಆದರೆ ಕೊನೆಯಲ್ಲಿ ಬುಡಸಹಿತ ನಾಶವಾಗುವುದು ನಿಶ್ಚಿತ' ಇದು ಎಂಥ ಎಚ್ಚರಿಕೆಯ ಮಾತು! ಈ ಮಾತು ಎಷ್ಟು ಸತ್ಯ ಎಂಬುದನ್ನು ಇತ್ತೀಚಿನ ವರ್ಷಗಳಲ್ಲಿ ನಾವು ಕಣ್ಣಾರೆ ಕಾಣುತ್ತಿದ್ದೇವೆ. ಅತ್ಯುನ್ನತ ಅಧಿಕಾರ, ಅತಿ ಹೆಚ್ಚಿನ ಆಸ್ತಿ – ಇವುಗಳನ್ನು ಅನ್ಯಾಯದಿಂದ, ಅಧರ್ಮದಿಂದ ಗಳಿಸಿದ ಅನೇಕರು ಇಂದು ಎಂಥ ದುಸ್ಥಿತಿಯಲ್ಲಿ ಇದ್ದಾರೆಂಬುದು ಎಲ್ಲರಿಗೂ ತಿಳಿದ ವಿಷಯ.

ಯಾವ ರಾಜನೀತಿಯ ಅಧಿಕಾರವಾಗಲಿ, ಆಸ್ತಿಯಾಗಲಿ ಶಾಶ್ವತವಲ್ಲ. ಆದರೆ ಧರ್ಮಕ್ಕೆ ಅನುಗುಣವಾಗಿ ನಡೆದುಕೊಂಡು ಗಳಿಸಿದ ಕೀರ್ತಿ ಮಾತ್ರ ಶಾಶ್ವತ. ಅಂಥ ಸದಾಚಾರವೇ ನಮಗೆ ಶ್ರೀರಕ್ಷೆ. ಆದ್ದರಿಂದ ನಮ್ಮ ಅಧಿಕಾರ, ಸ್ಥಾನ, ವೃತ್ತಿ ಮತ್ತು ಕುಟುಂಬದ ಜವಾಬ್ದಾರಿ – ಇವುಗಳನ್ನು ನಿರ್ವಹಿಸುವಾಗ ನಮ್ಮ ಆಚರಣೆ ಧರ್ಮಕನುಗುಣವಾಗಿ ಇರುವಂತೆ ಎಚ್ಚರವಹಿಸ ಬೇಕು. ಇದು ನಮಗೂ ಮುಂದಿನ ಪೀಳಿಗೆಗೂ, ಸಮಾಜಕ್ಕೂ ಶ್ರೇಯಸ್ಸು, ಸುಖ, ಶಾಂತಿ, ನೆಮ್ಮದಿಗಳನ್ನು ನೀಡುತ್ತದೆ.



ಕುಲಶೇಖರ ಆಳ್ವಾರ್‌ನ ಭಕ್ತಿ ಕುಸುಮಮಾಲೆ "ಮುಕುಂದ ಮಾಲಾ"

ಶ್ರೀ ಟಿ.ಎಸ್ ವೆಂಕಣ್ಣಯ್ಯ, ನಿವೃತ್ತ ಪ್ರಾಂಶುಪಾಲರು, ಜೆಸಿಬಿಎಂ ಕಾಲೇಜು, ಶೃಂಗೇರಿ

ಶ್ರೀಯುತರು ವಿದ್ವತ್ಪರಂಪರೆಗೆ ಹೆಸರಾಂತ 'ತಳಕು' ಮನೆತನದವರಾಗಿ ಸಂಸ್ಕೃತ ಸಾಹಿತ್ಯ, ಆಂಗ್ಲಭಾಷಾ ಪ್ರೌಢಿಮೆಯುಳ್ಳವರಾಗಿ ಶೃಂಗೇರಿಯ ಜೆಸಿಬಿಎಂ ಕಾಲೇಜಿನ ಪ್ರಾಶುಂಪಾಲರಾಗಿ ಕಾಲೇಜಿನ ಅಭಿವೃದ್ದಿಗೆ ಕಾರಣರಾದವರು. ನಿವೃತ್ತರಾಗಿ ಶೃಂಗೇರಿಯಲ್ಲಿಯೇ ನೆಲೆಸಿರುವ ಶ್ರೀಯುತರು ಬಹುಶ್ರುತರು, ವಾಗ್ಮಿಗಳು, ಬರಹಗಾರರು, ಸಾಹಿತ್ಯ ಕ್ಷೇತ್ರಕ್ಕೆ ಸೇವೆ ಸಲ್ಲಿಸುತ್ತ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಅವರ ಬಿಡುವಿಲ್ಲದ ಕಾರ್ಯಬಾಹುಳ್ಯದ ನಡುವೆ ಈ ವಿಶೇಷ ಸ್ಮರಣಸಂಚಿಕೆಗಾಗಿ ಲೇಖನ ರಚಿಸಿ ನೀಡಿರುವ ಅವರಿಗೆ ಹಾರ್ದಿಕ ಅಭಿನಂದನೆಗಳು. – ಸಂಪಾದಕ

'ಮುಕುಂದಮಾಲಾ' ಸಂಸ್ಕೃತ ಭಾಷೆಯಲ್ಲಿ ರಚಿತವಾಗಿರುವ ಪದ್ಯಗಳ ಒಂದು ಮಾಲೆ. ಭಗವಾನ್ ಮುಕುಂದನ ಸ್ತೋತ್ರಕ್ಕೆ ಮುಡಿಪಾಗಿರುವ ಈ ಕೃತಿ ಅತ್ಯಂತ ಪರಿಶುದ್ಧವಾದ ಭಕ್ತಿಯನ್ನು ಪ್ರತಿಪಾದಿಸುತ್ತದೆ. **'ಮೋಕ್ಷಂ ದದಾತಿ ಇತಿ ಮುಕುಂದಃ'** ಎಂಬಂತೆ ಮುಕುಂದನೆಂದರೆ ಸಂಸಾರದಿಂದ ಮುಕ್ತಿಯನ್ನು ಕರುಣಿಸುವವನು. ಆತ ನಮಗೆ, ಆತನ ಭಕ್ತರಿಗೆ ಎಲ್ಲ ದುಃಖ, ಭಯ ಮತ್ತು ವ್ಯಾಕುಲದಿಂದ ಮುಕ್ತಿ ನೀಡುತ್ತಾನೆ. ಈ ಮಾಲೆಯಲ್ಲಿರುವ ಪ್ರತಿಯೊಂದು ಪದ್ಯವೂ ಆತನ ಪಾದಗಳಿಗೆ ಸಮರ್ಪಿತವಾಗಿರುವ ಸುವಾಸನಾಭರಿತ ಪುಷ್ಪ

ಕಾವ್ಯ ಸಾಹಿತ್ಯದಲ್ಲಿ ಭಕ್ತಿಕಾವ್ಯ ಒಂದು ವಿಶಿಷ್ಟಸ್ಥಾನ ಪಡೆದಿದೆ. ಈ ದೇಶದ ಧರ್ಮ ಮತ್ತು ಸಂಸ್ಕೃತಿಯನ್ನು ಎತ್ತಿಹಿಡಿಯುವಲ್ಲಿ ಈ ಸಾಹಿತ್ಯದ ಪಾತ್ರ ಮಹತ್ವಪೂರ್ಣವಾದುದು. ಈ ಸಾಹಿತ್ಯದ ಮುಖ್ಯ ಗುರಿ ಮನುಷ್ಯನ ಗಮನವನ್ನು ಐಹಿಕ ವಸ್ತುಗಳಿಂದ ಆಧ್ಯಾತ್ಮಿಕ ಆಸಕ್ತಿಗಳತ್ತ ಸೆಳೆಯುವುದು. ಈ ಸಾಹಿತ್ಯದ ಮೂಲಗಳನ್ನು ವೈದಿಕ ಸಾಹಿತ್ಯದಲ್ಲಿ ಕಾಣಬಹುದು. ಈ ಬಗೆಯ ಕಾವ್ಯಗಳು ಭಕ್ತಿಯ ತೀವ್ರತೆ, ತಾತ್ತ್ವಿಕತೆಯ ಪ್ರಾಮುಖ್ಯ ಮತ್ತು ಉನ್ನತ ಸಾಹಿತ್ಯಗುಣಗಳಿಂದ ತುಂಬಿ ತುಳುಕುತ್ತಿವೆ.

ಅದ್ವೈತ ತತ್ತ್ವ ಸ್ಥಾಪಕ ಶ್ರೀ ಶಂಕರರು ಅಪಾರ ಸಂಖ್ಯೆಯ ಭಕ್ತಿಭರಿತ ಸ್ತೋತ್ರಗಳನ್ನು ರಚಿಸುವ ಅಗತ್ಯವನ್ನು ಕಂಡರೆಂಬುದರಿಂದಲೇ ನಮ್ಮ ಜನರ ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ಭಕ್ತಿ ಸಾಹಿತ್ಯದ ಪ್ರಾಮುಖ್ಯವನ್ನು ತೀರ್ಮಾನಿಸಬಹುದು. ಸಂಸ್ಕೃತ ಭಾಷೆಯಲ್ಲಿರುವ ಅವುಗಳು, ಅವು ರಚನೆಗೊಂಡ ಕಾಲದಲ್ಲೆಂತೋ ಅಂತೆಯೇ ಇಂದೂ ನವೋನವವೂ, ಆಪ್ಯಾಯಮಾನವೂ ಆಗಿ ಉಳಿದಿವೆ. ಅದೇ ರೀತಿಯಲ್ಲಿ ಕುಲಶೇಖರನ ಸಂಸ್ಕೃತದ ಏಕೈಕ ಕೃತಿ 'ಮುಕುಂದಮಾಲಾ' ಶತ ಶತಮಾನಗಳಿಂದಲೂ ಅತ್ಯಂತ ಪ್ರೀತಿಪಾತ್ರವೂ, ಜನಪ್ರಿಯವೂ ಆಗಿ ಉಳಿದಿದೆ. ಶ್ರೀವೈಷ್ಣವರಲ್ಲಿ ವಿಶೇಷವಾಗಿ 4 – 5 ವರ್ಷಗಳ ಮಕ್ಕಳಿಗೆ ಈ ಭಕ್ತಿಕಾವ್ಯವನ್ನು ಕಲಿಸುವ ವಾಡಿಕೆ ಬೆಳೆದುಬಂದಿದೆ.

ವೈಯಕ್ತಿಕ ದೇವರೊಬ್ಬನ ಪೂಜೆಯನ್ನೊಳಗೊಂಡ ಭಕ್ತಿ ಆತನಲ್ಲಿ ಸಂಪೂರ್ಣ ಶರಣಾಗತಿಯಲ್ಲಿ ಕೊನೆಗೊಳ್ಳುತ್ತದೆ. ಮುಕ್ತಿಗೆ ಅಥವಾ ಜನ್ಮ ಮತ್ತು ಮೃತ್ಯುವಿನ ನಿರಂತರವಾಗಿ ಸುತ್ತುತ್ತಿರುವ ಚಕ್ರದಿಂದ ಬಿಡುಗಡೆಗೆ ಇದು ಅತ್ಯುತ್ತಮವಾದ ಮಾರ್ಗ.

ಭಕ್ತಿ ಚಳುವಳಿ ದೇಶಾದ್ಯಂತ ಪಸರಿಸಿದ ಒಂದು ಆದೋಲನ. ಅದು ಎಲ್ಲ ರೀತಿಯ ಜನರಿಗೆ ಅದರಲ್ಲಿಯೂ ವಿಶೇಷವಾಗಿ ಜನಸಾಮಾನ್ಯರಿಗೆ ತುಂಬ ಅನುರೂಪವಾಗಿತ್ತು. ದೇಶದ ವಿಭಿನ್ನ ಭಾಗಗಳಲ್ಲಿ ಸಂತರು ಮತ್ತು ಅನುಭಾವಿಗಳ ಒಂದು ಪರಂಪರೆಯೇ ತಲೆಯೆತ್ತಿತು. ಇವರು ನಮ್ಮ ಪ್ರಾಚೀನರ ಜ್ಞಾನಭಂಡಾರವನ್ನು ಜನಸಾಮಾನ್ಯರಿಗೆ ತಲುಪಿಸುವ ಕಾರ್ಯ ಮಾಡಿದರು. ತಮಿಳುನಾಡಿನಲ್ಲಿ ವೈಷ್ಣವ ಪಂಥದ ಆಳ್ವಾರರು ಮತ್ತು ಶೈವ ಪಂಥದ ನಾಯನ್ಮಾರರು ಭಕ್ತಿ ಚಳುವಳಿಯ ಮುಖ್ಯ ಕೊಂಡಿಗಳಾಗಿದ್ದರು. ವಿಷ್ಣುಭಕ್ತಿಯ ಪರಾಕಾಷ್ಠೆ ಕುಲಶೇಖರನನ್ನು ಆಳ್ವಾರರ ಹಂತಕ್ಕೆ ಕೊಂಡೊಯ್ದಿತು. ಆತ ಸಂನ್ಯಾಸಿ ಅಥವಾ

ಏಕಾಂತವಾಸಿಯಾಗಿರಲಿಲ್ಲ ಅಥವಾ ಯಾವುದಾದರೂ ಮಠದ ಮುಖ್ಯಸ್ಥನಾಗಿರಲಿಲ್ಲ.

ಕ್ರಿ.ಶ. ಹತ್ತನೆಯ ಶತಮಾನಕ್ಕೆ ಸೇರಿದ ಕುಲಶೇಖರ ಕೇರಳ ದೇಶದ ಚೋಳ ಪಟ್ಟಣದ ಚೇರವಂಶಕ್ಕೆ ಸೇರಿದ ದೃಢವ್ರತರಾಜನ ಮಗ. ಆತ ಕುಂಭಮಾಸದ ಪುನರ್ವಸು ನಕ್ಷತ್ರದಲ್ಲಿ ಶ್ರೀಮಹಾವಿಷ್ಣುವಿನ ಕೌಸ್ತುಭಾಂಶದಿಂದ ಜನಿಸಿದನೆಂದು ಸಂಪ್ರದಾಯ ಗ್ರಂಥ ತಿಳಿಸುತ್ತದೆ. ಅರಸಾಗಿ ಹುಟ್ಟಿದರೂ ಆತನಿಗೆ ಭೋಗಲಾಲಸೆಯಿರಲಿಲ್ಲ. ಆತನಿಗೆ ಅಸದೃಶವಾದ ದೈವಾಸಕ್ತಿಯಿತ್ತು. ಆತನಿಗೆ ರಾಮಾಯಣ, ಭಾಗವತಗಳಲ್ಲಿ ಉನ್ನತ್ತವಾದ ಪ್ರೀತಿಯಿತ್ತು. ವಿದ್ಯಾಸಂಪನ್ನನಾಗಿದ್ದ ಆತ ಅಧಿಕಾರಕ್ಕಾಗಲಿ, ಅಂತಸ್ತಿಗಾಗಲಿ ಎಂದೂ ಆಸೆಪಟ್ಟವನಲ್ಲ. ಸಾಧು – ಸಂತರ ಸಂತರ್ಪಣೆಯಲ್ಲಿ ಅಪಾರ ಶ್ರದ್ಧೆ ಹೊಂದಿದ್ದ ಆತ ತೀರ್ಥಯಾತ್ರೆಗಳಲ್ಲಿ ವಿಶೇಷ ಆಸಕ್ತಿಯುಳ್ಳವನಾಗಿದ್ದ. ವಯಸ್ಸನ್ನೂ ಮೀರಿದಾಗಲೇ ಮಗ ದೃಢವ್ರತ (ತಂದೆಯ ಹೆಸರನ್ನು ಮಗನಿಗೆ ಇಟ್ಟಿದ್ದ) ನಿಗೆ ಪಟ್ಟಕಟ್ಟಿ ಆತ ಶ್ರೀರಂಗದಲ್ಲಿ ನೆಲೆಸಿದ.

ಕುಲಶೇಖರನ ಪ್ರಸಿದ್ಧ ತಮಿಳು ರಚನೆ 'ಪೆರುಮಾಳ್ ತಿರುಮಾಳಿ' ನೂರೈದು ಪದ್ಯಗಳನ್ನೊಳಗೊಂಡಿದ್ದು 4,000 ದಿವ್ಯಪ್ರಬಂಧ (ನಾಲಾಯಿರಂ)ಗಳಲ್ಲಿ ಒಂದೆಂಬ ಕೀರ್ತಿಯನ್ನು ಪಡೆದಿದೆ. ಆತನ ಪ್ರಖ್ಯಾತ ಕೃತಿ 'ಮುಕುಂದಮಾಲಾ' ನಲವತ್ತು ಪದ್ಯಗಳನ್ನುಳ್ಳದ್ದು. ಅವುಗಳನ್ನು ಮೂರು ಪ್ರಮುಖ ವರ್ಗಗಳನ್ನಾಗಿ ವಿಂಗಡಿಸಬಹುದು. ಮೊದಲನೆಯ ಮತ್ತು ಸುದೀರ್ಘವಾದ ವರ್ಗದಲ್ಲಿ ದೇವರ ಪ್ರಾರ್ಥನೆಯಿದೆ. ಆತನನ್ನು ಹಲವಾರು ಹೆಸರುಗಳಿಂದ ಸಂಬೋಧಿಸುವುದು, ಆತನ ವೈಭವವನ್ನು ಹೊಗಳುವುದು ಮತ್ತು ಭಕ್ತನ ಮನಸ್ಸು ಸದಾ ಆತನನ್ನೇ ನೆನೆಯುತ್ತ ಮತ್ತು ಆತನ ಪಾದಗಳನ್ನೇ ಆಶ್ರಯಿಸುತ್ತಲಿರುವಂತೆ ಬೇಡುವುದು ಈ ವರ್ಗದ ವೈಶಿಷ್ಟ್ಯ. ಮೊದಲನೆಯ ಪದ್ಯವೇ ಇದಕ್ಕೊಂದು ಸುಂದರ ಉದಾಹರಣೆ:

'ಶ್ರೀವಲ್ಲಭೇತಿ ವರದೇತಿ ದಯಾಪರೇತಿ ಭಕ್ತಪ್ರಿಯೇತಿ ಭವಲುಂಠನಕೋವಿದೇತಿ ।
ನಾಥೇತಿ ನಾಗಶಯನೇತಿ ಜಗನ್ನಿವಾಸೇತ್ಯಾಲಾಪನಂ ಪ್ರತಿಪದಂ ಕುರು ಮೇ ಮುಕುಂದ ॥ 1 ॥

ಇದು ಸಂಪೂರ್ಣ ನಿಷ್ಕಾಮಭಕ್ತಿ. ಇದು ಯಾವುದೇ ಅಭಿಲಾಷೆಗಳಿಂದ ಕಳಕಿಂತವಾಗದ ಶುದ್ಧಭಕ್ತಿ.

ಎರಡನೆಯ ವರ್ಗ ಸುಮಾರು 7 ಅಥವಾ 8 ಪದ್ಯಗಳನ್ನೊಳಗೊಂಡಿದೆ. ಭಯಂಕರವಾದ ಸಂಸಾರ ಸಾಗರದಿಂದ ಬಿಡುಗಡೆ ಮಾಡುವಂತೆ ಭಗವಂತನಲ್ಲಿ ಇವು ಬೇಡಿಕೆ ಸಲ್ಲಿಸುತ್ತಿವೆ. ಈ ಕಾರ್ಯವನ್ನು ಆ ಭಗವಂತನೊಬ್ಬನೇ ಮಾಡಬಲ್ಲ, ಬೇರಾವುದೇ ಕೃಪೆಯನ್ನು ಭಗವಂತನಿಂದ ಭಕ್ತ ಅಪೇಕ್ಷಿಸುವುದಿಲ್ಲ. ಇದಕ್ಕೊಂದು ಉದಾಹರಣೆ:

'ಭವಜಲಧಿಮಗಾಧಂ ದುಸ್ತರಂ ನಿಸ್ತರೇಯಂ
ಕಥಮಹಮಿತಿ ಚೇತೋ ಮಾಸ್ಮ ಗಾಃ ಕಾತರತ್ವಮ್ ।
ಸರಸಿಜದೃಶಿ ದೇವೇ ತಾವಕೀ ಭಕ್ತಿರೇಕಾ
ನರಕಭಿದಿನಿಷಣ್ಣಾ ತಾರಯಿಷ್ಯತ್ಯವಶ್ಯಮ್ ॥ 13 ॥

ಮೂರನೆಯ ವರ್ಗದ ಪದ್ಯಗಳು ಸರಳವೂ ಮತ್ತು ಖಚಿತವೂ ಆದ ಶುದ್ಧಭಕ್ತಿಯ ಮಾರ್ಗವನ್ನು ಅನುಸರಿಸುವಂತೆ ಜನರನ್ನು ಪ್ರೇರೇಪಿಸುವ ಉದ್ದೇಶಹೊಂದಿದೆ. ಇದು ನಿರಂತರವಾಗಿ ಆತನ ಅಸಂಖ್ಯನಾಮಗಳನ್ನು ಪಠಿಸುವುದರಿಂದ, ಆತನ ಪಾದಪದ್ಮವನ್ನು ಸದಾ ಸ್ಮರಿಸುವುದರಿಂದ ಮತ್ತು ಆತನಲ್ಲಿ ಸಂಪೂರ್ಣ ಶರಣಾಗತಿಯಿಂದ ಸಾಧ್ಯವಾಗುತ್ತದೆ. ಅತ್ಯಂತ ಪ್ರಸಿದ್ಧವಾದ ಈ ಉದಾಹರಣೆಯನ್ನು ನೋಡಬಹುದು.

'ಜಿಹ್ವೇ ಕೀರ್ತಯ ಕೇಶವಂ ಮುರರಿಪುಂ ಚೇತೋ ಭಜ ಶ್ರೀಧರಂ
ಪಾಣಿದ್ವಂದ್ವ ಸಮರ್ಚಯಾಚ್ಯುತಕಥಾಃ ಶ್ರೋತ್ರದ್ವಯ ತ್ವಂ ಶೃಣು ।

ಕೃಷ್ಣಂ ಲೋಕಯ ಲೋಚನದ್ವಯ ಹರೇರ್ಗಚ್ಛಾಂಘ್ರಿಯುಗ್ಮಾಲಯಂ
ಜಿಘ್ರ ಘ್ರಾಣ ಮುಕುಂದಪಾದತುಲಸೀ ಮೂರ್ಧನ್ನಮಾಧೋಕ್ಷಜಮ್ ॥ 16 ॥

ಮೂಲಸಹಿತವಾಗಿ ಪಾಪಗಳಿಂದ ಬಿಡುಗಡೆಹೊಂದಲು, ಸಂಸಾರದ ಕಷ್ಟನಿಷ್ಠುರಗಳಿಂದ ಪಾರಾಗಲೂ ಸಹ ಈ ಭಕ್ತಿ ಸುಲಭೋಪಾಯ. ಹೀಗಿದ್ದರೂ ಜನಮುಕ್ತಿಯ ಈ ಸರಳಮಾರ್ಗವನ್ನು ಅನುಸರಿಸದೆ ಕೊನೆಯಿಲ್ಲದ ದುಃಖ ಮತ್ತು ಯಾತನೆಯನ್ನನುಭವಿಸುವರೆಂದು ಕವಿ ವಿಷಾದಿಸುತ್ತಾನೆ.

'ಅನಂತ ವೈಕುಂಠ ಮುಕುಂದ ಕೃಷ್ಣ ಗೋವಿಂದ ದಾಮೋದರ ಮಾಧವೇತಿ ।
ವಕ್ತುಂ ಸಮರ್ಥೋಽಪಿ ನ ವಕ್ತಿ ಕಶ್ಚಿತ್ ಅಹೋ ಜನಾನಾಂ ವ್ಯಸನಾಭಿಮುಖ್ಯಮ್ ॥ 37 ॥

ಇದು ಆಶ್ಚರ್ಯಗಳಲ್ಲಿ ಆಶ್ಚರ್ಯವೆನ್ನುತ್ತಾನೆ, ಕುಲಶೇಖರ. ಇದೇ ಭಾವನೆ ವ್ಯಾಸರ ಬಾಯಿಂದ ಮಹಾಭಾರತದಲ್ಲಿ ವ್ಯಕ್ತವಾಗಿದೆ.

'ಮುಕುಂದಮಾಲಾ' ಕೇವಲ ಒಂದು ಶ್ರೇಷ್ಠ ಭಕ್ತಿಕಾವ್ಯ ಮಾತ್ರವಲ್ಲ. ಅದು ಅತ್ಯಂತ ರಮಣೀಯವಾದ ಸಾಹಿತ್ಯರತ್ನವೂ ಹೌದು. ಅದನ್ನು ಓದುವುದೇ ಒಂದು ಆನಂದ. ಜ್ಞಾಪಕದಲ್ಲಿರಿಸಿಕೊಳ್ಳಲು ಅತ್ಯಂತ ಸುಲಭವಾಗಿರುವ ಈ ಪದ್ಯಗಳು ತಮ್ಮ ಪದಗಳ ರಮ್ಯ ಓಟ, ಪ್ರಾಸಗಳ ಸಮುಚಿತವಾದ ಪ್ರಯೋಗ, ಮನವನ್ನು ಮೋಡಿಮಾಡುವ ಶಬ್ದಜಾಲದಿಂದ ರಂಜಿಸುತ್ತವೆ.

ಮಾಭೀರ್ಮಂದಮನೋ ವಿಚಿಂತ್ಯ ಬಹುಧಾ ಯಾಮೀಶ್ಚಿರಂಅ ಯಾತನಾಃ
ನಾಮೀನಃ ಪ್ರಭವಂತಿ ಪಾಪರಿಪವಃ ಸ್ವಾಮೀ ನನು ಶ್ರೀಧರಃ ॥
ಆಲಸ್ಯಂ ವ್ಯಪನೀಯ ಭಕ್ತಿಸುಲಭಂ ಧ್ಯಾಯಸ್ವನಾರಾಯಣಂ
ಲೋಕಸ್ಯ ವ್ಯಸನಾಪದನೋದನಕರೋ ದಾಸಸ್ಯ ಕಿಂ ನ ಕ್ಷಮಃ ॥ 77 ॥

ಇಲ್ಲಿನ ಅನುಪ್ರಾಸದ ಸೊಬಗು ನೀಡುವ ಆನಂದ ಅನುಭವೈಕ ವೇದ್ಯ. ಒಟ್ಟಿನಲ್ಲಿ 'ಮುಕುಂದಮಾಲಾ' ಹೆಸರಿಗೆ ತಕ್ಕಂತೆ ಕೃಷ್ಣದಿವ್ಯನಾಮಗಳ ರತ್ನಮಾಲೆಯಾಗಿ ಆಬಾಲವೃದ್ಧರಾದಿಯಾಗಿ ಸಕಲರ ಹೃದಯಾವರ್ಜಕ ಕೃತಿಯಾಗಿ ಭಕ್ತಿ ಸಾಹಿತ್ಯದಲ್ಲಿ ಶಾಶ್ವತ ಸ್ಥಾನಗಳಿಸಿದೆ.

ಭಗವದ್ಗೀತಾ ಕಿಂಚಿದಧೀತಾ

ವಿದ್ವಾನ್ ಶ್ರೀ ಎಂ. ಸುಬ್ರಹ್ಮಣ್ಯ ಭಟ್, ಮುಡಿಪು, ಕುರ್ನಾಡು

ಭಗವದ್ಗೀತೆಯು ಹೇಗೆ ಸಾರ್ವಕಾಲಿಕ – ಸಾರ್ವದೇಶಿಕ ಮಾನವ ಜನಾಂಗದ ತಾರಕ ಮೌಲ್ಯಗಳನ್ನು ಹೊಂದಿದೆ ಎಂದು ಸ್ಪಷ್ಟವಾಗಿ ನಿರುಪಿಸುವ ಈ ಲೇಖನ ಬರೆದಿರುವ ವಿದ್ವಾನ್ ಮುಡಿಪು ಸುಬ್ರಹ್ಮಣ್ಯ ಭಟ್ಟರು ಶಾಲಾ ಅಧ್ಯಾಪಕರಾಗಿ ವಿದ್ಯಾರ್ಥಿಗಳಿಗೆ ಸದ್ವಿದ್ಯೆಯನ್ನು ದಾನಮಾಡಿ ನಿವೃತ್ತರಾದ ಬಳಿಕವೂ ಸದ್ಧರ್ಮ ಪ್ರಚಾರ ನಿರತರಾಗಿರುವ ನಿಷ್ಠಾವಂತರು. ಈ ವಿಚಾರಪೂರ್ಣ ಲೇಖನಕ್ಕಾಗಿ ಅವರಿಗೆ ಹಾರ್ದಿಕ ಅಭಿನಂದನೆಗಳು.

– ಸಂಪಾದಕ

ಭಗವದ್ಗೀತೆಯ ಹೆಸರು ಕೇಳಿದರೆ ಸಾಕು, ಎಲ್ಲ ಶ್ರದ್ಧಾಳುಗಳ ಮನಸ್ಸು ಪುಳಕಗೊಳ್ಳುತ್ತದೆ, ಸಚ್ಚಿಂತನೆಗೆ ನಾಂದಿ ಹಾಡುತ್ತದೆ. ಯುದ್ಧರಂಗದಲ್ಲಿ ವಿಷಾದಕ್ಕೊಳಗಾದ ಅರ್ಜುನನನ್ನು ಎಚ್ಚರಿಸಲು ಶ್ರೀಕೃಷ್ಣಪರಮಾತ್ಮನು ಭಗವದ್ಗೀತೆಯನ್ನು ಬೋಧಿಸಿದ ಎಂದು ನಾವೆಲ್ಲರೂ ತಿಳಿದಿದ್ದೇವೆ. ನರ – ನಾರಾಯಣರೇ ಆಗಿರುವ ಅರ್ಜುನ ಮತ್ತು ಶ್ರೀಕೃಷ್ಣರಿಗೆ ಇಂತಹ ಶ್ರವಣ ಉಪದೇಶಗಳ ಅಗತ್ಯವಿತ್ತೇ ಎನ್ನುವ ಪ್ರಶ್ನೆಗೆ

'ಅಸಂಭವಂ ಹೇಮಮೃಗಸ್ಯ ಜನ್ಮ ತಥಾಪಿ ರಾಮೋ ಲುಲುಭೇ ಮೃಗಾಯ
ಪ್ರಾಯಃ ಸಮಾಪನ್ನ ವಿಪತ್ತಿಕಾಲೇ ಧಿಯೋಽಪಿ ಪುಂಸಾಂ ಮಲಿನೀಭವಂತಿ'

ಎಂಬುದು ಉತ್ತರವಾಗಬಹುದೇನೋ. ಆದರೆ ಎಂದು ಎಚ್ಚರತಪ್ಪದ ಶ್ರೀಕೃಷ್ಣ ಬುದ್ಧಿಯನ್ನು ಮಲಿನಮಾಡಿಕೊಂಡ ಅರ್ಜುನನ ಮನಸ್ಸನ್ನು ತೊಳೆದು ಅವನನ್ನು ವಿಷಾದಯೋಗದಿಂದ ಪಾರುಮಾಡಿದ. ತತ್ಪರಿಣಾಮವಾಗಿ ಪಾಂಡವರಿಗೆ 'ವಿಪತ್ತಿಕಾಲ' ಒದಗಿ ಬರಲಿಲ್ಲ. ಶ್ರೀಕೃಷ್ಣ ಅರ್ಜುನನನ್ನು ಮಾತ್ರ ವಿಷಾದಯೋಗದಿಂದ ಪಾರುಮಾಡಿದನೇ? ಖಂಡಿತಾ ಅಲ್ಲ, ನಮ್ಮೆಲ್ಲರನ್ನೂ ಪಾರು ಮಾಡಿದ್ದಾನೆ. ಆದರೆ ಮೆಕಾಲೆಯ ಆಡುಂಬೊಲದ ಬಲಿಪಶುಗಳಾಗಿರುವ ನಮಗೆ ಬಿಡುಗಡೆ ಸಿಗಬೇಕಾದರೆ ಭಗವದ್ಗೀತೆಯ ಜ್ಞಾನ ನಮ್ಮ ಹೃದ್ಗತವಾಗಬೇಕಿದೆ, ನಾವೆಲ್ಲರೂ ಭಗವಂತನಿಗೆ ಮೆಚ್ಚುಗೆಯಾಗುವಂತಹ ಕೆಲಸಗಳನ್ನೇ ಮಾಡಬೇಕಿದೆ. ಇಂತಹ ಕೆಲಸಗಳಿಂದ ಮಾತ್ರ ನಾವು ಭಗವಂತನಿಗೆ ಪ್ರಿಯರಾಗುತ್ತೇವೆ. **'ಇಂತಿಂತಹವರು'** ನನಗೆ ಪ್ರಿಯರು ಎಂದು ಅರ್ಜುನನಿಗೆ ಶ್ರೀಕೃಷ್ಣನು ಹೇಳಿದ ಮಾತುಗಳನ್ನು ನಾವಿಲ್ಲಿ ಸ್ಮರಿಸಿಕೊಳ್ಳಬೇಕಿದೆ.

ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯವೇ ಭಕ್ತಿಯೋಗ. ಭಗವಂತನು ಭಕ್ತಿಗೆ ಒಲಿಯುತ್ತಾನೆ. ಹಾಗಿದ್ದರೆ 'ಭಕ್ತ'ನಾದವನು ಹೇಗಿರಬೇಕು? ಅವನಲ್ಲಿರಬೇಕಾದ ಗುಣಗಳಾವುವು? ಎಂಬ ಪ್ರಶ್ನೆಗಳಿಗೆ ಇದೇ ಅಧ್ಯಾಯದ **'ಅದ್ವೇಷ್ಟಾ ಸರ್ವಭೂತಾನಾಂ...'** ಎಂಬ ಶ್ಲೋಕದವರೆಗಿನ ಎಂಟು ಶ್ಲೋಕಗಳು ವಿವರಣೆ ನೀಡುತ್ತವೆ.

''ಯಾವ ಜೀವಿಯನ್ನು ದ್ವೇಷಿಸದ, ಎಲ್ಲರಿಗೂ ಗೆಳೆಯನಾದ, ಕರುಣಾಮಯನಾದ, 'ಇದು ನನ್ನದು' ಎಂದು ತಿಳಿಯದ, 'ನಾನು' ಎಂಬ ಅಹಂಕಾರವನ್ನು ಕಳೆದುಕೊಂಡ, ದುಃಖದಲ್ಲಿ ಕುಗ್ಗದ, ಸುಖದಲ್ಲಿ ಹಿಗ್ಗದ, ಸಹನಶೀಲನಾದ, ಸದಾ ಸಂತುಷ್ಟನಾದ, ಮನಸ್ಸನ್ನು ಭಗವಂತನಲ್ಲಿರಿಸಿದ, ತನ್ನನ್ನು ನಿಯಂತ್ರಣದಲ್ಲಿಟ್ಟುಕೊಂಡ, ದೃಢನಂಬುಗೆಯುಳ್ಳ, ಮನಸ್ಸನ್ನು ಮತ್ತು ಬುದ್ಧಿಯನ್ನು ಭಗವಂತನಿಗೆ ಅರ್ಪಿಸಿದ, ತನ್ನ ನಡೆನುಡಿಗಳಿಂದ ಇತರರಿಗೆ ದ್ವೇಷ ಉಂಟಾಗದ, ಇತರರ ವ್ಯವಹಾರಗಳಿಂದ ಕೋಪಗೊಳ್ಳದ, ಸಂತೋಷ – ಸಿಟ್ಟು – ಭಯ – ಉದ್ವೇಗ ಇವುಗಳಿಂದ ಮುಕ್ತನಾದ, ಬಯಕೆಗಳಿಲ್ಲದ, ಶುಚಿಯೂ – ದಕ್ಷನೂ ಆದ, ತನ್ನ ವಿಷಯದಲ್ಲಿ ನಿಶ್ಚಿಂತನಾದ, ಮನಸ್ಸಿಗೆ ಖಿನ್ನತೆಯನ್ನು ತಂದುಕೊಳ್ಳದ, ಸ್ವಾರ್ಥಿಯಾಗದ, ಹರ್ಷಾತಿರೇಕಕ್ಕೆ

ಒಳಗಾಗದ, ದ್ವೇಷರಹಿತನಾದ, ಶೋಕಗ್ರಸ್ತನಾಗದ, ಆಶೆಗಳಿಂದ ದೂರನಾದ, ಶುಭ –ಅ ಶುಭಗಳಲ್ಲಿ ಭೇದವನ್ನೆಣಿಸದ, ಶತ್ರು – ಮಿತ್ರರಲ್ಲಿ ಸಮಾನಭಾವ ಹೊಂದಿದ, ಮಾನ – ಅಪಮಾನಗಳನ್ನು ಸಮತ್ವದಿಂದ ಕಾಣುವ, ಜಗತ್ತಿನ ಎಲ್ಲ ದ್ವಂದ್ವ (ಸುಖ – ದುಃಖ, ಶೀತೋಷ್ಣ)ಗಳನ್ನೂ ಸಮವೆಂದೆಣಿಸುವ, ಲೋಕಬಂಧನಕ್ಕೆ ಅಂಟಿಕೊಳ್ಳದ, ನಿಂದೆ – ಸ್ತುತಿಗಳಿಗೆ ವಶನಾಗದ, ಮಿತಭಾಷಿಯಾದ, ಭಗವಂತನು ಕರುಣಿಸಿದುದರಲ್ಲಿ ತೃಪ್ತಿಹೊಂದುವ, 'ತನ್ನಮನೆ' 'ತನ್ನ ಜನ' ಎಂಬ ಸಂಕುಚಿತ ಭಾವನೆಯಿಲ್ಲದ ಮತ್ತು ದೃಢಬುದ್ಧಿಯುಳ್ಳ ವ್ಯಕ್ತಿಯೇ ತನಗೆ ಪ್ರಿಯನಾದ ಭಕ್ತನು'' ಎಂದು ಶ್ರೀಕೃಷ್ಣ ಅರ್ಜುನನಿಗೆ ತಿಳಿಸಿದ. ಇದನ್ನು ಹೃದ್ಗತ ಮಾಡಿಕೊಂಡ ಅರ್ಜುನ ಉದ್ಧಾರವಾದ.

ಎಂಟು ಶ್ಲೋಕಗಳಲ್ಲಿ ವರ್ಣಿಸಲ್ಪಟ್ಟ ಭಕ್ತನಲ್ಲಿರಬೇಕಾದ ಗುಣಗಳಲ್ಲಿ ಒಂದೊಂದು ಗುಣಕ್ಕೂ ಪುಟಗಟ್ಟಲೆ ವಿವರಣೆ ನೀಡಲು ಸಾಧ್ಯವಿದೆ. ಇಂತಹ ಗುಣಗಳನ್ನು ಪ್ರಭುಗಳು (ಕಾರ್ಯಾಂಗ – ಶಾಸಕಾಂಗ – ನ್ಯಾಯಾಂಗ) ಮತ್ತು ಪ್ರಜೆಗಳು (ಜನತೆ) ನಿಜ ಜೀವನದಲ್ಲಿ ರೂಢಿಸಿಕೊಂಡರೆ ಯಾವ ಸಮಸ್ಯೆಗಳೂ ಇರದು. ಇಂತಹ ಗುಣಗಳನ್ನು ಅರ್ಥೈಸಿಕೊಳ್ಳದ ನಾವು ಕುರೂಪಿಯು ಕನ್ನಡಿಯನ್ನು ದೂಷಿಸಿದಂತೆ ಅಮೂಲ್ಯ ಸನಾತನ ಗ್ರಂಥಗಳನ್ನೂ, ಅವುಗಳಲ್ಲಿ ತಿಳಿಸಿದ ಗುಣಗಳನ್ನೂ ದ್ವೇಷಿಸುತ್ತಾ ಬಂದಿದ್ದೇವೆ.

ಇಂದಿನ ಕಲುಷಿತ ರಾಜಕಾರಣದ ವಿಮೋಚನೆಗೆ ಭಗವದ್ಗೀತೆ ದಿವ್ಯಮಂತ್ರವಾಗಬಲ್ಲದು. ರಾಜಕಾರಣಿಯಾದವನು ಭಕ್ತನ ಪ್ರತಿಯೊಂದು (ಹೋಗಲಿ ಕೆಲವನ್ನಾದರೂ) ಗುಣವನ್ನು ತನ್ನಲ್ಲಿ ಅಳವಡಿಸಿಕೊಂಡರೆ ಆತ ಪ್ರಜಾದೇವರುಗಳಿಗೆ (ರಾಜಕಾರಣಿಗಳಿಗೆ ಮತದಾರ ಜನರೇ ದೇವರುಗಳು!) ಪ್ರಿಯನಾಗುತ್ತಾನೆ.

ಇಂದಿನ ಕುತ್ಸಿತಮನಸ್ಸಿನ ಬುದ್ಧಿಜೀವಿಗಳು, ಕುಟಿಲ ತಂತ್ರಗಾರಿಕೆಯ ಸ್ವಾರ್ಥಸಾಧಕ ರಾಜಕಾರಣಿಗಳು, ವಿಕೃತ ಮಾಧ್ಯಮಗಳು (ಪತ್ರಿಕಾ + ದೃಶ್ಯ) ಯಾರನ್ನೂ ಭಕ್ತರನ್ನಾಗಲು ಬಿಡುವುದಿಲ್ಲ. ಎಲ್ಲರೂ ಭಕ್ತರಾದರೆ ನಾಸ್ತಿಕರಿಗೆ ಅಸ್ತಿತ್ವವೆಲ್ಲಿಂದ? ಲೋಕದಲ್ಲಿ ಅವರೂ ಇರಬೇಡವೇ? ಸಮಯಸಾಧಕರ ಬೇಳೆ ಬೇಯಬೇಡವೇ?

ಅಂದು ಗುಣಕರ್ಮವಿಭಾಗಶಃ ಸೃಷ್ಟಿಯಾದ ಚಾತುರ್ವರ್ಣ್ಯ ಇಂದು ಸ್ವಾರ್ಥಸಾಧನೆಯ, ದ್ವೇಷಸಾಧನೆಯ, ಮೇಲು – ಕೀಳಿನ ಜಾತಿ ವಿಭಜನೆಗೆ ತುತ್ತಾಗಿರುವುದು ಕಾಲ ವಿಪರ್ಯಾಸವೇ ಸರಿ. ಅಂದಿನ ಉದಾತ್ತ ಚಿಂತನೆಯಲ್ಲಿ ಹುಳುಕು (ಇಲ್ಲದಿದ್ದರೂ)ಗಳನ್ನೇ ಹುಡುಕುವ ಹೊಲಸುಮನಸ್ಸಿನ ಬೆರಳೆಣಿಕೆಯಷ್ಟು 'ಮಂದಿ' ಸಜ್ಜನರ ಜೀವನದೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ.

ಒಂದೆಡೆ ಡಿ.ವಿ.ಜಿ.ಯವರು ಭಗವದ್ಗೀತೆಯನ್ನು ಕುರಿತು ಹೀಗೆ ಹೇಳಿದ್ದಾರೆ:–
''ಆಸ್ತಿಕರಾದ ಸಮಸ್ತ ಮನುಜಕೋಟಿಗೆ ಒಂದು ಸಮಗ್ರ ಸಮ್ಯಗ್ ಜೀವನದರ್ಶನವನ್ನು ಮಾಡಿಸುವ ಮೂಲಕ ಭಗವದ್ಗೀತೆ ನಮಗೆ ಮಹೋಪಕಾರವೆಸಗಿದೆ. ಶ್ರುತಿ ಸ್ಮೃತಿಗಳನ್ನು ನಂಬಿರುವ ಹಿಂದೂ ಜನರು (ಸನಾತನರು) ಮಾತ್ರವಲ್ಲದೆ ಪಾರಸಿಕ, ಕ್ರೈಸ್ತ, ಮುಸ್ಲಿಮಾದಿ ಸಕಲಮತಗಳವರೂ **ಸ್ವಮತವಿರೋಧವಿಲ್ಲದೆ** ಅಂಗೀಕರಿಸಬಹುದಾದ ಜೀವನದರ್ಶನ ಗೀತೆಯದು. ಭಗವದ್ಗೀತೆಯ ಬೋಧನೆ ಯಾವ ಅಂಶದಲ್ಲೂ ಮನುಷ್ಯಬುದ್ಧಿಯ ಹೇತು ವಿಚಾರ ಪ್ರವೃತ್ತಿಗೆ ಪ್ರತಿಕೂಲವಾಗಿಲ್ಲ. ಭಗವದ್ಗೀತೆಯಲ್ಲಿ **ಪಕ್ಷೈಕವಾದವಿಲ್ಲ, ಮತಪಾಷಂಡತ್ವವಿಲ್ಲ, ಅನ್ಯಾಭಿಪ್ರಾಯ ಅಸಹನೆಯಿಲ್ಲ.**''

ಇಷ್ಟನ್ನು ನಾವು ಅರ್ಥಮಾಡಿಕೊಂಡರೆ ಸಾಕಲ್ಲವೇ? ಆದರೆ ನಾವು ಎಡಬಿಡಂಗಿಗಳೂ, ಅಹಂಕಾರ ವಿಮೂಢಾತ್ಮರೂ ಆಗಿ ದೊಡ್ಡದಾದ ಮಾನವ ಜನ್ಮವನ್ನು ಹಾಳುಮಾಡಿ ಹುಚ್ಚಪ್ಪಗಳಾಗುತ್ತಿದ್ದೇವೆ!

ಸ್ವಯಂಪ್ರಕಾಶ ಪ್ರಕಟಣೆಯ 10 ವರ್ಷ

ಹುಟ್ಟುಕುರುಡರಾಗಿದ್ದ ಮಹಾಜ್ಞಾನಿ (ಗುಲಾಬ್‌ರಾವ್ ಮಹಾರಾಜ್)

ವೇ.ಬ್ರಂ ಶ್ರೀ ಆಸ್ಥಾನ ವಿದ್ವಾನ್ ಎಂ.ವಿ. ನರಸಿಂಹ ಮೂರ್ತಿ ಶಾಸ್ತ್ರೀ, ಬಾಕುರ್ಡಿ (ಬೆಂಗಳೂರು)

ವೇ.ಬ್ರಂ. ಶ್ರೀ ವಿದ್ವಾನ್ ಎಂ.ವಿ. ನರಸಿಂಹ ಮೂರ್ತಿ ಶಾಸ್ತ್ರಿಗಳು ಶೃಂಗೇರಿ ಜಗದ್ಗುರು ಪೀಠದ ಸಂಸ್ಕೃತ ಪಾಠಶಾಲೆ, ಬೆಂಗಳೂರು, ಶ್ರೀ ಶೃಂಗೇರಿ ಶಂಕರಮಠದ ವಿದ್ಯಾನಿಲಯಗಳಲ್ಲಿ ಅಧ್ಯಯನ ಮಾಡಿ ವಿದ್ವತ್ಪದವಿ ಪಡೆದು ಶೃಂಗೇರಿಯ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಅಧ್ಯಾಪಕರಾಗಿ, ಆಸ್ಥಾನ ವಿದ್ವಾನ್ ಗೌರವಕ್ಕೆ ಪಾತ್ರರಾಗಿದ್ದು, ಈಚೆಗೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

– ಸಂಪಾದಕ

ಸದಾಶಿವ ಸಮಾರಂಭಾಂ ಶಂಕರಾಚಾರ್ಯ ಮಧ್ಯಮಾಂ।
ಅಸ್ಮದಾಚಾರ್ಯಪರ್ಯಂತಾಂ ವಂದೇ ಗುರುಪರಂಪರಾಂ॥

ಇಸವಿ 1966 ಸೆಪ್ಟೆಂಬರ್ ಸುಮಾರಲ್ಲಿ ನಾನು ಶೃಂಗಗಿರಿ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ದೇಶ ಸಂಚಾರ ಕಾಲದಲ್ಲಿ ಅವರ ಜೊತೆಯಲ್ಲಿದ್ದ ಸಮಯ. ಶ್ರೀಗಳು ಮಹಾರಾಷ್ಟ್ರದ ನಾಗಪುರ ಪಟ್ಟಣದಲ್ಲಿ ತಮಿಳರಿಂದ ನಡೆಸಲ್ಪಡುವ 'ಸರಸ್ವತೀ ವಿದ್ಯಾನಿಲಯ'ದಲ್ಲಿ ತಂಗಿದ್ದರು. ನಾವು ಪರಿವಾರದವರೆಲ್ಲಾ ಸಮೀಪದಲ್ಲಿರುವ 'ಅಯಾಚಿತ ಮಂದಿರ'ವೆಂಬ ಧರ್ಮ ಛತ್ರದಲ್ಲಿ ತಂಗಿದ್ದೆವು. ಒಂದು ಮಧ್ಯಾಹ್ನ ನಾಲ್ಕು ಗಂಟೆಗೆ 'ಗುಣಾಕರ ಶರ್ಮಾ' ಎಂಬವರು ಜಗದ್ಗುರುಗಳವರ ದರ್ಶನಕ್ಕೆ ಬಂದರು. ಆ ಗುಣಾಕರ ಶರ್ಮರು ಶ್ರೀಗಳಿಗೆ ಗೌರವಪೂರ್ವಕವಾಗಿ ತಮ್ಮ ಶ್ರದ್ಧೆಗೆ ಪಾತ್ರರಾದ 'ಗುಲಾಬ್‌ರಾವ್ ಮಹಾರಾಜ್' ಎಂಬುವರು ಬರೆದ 'ಸೂಕ್ತಿರತ್ನಾವಳೀ' ಎಂಬ ಗ್ರಂಥವನ್ನು ಸಮರ್ಪಿಸಿದರು. ಇದಕ್ಕೆ 'ಷೋಡಶಯಷ್ಟಿ' ಎಂದೂ ಹೆಸರು. 'ಯಷ್ಟಿ' ಎಂದರೆ ಊರುಗೋಲು. ಹುಟ್ಟುಕುರುಡರಾಗಿದ್ದ ಇವರು ಈವರೆಗೆ ಸಂಸ್ಕೃತದಲ್ಲೇ 15 ಗ್ರಂಥಗಳನ್ನು ಬರೆದಿದ್ದು, ಈ ಗ್ರಂಥವು 16ನೆಯದು. ಆದ್ದರಿಂದ ಈ ಹೆಸರು. ಎಲ್ಲವೂ ಶಾಸ್ತ್ರಪಂಕ್ತಿಯಲ್ಲೇ ಬರೆಯಲ್ಪಟ್ಟಿದ್ದವು. ಇವರು ಬಾಲ್ಯದಲ್ಲಿ ಯಾವುದೋ ಕಾಯಿಲೆಗೆ ತುತ್ತಾಗಿ ಮೂರು ತಿಂಗಳು ಕಣ್ಣು ಮುಚ್ಚಿಯೇ ಇದ್ದರಂತೆ. ಹಾಗಾದ್ದರಿಂದ ಅವರಿಗೆ ಆಗಲೇ ಕುರುಡುತನ ಬಂದು, ಶಾಶ್ವತವಾಗಿ ಉಳಿಯಿತು ಕೂಡ. ನಾಲ್ಕೈದನೇ ವರ್ಷದಲ್ಲಿ ಚಪ್ಪಾಳೆ ತಟ್ಟುವುದು, ನಗುವುದು ಇಂತಹ ವಿಚಿತ್ರ ವರ್ತನೆ ಇವರದ್ದಾಗಿತ್ತು. ಈ ಗುಲಾಬ್‌ರಾವ್ ಅವರು ಹಾಸಿಗೆಗೆ ಬೆಂಕಿಯಿಟ್ಟು ಅದು ತೈಲಾಂಶವನ್ನು ಮಾತ್ರಾ ಸುಟ್ಟರೂ, ಹಾಸಿಗೆಗೆ ಏನೂ ಆಗುತ್ತಿರಲಿಲ್ಲವಂತೆ. ಇದನ್ನು ನೋಡಿದ ಜನರು ಇವರಲ್ಲಿ ಯಾವುದೋ ಒಂದು ಅಲೌಕಿಕ ಶಕ್ತಿಯಿದೆಯೆಂದು ಗುರುತಿಸಿ ಗೌರವಿಸುತ್ತಿದ್ದರು. ಅವರ ಹುಟ್ಟೂರು ಮಹಾರಾಷ್ಟ್ರದ ಅಮರಾವತಿಯ 'ಮಾಧಾನ'ವೆಂಬ ಗ್ರಾಮ. ಇವರ ಕೀರ್ತಿ ಸುತ್ತಮುತ್ತಲೂ ಹರಡುತ್ತಾ ಇತ್ತು. ಹೀಗೆ ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತಿದ್ದ ಇವರು 15ನೇ ವಯಸ್ಸಿನಲ್ಲಿದ್ದಾಗ ಇವರ ಬಾಯಿಂದ ಅಭಂಗ ಸಂಸ್ಕೃತವಾಣಿ ತಾನಾಗಿಯೇ ಹರಿಯತೊಡಗಿತು. ಪರಮ ಪೂಜ್ಯ ಜ್ಞಾನೇಶ್ವರರಿಂದ ರಚಿತವಾದ ಜ್ಞಾನೇಶ್ವರೀಯನ್ನು ಕುರಿತು ನಿತಾಂತ ಗಂಭೀರ ಶೈಲಿಯಲ್ಲಿ ತತ್ತ್ವ ಪರಿಪೂರ್ಣವಾದ, ಭಕ್ತಿರಸ ಪ್ರಧಾನವಾದ ಪ್ರವಚನಗಳನ್ನು ನೀಡುತ್ತಾ ಇರುತ್ತಿದ್ದರು. ಇದರಿಂದ ಭಗವತ್ ಭಕ್ತಿ ಪರಾಯಣರಾದ ಮೃದು ಹೃದಯಿಗಳು ಮಾತ್ರವಲ್ಲದೇ ನಿರೀಶ್ವರವಾದಿಗಳಾಗಿ ನಾನಾ ಕುತರ್ಕವನ್ನು ಮಾಡುತ್ತಿದ್ದ ಸುಶಿಕ್ಷಿತರೆಂದು ತಮ್ಮನ್ನು ಅಂದು ಕೊಳ್ಳುತ್ತಿದ್ದವರೂ ಸಹ, ಇವರ ಮಾತಿನಿಂದ ಮನಕರಗಿ ಅವರ ಪದತಲದಲ್ಲಿ ಸತಮಸ್ತಕರಾಗಿದ್ದರೆಂದು ತಿಳಿದವರು ಅವರ ಬಗ್ಗೆ ಬರೆದಿದ್ದಾರೆ.

ಹೀಗೆ ಅವರ ಬಾಲ್ಯವು ಕಳೆಯುತ್ತಿದ್ದಾಗ ಅವರ ಗ್ರಾಮದಲ್ಲಿ 'ಸೀತಾರಾಮ್ ಜೀ ಭೋಯರ್' ಎಂಬ ಗೃಹಸ್ಥರ ಮನೆಗೆ ಗುಲಾಬ್ ರಾವ್ ಆಗಾಗ ಹೋಗಿಬರುತ್ತಿರುವುದು ಪರಿಪಾಠವಾಗಿತ್ತು. ಒಂದು ದಿನ ಆ ಸೀತಾರಾಮ್ ಜೀ ಅವರು ತಮಾಷೆಗೆ ಒಂದು ಗಟ್ಟಿಯಾದ ನೀರಿನಿಂದ ತುಂಬಿದ ಗಟ್ಟಿಗರಟದ ತೆಂಗಿನಕಾಯಿಯನ್ನು ಕೊಟ್ಟು ಇದನ್ನು ನಿನ್ನ ಮುಷ್ಟಿಯಿಂದ ಒಂದೇ ಗುದ್ದಿಗೆ ಒಡೆದರೆ ನಿನಗೆ ನನ್ನ ಮೊಮ್ಮಗಳನ್ನು ಕೊಟ್ಟು ವಿವಾಹ ಮಾಡುತ್ತೇನೆಂದು ಹೇಳಿದರು. ಇದನ್ನು ಕೇಳಿದ ಗುಲಾಬ್ ರಾವ್ ಅವರು ಹಾಗೆಯೇ ಆಗಲಿ ಎಂದು ಒಂದೇ ಗುದ್ದಿಗೆ ಆ ತೆಂಗಿನಕಾಯಿಯನ್ನು ಒಡೆದರು. ಹೇಳಿದಂತೆ ಆ ಗೃಹಸ್ಥರು ತಮ್ಮ ಮೊಮ್ಮಗಳನ್ನು ಮದುವೆ ಮಾಡಿಕೊಟ್ಟರು. ಆಕೆಯ ಹೆಸರು 'ಮಣಿಕರ್ಣಿತಾ ಬಾಯೀ'. ಆಕೆ ಸಾಧ್ವಿಯಾಗಿ ಇದ್ದು ಪತಿಪರಾಯಣೆಯಾಗಿ ಪರಮಾರ್ಥ ವಿಚಾರಕ್ಕೆ ಉಚಿತವಾದ ಆಚಾರವುಳ್ಳವಳಾಗಿ ಅಧ್ಯಾತ್ಮ ಸಾಧನೆಯಲ್ಲಿ ಸಹಕಾರಿಣಿಯಾಗಿ ಕೊನೆಯವರೆಗೂ ಅನುಸರಿಸಿದ್ದರು.

ಆನಂತರ ದೇಶ ಸಂಚಾರಕ್ಕೆ ಹೊರಟು ಅವರು ತಮ್ಮ ವಾದ ಶೈಲಿಯಿಂದ ಮಹಾರಾಷ್ಟ್ರದ ಉದ್ದಗಲಕ್ಕೂ ಸಂಚರಿಸಿ ಪಾಖಂಡರ ದುರ್ಮತಗಳನ್ನು ಖಂಡಿಸಿದರು.

ವಿಶೇಷವೆಂದರೆ ಯಾರಲ್ಲೂ ವಿದ್ಯಾಭ್ಯಾಸ ಮಾಡದೇ ಹುಟ್ಟುಕುರುಡರಾಗಿದ್ದರೂ ಸಕಲ ಶಾಸ್ತ್ರಗಳಲ್ಲೂ, ಸಕಲ ಭಾಷೆಗಳಲ್ಲೂ ಪರಿಣಿತರಾಗಿದ್ದು ವೇದ - ವೇದಾಂತ ತರ್ಕ ವ್ಯಾಕರಣಾದಿ ಸಮಸ್ತ ವಿದ್ಯೆಗಳಲ್ಲೂ ಇವರ ವಾಣಿಯು ಅಸ್ಖಲಿತವಾಗಿ ಪ್ರವೃತ್ತವಾಗುತ್ತಿತ್ತು. ಈ ಗ್ರಂಥಗಳ ಪುಟ ಪಂಕ್ತಿಗಳಲ್ಲೂ ಅವರು ಉದ್ಧರಿಸುತ್ತಿದ್ದರು. ವೇದಾಧಿಕಾರವಿಲ್ಲದಿದ್ದರೂ ಈ ಅರ್ಥವುಳ್ಳ ವೇದವು ಇಂತಹ ಅಷ್ಟಕದಲ್ಲಿ ಇಂತಹ ಅಧ್ಯಾಯ ವರ್ಗಗಳಲ್ಲಿದೆಯೆಂದು ಹೇಳುತ್ತಿದ್ದರು. ಈ ವಿಷಯದಲ್ಲಿ ಅವರ ಗ್ರಂಥಗಳೇ ಸಾಕ್ಷಿಯಾಗಿವೆ.

ಈ ಷೊಡಶ ಯಷ್ಟಿ ಗ್ರಂಥದಲ್ಲಿ ಇವರು – ನಾರದೀಯ ಭಕ್ತಿ ಸೂತ್ರ ಭಾಷ್ಯಃ, ಬಾಲವಾಸಿಷ್ಠಂ, ಸಕಲ ಶಾಸ್ತ್ರ ವಿಷಯವಾಗಿ ''ಶಾಸ್ತ್ರ ಸಮನ್ವಯಃ, ಉಚ್ಚಿಷ್ಠ ಪುಷ್ಟಿ ಲೇಶಃ, ಶ್ರೀಧರೋಚ್ಚಿಷ್ಠ ಪುಷ್ಟಿಃ (ಇವೆಲ್ಲಾ ಭಕ್ತಿಗೆ ಸಂಬಂಧಪಟ್ಟವು) ತತ್ತ್ವ ಬೋಧೆ, ಆಗಮದೀಪಿಕಾ ಷಡ್ ದರ್ಶನ ಲೇಶ ಸಂಗ್ರಹಃ, ಯುಕ್ತಿತತ್ವಾನುಶಾಸನಂ, ಋಗ್ವೇದ ಟಿಪ್ಪಣೀ, ಸಚ್ಚಿನ್ನಿರ್ಣಯಃ, ಸಂಪ್ರದಾಯ ಕುಸುಮ ಮಧು, ಭಕ್ತಿತತ್ತ್ವ ವಿವೇಕಃ, ದುರ್ಗಾತತ್ತ್ವಂ, ಅಂತರ್ವಿಜ್ಞಾನ ಸಂಹಿತಾ, ಈಶ್ವರ ದರ್ಶನಂ, ಪ್ರಿಯಪ್ರೇಮೋನ್ಮಾದ, ಸ್ವಮತನಿರ್ಣಯ, ಶಿಶುಬೋಧವ್ಯಾಕರಣಂ, ಸ್ವರ ಸಂಧಿ ತಿಗಂತ, ಕಾವ್ಯ ಸೂತ್ರ ಸಂಹಿತಾ, ಭಿಷಗೀಂದ್ರಶಚೀಪ್ರಭಾ (ಆಯುರ್ವೇದ) ಮಾನಸಾಯುರ್ವೇದ – ಪುರಾಣ ಮೀಮಾಂಸಾ, ಪುರಾಣ ಮೀಮಾಂಸಾ ಸೂತ್ರಭಾಷ್ಯಂ, ನ್ಯಾಯ ಸೂತ್ರ ವಿವರಣಂ – ಇತ್ಯಾದಿ ಪ್ರಕರಣಗಳು. ಇವು ಯಷ್ಟಿ (16)ಯಲ್ಲಿವೆ. ಇನ್ನು ಅ5 ಯಷ್ಟಿಗಳು ಹೇಗಿದೆಯೋ ತಿಳಿಯದು. ಅವರು ತಮ್ಮ ಬಗ್ಗೆ,

ಉಮಾ, ಮಾತಾ, ಪಿತಾ ಶಂಭುರ್ಗುರುಜ್ಞಾನೇಶ್ವರೋ ಮಮ ।
ಪತಿಃ ಕೃಷ್ಣೋ ರಾಧಿಕಾದ್ಯಾ ಭಗಿನ್ಯೋ ಗೋಪಿಕಾ ಮಮ ॥

ಎಂಬುದಾಗಿ ಅಂದಿದ್ದಾರೆ. ಹೀಗೆ ವೇದ ಟಿಪ್ಪಣಿಯಲ್ಲಿ ಈ ಶ್ಲೋಕಗಳು ಕಂಡು ಬರುತ್ತವೆ. ನಮೇ ವೇದಾಧಿಕಾರೋ ಸ್ತಿ ಶೂದ್ರತ್ವಾದ್ಯದ್ಯಪಿ ಸ್ವಯಂ । ತಥಾಪಿ ಬ್ರಾಹ್ಮಣಾಲೋಭಾದ್ವೇದಂಪ್ಠೇತೀತಿ ದೃಶ್ಯತೇ ॥ ತತೋವೇದಂ ಪ್ರಣಮ್ಯೈವ ಕುರ್ವೇ ವೇದಾರ್ಥ ಟಿಪ್ಪಣೀಂ ಇತ್ಯಾದಿ. ಶಾಂಕರ ಸಿದ್ಧಾಂತವನ್ನು ವಿಶೇಷವಾಗಿ ಒಪ್ಪುವ ಭಾಷ್ಯ ಪಂಕ್ತಿಯನ್ನೂ ಉದ್ಧರಿಸುವ ಐದನೇ ಪುರುಷಾರ್ಥವಾಗಿ ಪರಮ ಭಕ್ತಿಯನ್ನು ಸಿದ್ಧಾಂತಪಡಿಸುವ ಇವರ ಗ್ರಂಥಗಳಲ್ಲಿ ಅಷ್ಟಾದಶ ವಿದ್ಯಾಸ್ಥಾನಗಳನ್ನೂ ಅಲ್ಲಲ್ಲಿ ಉಲ್ಲೇಖಿಸಿರುತ್ತಾರೆ. ''ಆತ್ಮಾರಾಮಾಶ್ಚ ಮುನಯೋ ನಿರ್ಗ್ರಂಥಾ ಅಪ್ಯುರುಕ್ರಮೇ । ಕುರ್ವಂತಹ್ಯಹೈತೇಶೀ ಭಕ್ತಿಂ ಇತ್ಥಂ ಭೂತಗುಣೋ ಹರಿಃ ॥ ಎಂಬ ಸಿದ್ಧಾಂತವನ್ನು ಸದಾಶಿವ ಬ್ರಹ್ಮೇಂದ್ರರಂತೆ ಅತ್ಯಂತವಾಗಿ ಒಪ್ಪಿಕೊಳ್ಳುತ್ತಾರೆ

ಸ್ವಯಂಪ್ರಕಾಶ ಪ್ರಕಟಣೆಯ 10 ವರ್ಷ

ಪೂರ್ಣಾವತಾರಿ ಶ್ರೀಕೃಷ್ಣ

ಯೋಗಶ್ರೀ ಕೆ. ಕೇಶವಮೂರ್ತಿ, ಮೈಸೂರು

ಮೈಸೂರಿನ ಭಾರತೀಯ ಸಂಸ್ಕೃತಿ ಕೇಂದ್ರ - ಪತಂಜಲಿ ಯೋಗ ಶಿಕ್ಷಣ ಕೇಂದ್ರ ಸ್ಥಾಪಿಸಿ ನಡೆಸುತ್ತಿರುವ ಯೋಗಾಚಾರ್ಯ ವೇ. ಬ್ರಂ. ಶ್ರೀ ಪ್ರೊ. ಕೆ. ಕೇಶವಮೂರ್ತಿಯವರು ಭಾರತೀಯ ಸನಾತನ ಸಂಸ್ಕೃತಿಯ ಪ್ರಸಾರದಲ್ಲಿ ನಿರತರಾಗಿರುವ ಬಹುಶ್ರುತ ಪಂಡಿತರು. ಗೀತಾಚಾರ್ಯ ಭಗವಾನ್ ಶ್ರೀಕೃಷ್ಣನ ಬಗ್ಗೆ ಸ್ವಯಂಪ್ರಕಾಶಕ್ಕೆ ಶ್ರೀಕೃಷ್ಣ ಜಯಂತೀ ಸಂದರ್ಭದಲ್ಲಿ ಕಳಿಸಿರುವ ಈ ಉಪಯುಕ್ತ ಲೇಖನವನ್ನು ವಿಶೇಷ ಸಂಚಿಕೆಯಲ್ಲಿ ಪ್ರಕಟಿಸುತ್ತ ಅವರಿಗೆ ಧನ್ಯವಾದ ಸಲ್ಲಿಸುತ್ತೇನೆ. - ಸಂಪಾದಕ

ಕರಾರವಿಂದೇನ ಪದಾರವಿಂದಂ ಮುಖಾರವಿಂದೇ ವಿನಿವೇಶಯಂತಮ್ ।
ವಟಸ್ಯ ಪತ್ರಸ್ಯ ಪುಟೇ ಶಯಾನಂ ಬಾಲಂ ಮುಕುಂದಂ ಮನಸಾ ಸ್ಮರಾಮಿ ॥

ಭಾರತೀಯ ಪೌರಾಣಿಕ ಹಾಗೂ ಆಧ್ಯಾತ್ಮಿಕ ವಾಙ್ಮಯದಲ್ಲಿ ಶ್ರೀಕೃಷ್ಣನಿಗೆ ಒಂದು ವಿಶೇಷ ಸ್ಥಾನ ಸಂದಿದೆ. ಅವನನ್ನು ದೇವತಾಂಶ ಸಂಭೂತನೆಂದೂ, ವಿಷ್ಣುವಿನ ದಶಾವತಾರಗಳಲ್ಲಿ ಒಬ್ಬನೆಂದೂ ತಿಳಿದು ಪೂಜಿಸುತ್ತಾರೆ. ಆತನ ಜಯಂತಿಯನ್ನು ಆಚರಿಸುತ್ತಾರೆ. ಭಕ್ತಪಂಥದವರಂತೂ ಶ್ರೀಕೃಷ್ಣನನ್ನು ಸಾಕ್ಷಾತ್ ವಿಷ್ಣುವೆಂದೇ ಭಾವಿಸುತ್ತಾರೆ. ಭಾರತೀಯರೇ ಅಲ್ಲದೆ ವಿದೇಶೀಯರು ಕೂಡ ಶ್ರೀಕೃಷ್ಣನ ಬಗ್ಗೆ ಭಕ್ತಿಗೌರವಗಳನ್ನು ವ್ಯಕ್ತಪಡಿಸುತ್ತಾರೆ. ಹರೇರಾಮ ಹರೇ ಕೃಷ್ಣ ಪಂಥದವರಿಗಂತೂ ಶ್ರೀಕೃಷ್ಣ ಆರಾಧ್ಯ ದೈವ. ವಿಷ್ಣುವಿಗಿಂತಲೂ ಅವರಿಗೆ ಕೃಷ್ಣನೇ ಅಧಿಕ. ಭಾರತಾದ್ಯಂತವಲ್ಲದೆ ವಿದೇಶಗಳಲ್ಲೂ ಸಹ ಶ್ರೀಕೃಷ್ಣನಿಗೆ ದೇವಾಲಯಗಳಿವೆ, ಮಹಾಭಾರತದಲ್ಲಿ ರಾಜಕೀಯ ಮುತ್ಸದ್ದಿಯಾಗಿ, ಐತಿಹಾಸಿಕ ಪುರುಷನಾಗಿ, ಕುರುಕ್ಷೇತ್ರ ಸಮರದ ಸೂತ್ರಧಾರನಾಗಿದ್ದ ಅಂದಿನ ಶ್ರೀಕೃಷ್ಣ ಎಂದಿನಿಂದ ಪೂಜಾರ್ಹನಾದ? ಮಠಮಂದಿರಗಳನ್ನು ವಿಗ್ರಹರೂಪದಲ್ಲಿ ಎಂದು ಪ್ರವೇಶಿಸಿದ? ಎಂಬ ಕುತೂಹಲ ನಮಗೆ ಸಹಜವಾಗಿಯೇ ಹುಟ್ಟುತ್ತದೆಯಲ್ಲವೇ?

ಪ್ರಾಚೀನ ವೈದಿಕ ಸಾಹಿತ್ಯವನ್ನು ಅವಲೋಕಿಸಿದಾಗ ನಮಗೆ ಮೂರು ಜನ ಕೃಷ್ಣರು ಕಂಡು ಬರುತ್ತಾರೆ. ಒಬ್ಬ ಋಗ್ವೇದ ಕೃಷ್ಣ ಇನ್ನೊಬ್ಬ ಕೌಶೀತಕೀ ಬ್ರಾಹ್ಮಣದ ಕೃಷ್ಣ, ಮತ್ತೊಬ್ಬ ಅರಣ್ಯಕದ ಹರಿತಕ ಕೃಷ್ಣ. ಆದರೆ ನಮ್ಮ ಈ ಕೃಷ್ಣ ಛಾಂದೋಗ್ಯೋಪನಿಷತ್ತಿನಲ್ಲಿ ಕಂಡು ಬರುವ ವೃಷ್ಣಿಕುಲದ ವಸುದೇವನ ಮಗ ವಾಸುದೇವ. ಈತನ ವಂಶವೃಕ್ಷ ಹೀಗಿದೆ. ನಮ್ಮ ಪ್ರಾಚೀನ ಭಾರತದಲ್ಲಿ ಎರಡು ರಾಜವಂಶಗಳು ಸುಪ್ರಸಿದ್ಧವಾಗಿವೆ. ಒಂದು ಸೂರ್ಯವಂಶ, ಇನ್ನೊಂದು ಚಂದ್ರವಂಶ. ಸೂರ್ಯವಂಶಕ್ಕೆ ಸೂರ್ಯ ಮೂಲಪುರುಷನಾದರೆ, ಚಂದ್ರವಂಶಕ್ಕೆ ಚಂದ್ರನೇ ಮೂಲ ಪುರುಷ.

ಬ್ರಹ್ಮಮಾನಸ ಪುತ್ರ ಅತ್ರಿ, ಅತ್ರಿಯ ಮಗ ಚಂದ್ರ, ಇವನಿಂದ ಚಂದ್ರವಂಶ ಆರಂಭವಾಯಿತು. ಚಂದ್ರನ ಮಗ ಬುಧ, ಇವನ ಮಗ ಪುರೂರವ. ಇವನಿಗೆ ಊರ್ವಶಿಯಲ್ಲಿ ಆಯು, ಇವನ ಮಗ ನಹುಷ - ಯಯಾತಿ. ಈ ಯಯಾತಿಯ ಮಗನೇ ಯದು. ಇವನೇ ಯದು ವಂಶಕ್ಕೆ ಮೂಲಪುರುಷ. ಈ ಯದುವಿನ ವಂಶದವರೇ ಯಾದವರು. ಶ್ರೀಕೃಷ್ಣ ಈ ವಂಶಕ್ಕೆ ಸೇರಿದವನು, ಆದಕಾರಣ ಅವನು ಯಾದವನಾದ. ಯದುವಿನ ಮಗ ಸಹಸ್ರಜಿತ್ತು - ಶತಜಿತ್ತು - ಹೇಹಯ - ಧರ್ಮ - ನೇತ್ರ - ಕುಂತಿ - ಭದ್ರಸೇನಕ - ಧನಿಕ - ಕೃತವೀರ್ಯ - ಕಾರ್ತವೀರ್ಯ - ಜಯಧ್ವಜ - ತಾಳಜಂಘ - ವೀತಿಹೋತ್ರ - ಮಧು - ವೃಷ್ಣಿ. ಇವನೇ ವೃಷ್ಣಿಕುಲದ ಮೂಲಪುರುಷ. ಶ್ರೀಕೃಷ್ಣ ಈ ಕುಲಕ್ಕೆ ಸೇರಿದವನು. ಆದ್ದರಿಂದಲೇ ಅವನು ವಾರ್ಷ್ಣೇಯನಾದ.

ವೃಷ್ಣಿಯ ಮಗ ಯುಧಾಜಿತ್ತು - ಅನಮಿತ್ರ - ಪೃಶ್ನಿ - ಚಿತ್ರರಥ - ವಿಡೂರಥ - ಶೂರ - ಭಜಮಾನ - ನಿಮಿ - ಸ್ವಯಂಭೋಜ - ಹೃದಿಕ - ದೇವಮೀಢ - ಶೂರ - ವಸುದೇವ - ಶ್ರೀಕೃಷ್ಣ ಭಗವದ್ಗೀತೆಯಲ್ಲಿ ''ವೃಷ್ಣೀನಾಂ ವಾಸುದೇವೋಸ್ಮಿ'' (10-37).

ಅಂದರೆ ವೃಷ್ಣಿಗಳಲ್ಲಿ ತಾನು ವಾಸುದೇವ ಎಂದು ಹೇಳಿಕೊಂಡಿದ್ದಾನೆ. ಶ್ರೀಕೃಷ್ಣನ ವೃತ್ತಾಂತವು ಭಾಗವತ ಮತ್ತು ಹರಿವಂಶಗಳಲ್ಲಿವೆ. ಕ್ರಿ.ಪೂ. 2ನೇ ಶತಮಾನದ ಪತಂಜಲಿ ಮಹರ್ಷಿಗಳು **''ಕಂಸ, ಕೃಷ್ಣ ವೈರಿ''** ಎಂದು ಹೇಳಿದ್ದಾರೆ. ಕ್ರಿ.ಪೂ. 4ನೇ ಶತಮಾನದಲ್ಲಿ ಗ್ರೀಕ್ ರಾಯಭಾರಿಯಾಗಿ ಭಾರತಕ್ಕೆ ಬಂದಿದ್ದ ಮೆಗಾಸ್ತನೀಸ್ ಎಂಬುವನು ತಾನಿಲ್ಲಿಗೆ ಬಂದಿದ್ದಾಗ ''ಜನ ಕೃಷ್ಣನನ್ನು ಪೂಜಿಸುತ್ತಿದ್ದರು'' ಎಂದು ಬರೆದಿದ್ದಾನೆ. ಸಂಸ್ಕೃತ ವೈಯಾಕರಣಿ ಪಾಣಿನಿಯು ಕ್ರಿ.ಪೂ. 8ನೇ ಶತಮಾನದ ವೇಳೆಗೆ ಶ್ರೀಕೃಷ್ಣಾರ್ಜುನರ ಪೂಜೆ ಬಳಕೆಯಲ್ಲಿತ್ತು ಎಂದು ಹೇಳಿದ್ದಾರೆ. ಈ ದಾಖಲೆಗಳನ್ನು ಪರಿಶೀಲಿಸಿದಾಗ ಈಗ್ಗೆ ಮೂರುಸಾವಿರ ವರ್ಷಗಳಿಂದ ಶ್ರೀಕೃಷ್ಣನು ಉಪಾಸ್ಯದೇವನಾಗಿ ಪೂಜಾರ್ಹನಾಗಿರಬೇಕೆಂಬ ಅಂಶ ಇದರಿಂದ ಬೆಳಕಿಗೆ ಬರುತ್ತದೆ. ಕಲಿಯುಗ ಹುಟ್ಟಿ ಇಂದಿಗೆ 5096 ವರ್ಷಗಳಾಗಿವೆ. ಅದಕ್ಕೆ ಸ್ವಲ್ಪ ಮೊದಲು ಅಂದರೆ ದ್ವಾಪರಯುಗದ ಅಂತ್ಯಕ್ಕೆ ಶ್ರೀಕೃಷ್ಣನಿದ್ದ. ಶ್ರೀಕೃಷ್ಣ ದೇಹತ್ಯಾಗ ಮಾಡಿದ 4000 ವರ್ಷಗಳ ಮೇಲೆ ಶ್ರೀಕೃಷ್ಣನ ಪೂಜೆ ಆರಂಭವಾಗಿರಬೇಕು. ಅದಕ್ಕೆ ಪೂರ್ವ ಆತನೊಬ್ಬ ರಾಜಕೀಯ ಚತುರನಾಗಿ, ಪಾಂಡವ ಪಕ್ಷಪಾತಿಯಾಗಿ, ಐತಿಹಾಸಿಕ ಪುರುಷನಾಗಿ ಪ್ರಖ್ಯಾತನಾಗಿದ್ದಿರಬೇಕು.

ಶ್ರೀಕೃಷ್ಣ ವಸುದೇವ ದೇವಕಿಯರಿಗೆ ಮಗನಾಗಿ ಮಧುರೆಯ ಕಂಸನ ಕಾರಾಗೃಹದಲ್ಲಿ ಶ್ರಾವಣ ಕೃಷ್ಣ ಅಷ್ಟಮಿಯಂದು ನಡುರಾತ್ರಿಯಲ್ಲಿ ರೋಹಿಣಿ ನಕ್ಷತ್ರದಲ್ಲಿ ಜನ್ಮ ತಾಳಿದ. ಆದರೆ ಬೆಳೆದದ್ದು ಗೋಕುಲದಲ್ಲಿ, ನಂದಗೋಪನ ಹೆಂಡತಿ ಯಶೋದೆಯ ಪೋಷಣೆಯಲ್ಲಿ. ಮಗುವಾಗಿದ್ದಾಗಲೇ ಹಲವು ಪವಾಡಗಳನ್ನು ಮೆರೆದವ. ಹುಟ್ಟಿದ ತಕ್ಷಣ ಮಾತಾಪಿತೃಗಳೊಡನೆ ಮಾತನಾಡಿದ, ಕಂಸಾಸುರನಿಂದ ಪ್ರೇರಿತರಾಗಿ ಬಂದ ಹಲವು ರಾಕ್ಷಸರನ್ನು ಸಂಹರಿಸಿದ. ಅದರಲ್ಲಿ ಮುಖ್ಯರಾದವರು ಪೂತನಿ, ತೃಣಾವರ್ತ, ಧೇನುಕಾಸುರ, ಅರಿಷ್ಟಾಸುರರು. ತನ್ನ ಏಳನೇ ವಯಸ್ಸಿನಲ್ಲಿ ಗೋವರ್ಧನ ಗಿರಿಯನ್ನೆತ್ತಿದ. ಕಾಳಿಂದಿ ಮಡುವನ್ನು ಕಲಕಿ ಕಾಳಿಂಗನನ್ನು ಮರ್ದಿಸಿದ. ಚಾಣೂರನನ್ನೂ, ಸೋದರ ಮಾವ ಕಂಸನನ್ನೂ ಲೋಕಹಿತಾರ್ಥವಾಗಿ ಕೊಂದ. ಈ ವಿಚಾರ ಕಂಸನ ಮಾವನಾದ ಜರಾಸಂಧನಿಗೆ ತಿಳಿದು, ಅವನು 23 ಅಕ್ಷೋಹಿಣಿ ಸೈನ್ಯದೊಡನೆ ಶ್ರೀಕೃಷ್ಣನೊಡನೆ ಯುದ್ಧಕ್ಕೆ ಬಂದ. ಶ್ರೀಕೃಷ್ಣ ಮತ್ತು ಅವನ ಅಣ್ಣ ಬಲರಾಮರಿಬ್ಬರೇ ಇಡೀ ಸೈನ್ಯವನ್ನು ಸೋಲಿಸಿ ಹಿಮ್ಮೆಟ್ಟಿಸಿದರು.

ಹಠಬಿಡದ ಜರಾಸಂಧನು 17ನೇ ಬಾರಿ ಯುದ್ಧಕ್ಕೆ ಬಂದು ಪರಾಭವಗೊಂಡು 18ನೇ ಬಾರಿಯೂ ಯುದ್ಧಕ್ಕೆ ಬಂದ. ಇದರಿಂದ ಯಾದವರಿಗೆ ಬಹಳ ತೊಂದರೆಯಾಗುವುದೆಂದು ತಿಳಿದ ಶ್ರೀಕೃಷ್ಣ 'ಕುಶಸ್ಥಲಿ' ಎಂಬ ದುರ್ಗಮವಾದ ಸಮುದ್ರದಲ್ಲಿನ ದುರ್ಗವೊಂದಕ್ಕೆ ಸೇತುವೆ ಕಟ್ಟಿ, ಅಲ್ಲಿ 12 ಯೋಜನಾ ಉದ್ದ, 10 ಯೋಜನಾ ಅಗಲದ ಒಂದು ಪಟ್ಟಣವನ್ನು ನಿರ್ಮಿಸಿ, ಅದಕ್ಕೆ 'ದ್ವಾರವತಿ' ಎಂದು ನಾಮಕರಣ ಮಾಡಿ, ತನ್ನವರಾದ ಯಾದವರನ್ನು ಅಲ್ಲಿ ಸುರಕ್ಷಿತವಾಗಿರಿಸಿದ. ಆನಂತರ ಬಲರಾಮನೊಡನೆ ಮಧುರೆಗೆ ಬಂದು ಜರಾಸಂಧನನ್ನು ಯುದ್ಧದಲ್ಲಿ ಗೆದ್ದು ಅವನ ಸಮಸ್ತ ಐಶ್ವರ್ಯವನ್ನೂ ದ್ವಾರವತಿಗೆ ಸಾಗಿಸಿದ. ಈ ದ್ವಾರವತಿಯೇ ಮುಂದೆ ಮೋಕ್ಷದಾಯಕ ಏಳು ಪಟ್ಟಣಗಳಲ್ಲಿ ಒಂದೆಂದು ಪ್ರಸಿದ್ಧಿಯಾಯಿತು.

ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಹ್ಯವಂತಿಕಾ । ಪುರೀದ್ವಾರವತೀ ಚೈವ ಸಪ್ತೈತಾ ಮೋಕ್ಷದಾಯಿಕಾಃ ॥

ಶ್ರೀಕೃಷ್ಣ ಕಲ್ಯಾಣ : ವಿದರ್ಭ ದೇಶದ ದೊರೆಯಾದ ಭೀಷ್ಮಕನು ತನ್ನ ಮಗಳಾದ ರುಕ್ಮಿಣಿಯನ್ನು ಶ್ರೀಕೃಷ್ಣನಿಗೆ ಕೊಟ್ಟು ವಿವಾಹ ಮಾಡಬೇಕೆಂದು ನಿರ್ಧರಿಸಿದ. ಆದರೆ ಅವನ ಮಗ ರುಕ್ಮಿ ಅದಕ್ಕೆ ಒಪ್ಪದೆ ತನ್ನ ತಂಗಿಯನ್ನು ಚೇದಿ ದೇಶದ ರಾಜ ಶಿಶುಪಾಲನಿಗೆ ಕೊಡಬೇಕೆಂದು ಹಠ ಹಿಡಿದ. ಆದರೆ ರುಕ್ಮಿಣಿ ಶ್ರೀಕೃಷ್ಣನನ್ನು ಮನಸಾರೆ ವರಿಸಿದ್ದಳು. ಇದನ್ನರಿತ ಶ್ರೀಕೃಷ್ಣ ಶಿಶುಪಾಲನನ್ನು ಮತ್ತು ರುಕ್ಮಿಯನ್ನು ಯುದ್ಧದಲ್ಲಿ ಸೋಲಿಸಿ, ರುಕ್ಮಿಣಿಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಬಂದು ದ್ವಾರವತಿಯಲ್ಲಿ ವಿವಾಹವಾದ.

ಶ್ರೀಕೃಷ್ಣನು ದಂತವಕ್ತ್ರ, ಶಿಶುಪಾಲ, ವಿಡೂರಥ, ಮುರಾ, ನರಕಾಸುರ, ಸಾಲ್ವ, ಪೌಂಡ್ರಕ, ವಾಸುದೇವ ಮುಂತಾದ ನೀಚರನ್ನು ಕೊಂದ. ದುಷ್ಟನಾದ ಜರಾಸಂಧನನ್ನು ಭೀಮನಿಂದ ಕೊಲ್ಲಿಸಿದ. ಹೀಗೆ ಕೃಷ್ಣನು ತನ್ನ ಉದ್ಘೋಷಣೆಯಂತೆ ದುಷ್ಟಶಿಕ್ಷಣ ಮತ್ತು ಶಿಷ್ಟ ರಕ್ಷಣೆ ಮಾಡಿದ.

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಎಂಬ ಗೀತವಾಣಿ ಯಥಾರ್ಥವಾದುದು.

ಶ್ರೀಕೃಷ್ಣನ ಬಗ್ಗೆ ಕೆಲವರು ತಪ್ಪು ಕಲ್ಪನೆ ಮಾಡಿಕೊಂಡಿದ್ದಾರೆ. ಅವನು ಗೋಪಿಕಾ ಸ್ತ್ರೀಯರೊಡನೆ ಆಡಿದ ರಾಸಕ್ರೀಡೆ, ಅವರು ಸ್ನಾನಕ್ಕೆ ಹೋದಾಗ ಬಟ್ಟೆಗಳನ್ನು ಅಪಹರಿಸಿದ್ದು, ಹಾಲು, ಮೊಸರು, ಬೆಣ್ಣೆಯನ್ನು ಕದ್ದದ್ದು ಇವೆಲ್ಲವನ್ನೂ ಅಪಾರ್ಥ ಮಾಡಿಕೊಂಡಿದ್ದಾರೆ. ಇದೆಲ್ಲವನ್ನೂ ಅವನು ಮಾಡಿದ್ದು ಕೇವಲ 7-8ರ ವಯಸ್ಸಿನಲ್ಲಿ. ಇಂತಹ ಮುಗ್ಧ ಬಾಲಕ ಪ್ರೌಢೆಯರಾದ ಗೋಪಿಯರಿಗೆ ಏನು ತಾನೆ ಮಾಡಬಲ್ಲ? ಅವರ ಪ್ರೀತಿಯ ಕಂದನಾಗಿ ಮುತ್ತು ಸ್ವೀಕರಿಸಲು ಅರ್ಹನಾಗಿರಬೇಕು.

ಶ್ರೀಕೃಷ್ಣನ ಭಗವತ್ಸ್ವರೂಪವನ್ನು ಕಾಣಬೇಕಾದರೆ ನಾವು ಮಹಾಭಾರತಕ್ಕೇ ಬರಬೇಕು. ಅಲ್ಲಿ ನಮಗೆ ಅಧ್ಯಾತ್ಮಗುರು ಕೃಷ್ಣನ ದರ್ಶನವಾಗುತ್ತದೆ. ಕನ್ನಡ ಭಾರತವನ್ನು ಬರೆದ ಕುಮಾರವ್ಯಾಸನಂತೂ ಭಾರತವನ್ನು ಕೃಷ್ಣಕಥೆಯನ್ನಾಗಿಸಿದ್ದಾನೆ. ಅದನ್ನು ಅವನೇ ಹೇಳಿಕೊಂಡಿದ್ದಾನೆ.

ತಿಳಿಯ ಹೇಳುವೆ ಕೃಷ್ಣಕಥೆಯನು ಇಳೆಯ ಜಾಣರು ಮೆಚ್ಚುವಂತಿರೆ ನೆಲೆಗೆ ಪಂಚಮ ಶ್ರುತಿಯನೊರೆವೆನು ಕೃಷ್ಣ ಮೆಚ್ಚಲಿಕೆ॥

ಅಷ್ಟೇ ಅಲ್ಲ

ಇದ ವಿಚಾರಿಸೆ ಬರಿಯ ತೊಳಸಿಯ ಉದಕದಂತಿರೆ ಇಲ್ಲಿ ನೋಳ್ಪುದು
ಪದುಮನಾಭನ ಮಹಿಮೆ ಧರ್ಮವಿಚಾರ ಮಾತ್ರವನು ॥

ಮಹಾಭಾರತದಲ್ಲಿ ಶ್ರೀಕೃಷ್ಣ ಪಾಂಡವರಿಗೆ, ಮೊದಲು ಕಾಣಿಸಿಕೊಳ್ಳುವುದು ದ್ರೌಪದೀ ಸ್ವಯಂವರದಲ್ಲಿ. ಪಾಂಡವರು ಇವನ ಸೋದರತ್ತೆ ಕುಂತಿಯ ಮಕ್ಕಳು. ''**ಮಮ ಪ್ರಾಣಾ ಹಿ ಪಾಂಡವಾಃ**'' ಎಂದು ಉದ್ಘೋಷಿಸಿದ. ಕೃಷ್ಣ ಅವರ ರಕ್ಷಣೆಗಾಗಿ ಅರ್ಥಾತ್ ಧರ್ಮದ ರಕ್ಷಣೆಗಾಗಿ ತನ್ನ ಜೀವಿತವನ್ನೆಲ್ಲಾ ಸವೆಸಿದ. ತನ್ನ ಭಕ್ತರಿಗಾಗಿ ಅವನು ಕರಗುತ್ತಿದ್ದನಂತೆ. ತನ್ನ ತಂದೆ, ತಾಯಿ, ಮನೆ, ಮಠ, ಮಡದಿ, ಮಕ್ಕಳು ಯಾರನ್ನೂ ಗಮನಿಸುತ್ತಿರಲಿಲ್ಲವಂತೆ. ಇದಕ್ಕೆ ಸಾಕಷ್ಟು ನಿದರ್ಶನಗಳು ಭಾರತದಲ್ಲಿದೆ. ದ್ರೌಪದಿಯ ವಸ್ತ್ರಾಪಹರಣ ಸಂದರ್ಭ. ದೂರ್ವಾಸಾತಿಥ್ಯ ಪ್ರಸಂಗ, ನೇರಳೆ ಹಣ್ಣಿನ ವೃತ್ತಾಂತ, ಅರ್ಜುನನಿಗೆ ಸಾರಥಿಯಾದದ್ದು, ಅರ್ಜುನ ಜಯದ್ರಥನನ್ನು ವಧೆ ಮಾಡಿದ್ದು, ಕರ್ಣವಧ, ದ್ರೋಣ ಸಂಹಾರ, ಭೀಷ್ಮ ಪತನ - ಒಂದೇ ಎರಡೇ. ನೂರಾರು ಸಂದರ್ಭಗಳಲ್ಲಿ ಶ್ರೀಕೃಷ್ಣ ಪಾಂಡವರನ್ನು ಆಪತ್ತಿನಿಂದ ರಕ್ಷಿಸಿದ.

ಇಡೀ ಮಹಾಭಾರತದಲ್ಲಿ ಆಧ್ಯಾತ್ಮ ಜೀವಿಗಳ ಮನಸ್ಸನ್ನು ಆಕರ್ಷಿಸಿರುವ ಸನ್ನಿವೇಶವೆಂದರೆ ಶ್ರೀಕೃಷ್ಣ ಭಗವಂತನಾಗಿ ಅರ್ಜುನನಿಗೆ ನೀಡಿದ ಗೀತೋಪದೇಶ. ಅರ್ಜುನನು ರಣರಂಗದ ಮಧ್ಯದಲ್ಲಿ ಸ್ವಜನ ವ್ಯಾಮೋಹಕ್ಕೆ ಗುರಿಯಾಗಿ ಯುದ್ಧ ಮಾಡಲು ಹಿಂದೆಗೆದಾಗ ಆತನಿಗೆ ಕರ್ಮದ ನಿಜಸ್ವರೂಪವನ್ನು ತಿಳಿಸಿದ. ನಿಸ್ವಾರ್ಥವಾದ ಸ್ವಾರ್ಪಣವೇ ಯಜ್ಞ. ಫಲಕ್ಕಾಗಿಯೇ ಕೆಲಸ ಮಾಡುವವರು ದೀನರು. ಈ ದೇಹವನ್ನು ಕೊಲ್ಲಬಹುದೇ ವಿನಾ, ದೇಹಾಂತರ್ಗತನಾದ ಆತ್ಮನಿಗೆ ಸಾವಿಲ್ಲ. ನಾವೆಲ್ಲ ಅಮೃತ ಪುತ್ರರು. ಭಗವಂತನಿಗಾಗಿ ಹಂಬಲಿಸುವುದೇ ಭಕ್ತಿ. ಭಕ್ತನಾದವನು ಅಹಿಂಸೆ, ತೃಪ್ತಿ, ಸತ್ಯ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ, ತಪಸ್ಸು, ಪರೋಪಕಾರ, ಶೌಚ, ಸ್ವಾಧ್ಯಾಗಳಲ್ಲಿ ನಿರತನಾಗಿರಬೇಕು. ಅಂತಹ ಭಕ್ತ ತನಗೆ ಪ್ರಿಯ ಎನ್ನುತ್ತಾನೆ. ಒಟ್ಟಿನಲ್ಲಿ ಕರ್ಮ, ಭಕ್ತಿ, ಜ್ಞಾನ, ವೈರಾಗ್ಯ, ಧ್ಯಾನ, ಧರ್ಮ, ನೀತಿಸಾರವೇ ಶ್ರೀ ಭಗವದ್ಗೀತೆ. ''**ತದಿದಂ ಗೀತಾ ಶಾಸ್ತ್ರಂ ಸಮಸ್ತ ವೇದಾಂತಸಾರ ಸಂಗ್ರಹ ಭೂತಮ್**'' ಎಂಬ ಶಂಕರ ಭಗವತ್ಪಾದರ ವಾಣಿ ಯಥಾರ್ಥವಾದದ್ದು. ಕಡೆಯಲ್ಲಿ ಅರ್ಜುನನ ಸಂಶಯವನ್ನು ಪರಿಹರಿಸಲು ತನ್ನ ದೇವತ್ವವನ್ನೇ ಪ್ರಕಟಿಸಿ ಅವನಿಗೆ ತನ್ನ ವಿಶ್ವರೂಪದರ್ಶನ ಮಾಡಿಸಿದ. ತಾನೇ ದೇವರು ಎಂಬುದನ್ನು ನಿರ್ಭಯವಾಗಿ, ನಿಸ್ಸಂಕೋಚವಾಗಿ ತಿಳಿಸಿದ.

ಮನ್ಮನಾಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು।
ಮಾಮೇವೈಷ್ಯಸಿ ಯುಕ್ತ್ವೈವಮಾತ್ಮಾನಂ ಮತ್ಪರಾಯಣಂ॥

''ನನ್ನಲ್ಲಿಯೇ ಮನಸ್ಸುಳ್ಳವನಾಗಿರು, ನನ್ನ ಭಕ್ತನಾಗಿರು, ನನ್ನನು ಪೂಜಿಸು, ನನ್ನನ್ನು ನಮಸ್ಕರಿಸು. ಹೀಗೆ ನಾನೇ ಪರಮಗತಿಯೆಂದು ತಿಳಿದು ನನ್ನಲ್ಲಿ ಮನಸ್ಸನ್ನು ನಿಲ್ಲಿಸಿ, ನನ್ನನ್ನೇ ಹೊಂದುವೆ''. ಅಷ್ಟೇ ಅಲ್ಲ,

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾ ಪರ್ಯುಪಾಸತೇ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್॥

''ನನ್ನನ್ನೇ ಪರಮಗತಿಯೆಂದು ತಿಳಿದು ಉಪಾಸಿಸಿದವರ ಯೋಗಕ್ಷೇಮವನ್ನು ನಾನು ವಹಿಸಿಕೊಳ್ಳುತ್ತೇನೆ'' ಎಂದೂ ಘೋಷಿಸಿದ. ಇಂತಹ ಒಂದು ಅಧಿಕೃತ ವಾಗ್ದಾನ ವಿಶ್ವದ ಯಾವ ಆಧ್ಯಾತ್ಮಿಕ ವಾಙ್ಮಯದಲ್ಲೂ ಕಂಡು ಬರುವುದಿಲ್ಲ, ಅದು ಭಗವದ್ಗೀತೆಯಲ್ಲಿ ಮಾತ್ರ.

ಶ್ರೀಕೃಷ್ಣ ನಿಜವಾದ ಗುರು. ''ಕೃಷ್ಣಂ ವಂದೇ ಜಗದ್ಗುರುಮ್'' ಎಂಬ ಮಾತು ಸಾರ್ಥಕವಾಗಿದೆ. ''ಸ್ವಯಮಾಚರತೇ ಯಸ್ಮಾತ್ ಆಚಾರ್ಯಸ್ತೇನ ಉಚ್ಯತೇ'' ಅಂದರೆ ತಾವು ಹೇಳಿದಂತೆ ಯಾರು ನಡೆಯುತ್ತಾರೋ ಅವರೇ ಆಚಾರ್ಯ ಪುರುಷರು. ಶ್ರೀಕೃಷ್ಣ ಅಂತಹ ಆಚಾರ್ಯಪುರುಷ. ತಾನು ಏನನ್ನು ಬೋಧಿಸಿದನೋ ಅದನ್ನು ತನ್ನ ಜೀವಿತದಲ್ಲಿ ಆಚರಿಸಿದ ಅದಕ್ಕೆ ಕಾರಣವನ್ನು ಗೀತೆಯಲ್ಲಿಯೇ ತಿಳಿಸಿದ್ದಾನೆ.

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ। ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥

''ಶ್ರೇಷ್ಠರಾದವರು ಯಾವಯಾವದನ್ನು ಆಚರಿಸುತ್ತಾರೆಯೋ ಅದನ್ನೇ ಇತರರು ಆಚರಿಸುತ್ತಾರೆ. ಅವರು ಯಾವುದನ್ನು ಪ್ರಮಾಣವನ್ನಾಗಿ ಮಾಡುತ್ತಾರೆಯೋ ಅದನ್ನೇ ಲೋಕವು ಅನುಸರಿಸುತ್ತದೆ''.

ಈ ಮಾತಿಗೆ ಭಗವಂತನಾದ ಕೃಷ್ಣನೇ ಉತ್ತಮ ಉದಾಹರಣೆ. ತನ್ನ ಆದರ್ಶವನ್ನು ಮೆರೆದ ಮಹಾವ್ಯಕ್ತಿ. ಕಂಸನನ್ನು ಕೊಂದ, ಸೆರೆಯಲ್ಲಿದ್ದ ಅವನ ತಂದೆಯನ್ನೇ ಸಿಂಹಾಸನದ ಮೇಲೆ ಕೂರಿಸಿದ. ನರಕಾಸುರನನ್ನು ಕೊಂದ, ಅವನ ಮಗನಾದ ಭಗದತ್ತನನ್ನು ರಾಜ್ಯಕ್ಕೆ ಉತ್ತರಾಧಿಕಾರಿಯನ್ನಾಗಿ ಮಾಡಿದ. ಜರಾಸಂಧನನ್ನು ಕೊಲ್ಲಿಸಿದ, ಅವನ ಮಗನಾದ ಸಹದೇವನಿಗೆ ಪಟ್ಟಾಭಿಷೇಕ ಮಾಡಿದ. ದ್ವಾರಕೆಯನ್ನು ತಾನೇ ನಿರ್ಮಾಣ ಮಾಡಿದ, ಆದರೆ ಅದಕ್ಕೆ ತಾನು ರಾಜನಾಗದೆ ಉಗ್ರಸೇನನನ್ನು ರಾಜನನ್ನಾಗಿ ಮಾಡಿದ. ತಾನೇ ಸ್ವಯಂ ಹರಿಯಾದರೂ ಶಿವಾರಾಧನೆ ಮಾಡಿರೆಂದು ಯಾದವರಿಗೆ ತಿಳಿಸಿದ. ಭಾರತ ಯುದ್ಧದ ಸೂತ್ರಧಾರಿಯಾಗಿ ಪಾಂಡವರಿಗೆ ಜಯವನ್ನು ತಂದಿತ್ತು, ಧರ್ಮರಾಯನಿಗೆ ಪಟ್ಟಗಟ್ಟಿದ. ಧರ್ಮರಾಯನ ರಾಜಸೂಯ ಯಾಗದಲ್ಲಿ ಎಂಜುಲು ಎಲೆ ಎತ್ತಿದ. ಕುರುಕ್ಷೇತ್ರ ಯುದ್ಧದಲ್ಲಿ ಸಾಯಂಕಾಲ ಎಲ್ಲರೂ ಸಂಧ್ಯಾವಂದನೆಗೆ ಹೋದರೆ, ಶ್ರೀಕೃಷ್ಣ ಸಾರಥಿಯ ಕರ್ತವ್ಯವಾದ ಕುದುರೆಗಳ ಪೋಷಣೆ, ಆರೈಕೆಯಲ್ಲಿ ನಿರತನಾಗಿರುತ್ತದ್ದ. ಬಾಲ್ಯ ಸ್ನೇಹಿತ ಸುಧಾಮ ಬಂದಾಗ ಅವನು ನಡೆದುಕೊಂಡ ರೀತಿ, ಗುರು – ಹಿರಿಯರಲ್ಲಿ ನಡೆದು ಕೊಳ್ಳುತ್ತಿದ್ದ ರೀತಿ ಎಲ್ಲವೂ ಅನುಕರಣೀಯ. ಯಾದವರು ದುಷ್ಟರಾದರು ಎಂಬುದನ್ನು ತಿಳಿದಾಗ ಸ್ವಜನಪಕ್ಷಪಾತಿಯಾಗದೆ ಅವರನ್ನು ಉಪಾಯಾಂತರದಿಂದ ನಿಗ್ರಹಿಸಿದ.

ಹೀಗೆ ಶ್ರೀಕೃಷ್ಣ ಪೂಜ್ಯನಾಗಿರುವುದೇ ಅಲ್ಲದೆ ಅನುಸರಣೀಯನಾದ ಧರ್ಮಗುರುವೂ ಆಗಿದ್ದಾನೆ. ನೀತಿವಿಶಾರದ ಮಹಾಪುರುಷ, ಯೋಗೇಶ್ವರ, ಬುಧ, ಕವಿ, ಪ್ರಾಜ್ಞ, ಪಂಡಿತ, ಚತುರ ಏನಲ್ಲ? ಎಲ್ಲವೂ ಅವನೇ.

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋಧನುರ್ಧರಃ। ತತ್ರಶ್ರೀರ್ವಿಜಯೋ ಭೂತಿಧ್ರುವಾನೀತಿರ್ಮತಿರ್ಮಮ॥

ಶ್ರೀಕೃಷ್ಣಾರ್ಪಣಮಸ್ತು

ದಶಪ್ರಾಣ, ದಶನಾದ ದರ್ಶನ

ಡಾ॥ ಅನಂತರಾಮನ್ ಎಮ್.ಎನ್., ಬೆಂಗಳೂರು

ಶ್ರೀಯುತರು ಬೆಂಗಳೂರು ನಿವಾಸಿ. ರಾಜ್ಯ ರೇಷ್ಮೆ ಸಂಶೋಧನಾ ಸಂಸ್ಥೆಯ ಸಾಂಖ್ಯಿಕ ಅಧಿಕಾರಿಯಾಗಿ ಉದ್ಯೋಗ, ಸಂಖ್ಯಾಶಾಸ್ತ್ರ, ತೆಲುಗು ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ, ರೇಷ್ಮೆ ವಿಜ್ಞಾನದಲ್ಲಿ ಡಾಕ್ಟರೇಟ್ ಪದವಿ, ಸಾಹಿತ್ಯ ಬರವಣಿಗೆಯಲ್ಲಿ ಅಭಿಮಾನ. ಯೋಗಾಭ್ಯಾಸ, ಯೋಗ ಶಿಕ್ಷಣ ಹವ್ಯಾಸ. ಕನ್ನಡ - ತೆಲುಗು - ಇಂಗ್ಲೀಷ್ ಭಾಷೆಗಳಲ್ಲಿ ಹಲವಾರು ಲೇಖನಗಳ ಕರ್ತೃತ್ವ.

– ಸಂಪಾದಕ

ಭಾರತೀಯ ಪ್ರಾಚೀನ ಸಂಸ್ಕೃತ ಸಾಹಿತ್ಯದ ಅಖಂಡ ಜ್ಞಾನ ಸಂಪತ್ತಿನ ಹಿರಿಮೆ ಸರ್ವವಿದಿತ, ಸರ್ವಕಾಲಿಕ. ವೇದಸಾಹಿತ್ಯದಿಂದ ಆದಿಯಾಗಿ ಪ್ರಾಚೀನ ಸಾಹಿತ್ಯದ ತೋಟದಲ್ಲಿ ವ್ಯವಸಾಯ ಮಾಡಿದ ಮಹನೀಯರೆಲ್ಲರು ಉತ್ಕೃಷ್ಟ ಬೆಳೆಯನ್ನು ಬೆಳೆದು ಫಲವನ್ನು ನಮಗೆ ನೀಡಿದ್ದಾರೆ. ತಮ್ಮ ತಪೋಬಲದಿಂದ ದಿವ್ಯ ದೃಷ್ಟಿಯ ಮೂಲಕ ಅನೇಕ ವಿಷಯಗಳ ದರ್ಶನವನ್ನು ಮಾಡಿಕೊಟ್ಟಿದ್ದಾರೆ. ಪ್ರಮುಖವಾಗಿ ಮನುಷ್ಯನ ದೈಹಿಕ ಮತ್ತು ಮಾನಸಿಕ ವೃತ್ತಿಗಳಿಗೆ ಸಂಬಂಧಪಟ್ಟ ವಿಷಯ ವಿವೇಚನೆಯನ್ನು ಆಳವಾಗಿ ಮಾಡಿದ್ದಾರೆ. ಮನುಜ ಹೇಗೆ ಬಂಧ ವಿಮುಕ್ತನಾಗಿ ಮಾನಸಿಕ ಶಾಂತಿ, ಪ್ರಸನ್ನತೆಯನ್ನು ಪಡೆಯಬಹುದು ಎಂಬ ವಿಷಯವಾಗಿ ವಿಪುಲವಾದ ಜ್ಞಾನವನ್ನು ನೀಡಿದ್ದಾರೆ. ಭೌತಿಕ ದೇಹವನ್ನು ಸ್ಥೂಲವಾಗಿ ಅನ್ನಮಯ, ಪ್ರಾಣಮಯ ಕೋಶವೆಂದು ವಿಭಾಗಮಾಡಿ ಯೋಗ ಪ್ರಾಣಾಯಾಮಗಳ ಮೂಲಕ ಮನುಷ್ಯನ ಆರೋಗ್ಯ ಮತ್ತು ಮಾನಸಿಕ ಸ್ವಾಸ್ಥ್ಯಕ್ಕೆ ದಾರಿತೋರಿಸಿದ್ದಾರೆ. ಕರ ಚರಣಾದಿ ಅವಯವಗಳಿಂದ ಕೂಡಿದ್ದು ಭಾವ - ವಿಕಾರ ಸಹಿತವಾಗಿ ಷಟ್ಕೋಶಾತ್ಮಕವಾದ ಸ್ಥೂಲಶರೀರವೇ ಅನ್ನಮಯಕೋಶ ಎಂದು ಹೇಳಲಾಗಿದೆ. ಕರ್ಮೇಂದ್ರಿಯಗಳು ಐದು, ಪ್ರಾಣಗಳು ಐದು ಕೂಡಿರುವ ಶರೀರದ ಭಾಗವೇ ಪ್ರಾಣಮಯ ಕೋಶ ಎನ್ನಲಾಗಿದೆ. ಪ್ರಾಣ ಎನ್ನುವ ಅಂತಶ್ಶಕ್ತಿಯನ್ನು ಸಾಹಿತ್ಯಲೋಕದಲ್ಲಿ ಅನೇಕಾನೇಕವಿಧಗಳಾಗಿ ನಿರ್ವಚಿಸಲಾಗಿದೆ. ಪ್ರಾಣವೇ ಆತ್ಮ, ಪ್ರಾಣವೇ ಚೇತನಾ ಶಕ್ತಿ, ಪ್ರಾಣವೇ ಬ್ರಹ್ಮ, ಪ್ರಾಣವೇ ಜೀವದ್ರವ್ಯ ಹೀಗೆ ನಿರ್ವಚಿಸಲಾಗಿದೆ. ಪ್ರಶ್ನೋಪನಿಷತ್ತಿನಲ್ಲಿ,

ಪ್ರಾಣಸ್ಯೇದಮ್ ವಶೇತ್ಸರ್ವಮ್ ತ್ರಿದಿವೇಯಃ ಪ್ರತಿಷ್ಠಿತಮ್ ।
ಮಾತೇವ ಪುತ್ರಾನ್ರಕ್ಷಸ್ವಶ್ರೀಶ್ಚ ಪ್ರಜ್ಞಾಂ ವಿದೇಹಿನಃ ॥

ಎಂದು ಪ್ರಾಣಕ್ಕೆ ಎಲ್ಲವೂ ವಶವಾಗಿದೆ, ಅದು ತಾಯಿ ಮಗುವನ್ನು ರಕ್ಷಿಸುವಂತೆ ರಕ್ಷಿಸುತ್ತದೆ ಎಂದು ಹೇಳಿರುವುದು ತುಂಬಾ ಅರ್ಥಪೂರ್ಣ. ಸಾಮಾನ್ಯಾರ್ಥದಲ್ಲಿ ಪ್ರಾಣವೆಂದರೆ ನಾವು ಸೇವಿಸುವ ಗಾಳಿ. ಇದು ನಮ್ಮ ಜೀವಾಧಾರ. **ಪ್ರಾಣಂತ್ಯನೇನ ಪ್ರಾಣಃ ಅನ ಪ್ರಾಣನೇ** - ಅಂದರೆ ಇದರಿಂದ ಪ್ರಾಣಿಗಳು ಬದುಕುತ್ತಾರೆ ಎಂದರ್ಥ. **ಪ್ರಕರ್ಷೇಣ ಬಹಿರಾನಯತಿ ಶ್ವಾಸಾದೀನಿತಿ ಪ್ರಾಣಃ** - ಪ್ರಯತ್ನದಿಂದ ಶ್ವಾಸಾದಿಗಲನ್ನು ಹೊರಹಾಕಿಸುವಂಥದ್ದು ಹೀಗೆ ಪ್ರಾಣದ ವಿವರಣೆ ಸಾಗುತ್ತದೆ. ಈ ಪ್ರಾಣವನ್ನೇ ನಾವು ಪಂಚ ಪ್ರಾಣಗಳೆಂದು ಹೇಳುತ್ತೇವೆ. ಇನ್ನೂ ವಿವರವಾಗಿ, ಇವುಗಳನ್ನು ದಶಪ್ರಾಣಗಳೆಂದು ಸೂಕ್ಷ್ಮವಾಗಿ ವಿಭಜಿಸಿರುವುದನ್ನು ಗಮನಿಸಬಹುದು. ಅಂದರೆ ಪ್ರಾಣಮಯ ಕೋಶಕ್ಕೆ ನಾವು ಬರಮಾಡಿಕೊಳ್ಳುವುದು ಒಂದೇ ತೆರನಾದ ವಾಯುವೇ (ಪ್ರಾಣ) ಆದರೂ ಅದು ಅನೇಕ ಭಾಗಗಳಾಗಿ ವಿಭಜಿಸಲ್ಪಡುತ್ತದೆ. ಇವುಗಳಿಗೆ ನಮ್ಮ ದೇಹದಲ್ಲಿ ನಡೆಯುವ ವಿವಿಧ ಭೌತಿಕ ಹಾಗೂ ರಾಸಾಯನಿಕ ಕ್ರಿಯೆಗಳನ್ನು ಮಾಡಿಸುವಂತೆ ನಿರ್ದೇಶನ ನೀಡಲಾಗಿದೆ. ಈ ವಾಯುಗಳು ಕ್ರಮ ತಪ್ಪದಂತೆ ಅದರ ನಿರ್ದೇಶಿತ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿರುತ್ತವೆ. ಇದುವೇ ವೈಚಿತ್ರ್ಯ.

ಅಮರಕೋಶದಲ್ಲಿ, ವಾಯುವಿನ ಹೆಸರುಗಳನ್ನು ಪಟ್ಟಿಮಾಡುತ್ತಾ

ಪ್ರಾಣೋಪಾನಸ್ಸಮಾನಶ್ಚೋದಾನವ್ಯಾನೌಚ ವಾಯವಃ ।
ಹೃದಿ ಪ್ರಾಣೋ ಗುದೇ ಅಪಾನಃ ಸಮಾನೋ ನಾಭಿಸಂಸ್ಥಿತಃ ।
ಉದಾನ ಕಂಠದೇಶಸ್ಥೋ ವ್ಯಾನಸ್ಸರ್ವ ಶರೀರಗಃ ॥
ನಾಗಶ್ಚ ಕೂರ್ಮಃ ಕೃಕರೋ ದೇವದತ್ತೋ ಧನಂಜಯಃ ।
ವಾಗ್ದ್ವಾರೇ ನಾಗ ಆಖ್ಯಾತಃ ಕೂರ್ಮ ಉನ್ಮೀಲನೇ ಸ್ಮೃತಃ ॥
ಕೃಕರಾಚ್ಚ ಕ್ಷುತಂ ಜ್ಞೇಯಂ ದೇವದತ್ತಾದ್ವಿಜೃಂಭಣಮ್ ।
ನ ಜಹಾತಿ ಮೃತಂ ವಾಪಿ ಸರ್ವವ್ಯಾಪೀ ಧನಂಜಯಃ ॥

ಎಂದು ದಶಪ್ರಾಣಗಳ ವಿಷಯವನ್ನು ಪ್ರಸ್ತಾಪಿಸಿದೆ. ಇಲ್ಲಿ ದಶಪ್ರಾಣಗಳ ಹೆಸರುಗಳನ್ನು, ಶರೀರದಲ್ಲಿ ಅವುಗಳ ಸ್ಥಾನಗಳನ್ನು ಹೇಳಿದೆ. ಪ್ರಾಣ, ಅಪಾನ, ಸಮಾನ, ಉದಾನ, ವ್ಯಾನ – ಇವು ಪ್ರಾಣಗಳಾದರೆ, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ – ಇವು ಉಪಪ್ರಾಣಗಳು. ಹೃದಯ, ಗುದ, ನಾಭಿ, ಕಂಠ, ಇಡೀ ದೇಹ, ನಾಲಿಗೆ, ಕಣ್ಣು, ಮೂಗು, ಬಾಯಿ – ಇವು ಕ್ರಮವಾಗಿ ಈ ಪ್ರಾಣಗಳ ಸ್ಥಾನಗಳೆಂದು ಹೇಳಲಾಗಿದೆ. ಇನ್ನು ಇವುಗಳ ಕ್ರಿಯೆಗಳ ಬಗ್ಗೆ ತಿಳಿದುಕೊಳ್ಳುವುದು ಮುಖ್ಯ.

1. **ಪ್ರಾಣ : ''ಪ್ರಕರ್ಷೇಣ ಬಹಿರಾನಯತಿ ಶ್ವಾಸಾದೀನಿತಿ ಪ್ರಾಣಃ'** ವಾಯುವನ್ನು ಪ್ರಯತ್ನದಿಂದ ಇಡಾ, ಪಿಂಗಳಾ ಎಂಬ ನಾಡಿರಂಧ್ರಗಳ ಮೂಲಕ ಹೊರಗೆ ಹಾಕಿಸುವಂಥ ಕ್ರಿಯೆಯನ್ನು ನಿರ್ವಹಿಸುತ್ತದೆ.
2. **ಅಪಾನ : ''ಅಧೋವಿಣ್ಮೂತ್ರಾನಿತ್ಯಾಜನಾದನಾಂತ್ಯನೇನೇತ್ಯಪಾನಃ'' ''ಅಧೋಮಲಾನ್ನಯತೀತಿವಾ ಅಪಾನಃ''** ವಾಯುವನ್ನು ಕೆಳಮುಖ ಮಾಡಿಸಿ, ಮಲಮೂತ್ರಶುಕ್ಲಾದಿಗಳನ್ನು ಕುಹು, ಸಿನೀವಾಲಿ, ರಕ್ತಾಹ್ವ ಎಂಬ ನಾಡಿರಂಧ್ರಗಳ ಮೂಲಕ ಹೊರ ಹಾಕಿಸುವಂಥ ಕ್ರಿಯೆಯನ್ನು ನಿರ್ವಹಿಸುತ್ತದೆ.
3. **ಸಮಾನ : ''ಸಮ್ಯಗನಂತ್ಯನೇನಸಮಾನಃ'' 'ಸರ್ವತ್ರ ಅಸೃಗಾದಿನಯತೀತಿವಾ ಸಮಾನಃ''** ವಾಯುವನ್ನು ನಾಭಿಮುಖ ಮಾಡಿ ಅಲ್ಲಿ ಇದ್ದು ಜಠರಾಗ್ನಿಯನ್ನು ಪ್ರೇರೇಪಿಸಿ ಭುಜಿಸಿದಂತಹ ಚತುರ್ವಿಧಾನ್ನ (ಭೋಜ್ಯ ಲೇಹ್ಯ ಚೋಷ್ಯ ಪಾನೀಯ)ಗಳನ್ನು ಅಗ್ನಿಯ ಸಹಾಯದಿಂದ ಪಚನ ಮಾಡಿಸಿ ಸಾರವನ್ನು ಸಕಲ ನಾಡಿಗಳಿಗೆ (ಎಪ್ಪತ್ತೆರಡು ಸಾವಿರ ನಾಡಿಗಳೆಂದು ಹೇಳಲಾಗಿದೆ)ವಿಭಜಿಸುವ (ಹಂಚುವ) ಕ್ರಿಯೆಯನ್ನು ನಿರ್ವಹಿಸುತ್ತದೆ. ಅಲ್ಲದೇ ದೇಹದಲ್ಲಿ ರಕ್ತ ಉತ್ಪತ್ತಿಯಾಗಲು ಸಹ ಈ ವಾಯು ಸಹಾಯವಾಗುತ್ತದೆ
4. **ಉದಾನ : ''ಭಾಷಣಾದಿ ಸಾಮರ್ಥ್ಯಜನನಾತ್ ಊರ್ಧ್ವಮನಂತ್ಯನೇನೆತ್ಯುದಾನಃ'', ''ಊರ್ಧ್ವಮಾನಯತಿ ಶಬ್ದಾದೀನಿತಿವಾ ಉದಾನಃ''.** ವಾಯುವನ್ನು ಊರ್ಧ್ವಮುಖ ಮಾಡಿ ನಾಲಿಗೆ ಇತ್ಯಾದಿ ಅಷ್ಟಸ್ಥಾನಗಳ (ಕಿರು ನಾಲಿಗೆ ಒಸಡು, ಕುತ್ತಿಗೆ, ತಲೆ, ಹಲ್ಲು, ತುಟಿ, ಮೂಗು, ಎಲ್ಲದರ ಜಂಟಿ) ಮೂಲಕ ಧ್ವನಿರೂಪವಾಗಿ ಹೊರಹಾಕಿಸುವ ಕ್ರಿಯೆಯನ್ನು ನಿರ್ವಹಿಸುತ್ತದೆ. ಇದರ ಜೊತೆಗೆ ಸುಷುಪ್ತಿಯಲ್ಲಿ ಸರ್ವೇಂದ್ರಿಯಗಳಿಗೂ ಶಾಂತಿಯನ್ನು, ಜಾಗೃತಿಯಲ್ಲಿ ಇಂದ್ರಿಯಗಳನ್ನು ಕಾರ್ಯನಿರ್ವಹಿಸುವಂತೆ ಮಾಡುತ್ತದೆ.
5. **ವ್ಯಾನ : ''ವಿನಯತೀತಿ ವ್ಯಾನಃ''** ವಾಯುವು ಇಡೀ ಶರೀರದಲ್ಲೆಲ್ಲಾ ವ್ಯಾಪಿಸಿ ಹೊರಗಿನ ಶೀತೋಷ್ಣಗಳನ್ನು ಒಳಭಾಗಕ್ಕೂ, ಒಳಗಿನ ಶೀತೋಷ್ಣಗಳನ್ನು ಹೊರಭಾಗಕ್ಕೂ ಪ್ರಸರಿಸುವಂತೆ ಮಾಡಿ ಶರೀರಾ ಶೀತೋಷ್ಣಗಳನ್ನು ಸಮವಾಗಿಸುವಂಥ ಕ್ರಿಯೆಯನ್ನು ನಿರ್ವಹಿಸುತ್ತದೆ. ಇದರ ಜೊತೆಗೆ ಭುಜಿಸಿದ ಅನ್ನಸಾರವನ್ನು ಶರೀರದಾದ್ಯಂತ ವ್ಯಾಪಿಸುವಂತೆ ಮಾಡುತ್ತದೆ.

ಉಪವಾಯುಗಳು ಮುಖ್ಯವಾಯುಗಳಲ್ಲಿ ಜನಿಸುವುದರಿಂದ ಇವುಗಳ ವಾಸಸ್ಥಾನಗಳು ಮತ್ತು ಅಧಿಷ್ಠಾನ ದೇವತೆಗಳು ಒಂದೇ ಆಗಿರುತ್ತವೆ. ಪ್ರಾಣಾದಿ ವಾಯುಗಳು ಮೇಲೆಹೇಳಿದಂತಹ ಕ್ರಿಯೆಗಳನ್ನು ನಿರ್ವಹಿಸಿದರೆ, ಉಪವಾಯುಗಳು ಸ್ವಲ್ಪ ವಿಭಿನ್ನ ಕ್ರಿಯೆಗಳನ್ನು ನಿರ್ವಹಿಸುತ್ತದೆ. ಇವುಗಳನ್ನು ಗಮನಿಸೋಣ. ಮೇಲೆ ಹೇಳಿದ ಶ್ಲೋಕದಲ್ಲಿ ಉಪ ವಾಯುಗಳ ಕ್ರಿಯೆಗಳನ್ನು ಸೂಕ್ಷ್ಮವಾಗಿ ಪ್ರಸ್ತಾವಿಸಲಾಗಿದೆ.

6. **ನಾಗ**: ಇದು ಕಂಠ ಭಾಗದಲ್ಲಿದ್ದು ನಾವು ಮಾತನಾಡುವಾಗ ಧ್ವನಿ ಉತ್ಪನ್ನವಾಗಲು ಅನುಕೂಲ ಮಾಡಿಕೊಡುತ್ತದೆ. ಇದಲ್ಲದೆ ಕಂಠಭಾಗದಲ್ಲಿ ವಾಯುಚಲನೆ, ವಮನಕ್ರಿಯೆ ಇತ್ಯಾದಿಗಳು ಆಗಲು ಇದು ಅನುಕೂಲ ಮಾಡಿಕೊಡುತ್ತದೆ.
7. **ಕೂರ್ಮ**: ಇದು ಕಣ್ಣಿನ ಭಾಗದಲ್ಲಿದ್ದು ಕಣ್ಣು ರೆಪ್ಪೆ ಮುಚ್ಚಲು, ತೆರೆಯಲು ಅನುಕೂಲತೆಯನ್ನು ಮಾಡಿಕೊಡುತ್ತದೆ.
8. **ಕೃಕರ** : ಇದು ನಾಸಿಕಾ ರಂಧ್ರಗಳಲ್ಲಿ ಕಾರ್ಯನಿರ್ವಹಿಸಿ ನಾವು ಸುಲಭವಾಗಿ ಸೀನುವುದಕ್ಕೆ ಅನುಕೂಲತೆಯನ್ನು ಮಾಡುತ್ತದೆ.
9. **ದೇವದತ್ತ**: ಇದು ನಮ್ಮ ಬಾಯಲ್ಲಿ ಇದ್ದು ಆಕಳಿಕೆ ಬರಲು ಅನುಕೂಲ ಮಾಡುವುದು
10. **ಧನಂಜಯ** : ಇದು ಶರೀರವನ್ನು ಪೂರ್ಣವಾಗಿ ಆಕ್ರಮಿಸಿಕೊಂಡಿರುತ್ತದೆ. ಮನುಷ್ಯ ಸತ್ತಿದ್ದರೂ ದೇಹವನ್ನು ಬಿಡದೆ ಸ್ವಲ್ಪಕಾಲ ದೇಹದಲ್ಲಿದ್ದು ಅದು ಕೆಡದೇ ಇರಲು ಅನುಕೂಲಮಾಡಿಕೊಡುತ್ತಿರುತ್ತದೆ.

ಮತ್ತೊಂದು ಶ್ಲೋಕವನ್ನು ಗಮನಿಸೋಣ.

ಇಂದ್ರನೀಲಃ ಪ್ರಾಣವಾಯುರಪಾನೋಹರಿತಸ್ತಥಾ ।
ಉದಾನಶ್ಚ ತಟಿದ್ವರ್ಣಃ ವ್ಯಾನೋ ಗೋಕ್ಷೀರ ವರ್ಣಕಃ ।
ನೀಲವರ್ಣಾ ಸಮಾನಶ್ಚ ಪೀತವರ್ಣಶ್ಚ ನಾಗಕಃ ।
ಕೂರ್ಮವಾಯುಃ ಶ್ವೇತವರ್ಣೋಹ್ಯಂಜನಃ ಕೃಕರಸ್ತಥಾ ।
ದೇವದತ್ತ ಸ್ಫಾಟಿಕಶ್ಚ ಇಂದ್ರ ನೀಲೋ ಧನಂಜಯಃ ॥

ಈ ಶ್ಲೋಕವು ರಮ್ಯವಾಗಿರುವುದಲ್ಲದೆ ಬಹು ಅರ್ಥಪೂರ್ಣವಾಗಿದೆ. ದಶಪ್ರಾಣಗಳ ಬಣ್ಣಗಳನ್ನು ತಿಳಿಸುತ್ತದೆ, ಈ ಶ್ಲೋಕ. ವಾಯುವಿಗೆ (ಗಾಳಿಗೆ) ಬಣ್ಣವಿಲ್ಲ ಎನ್ನುವುದು ಎಲ್ಲರಿಗೂ ವೇದ್ಯ. ಆದರೆ ಇಲ್ಲಿ ಬಣ್ಣಗಳನ್ನು ಹೇಳಲಾಗಿದೆ. ಇದು ಗಂಭೀರವಾದ ವಿಷಯ. ಇದು ನಮ್ಮ ನಾಡಿನ ದಾರ್ಶನಿಕರ ಜ್ಞಾನ ವೈದುಷ್ಯಕ್ಕೆ ಒಂದು ನಿದರ್ಶನ ಮಾತ್ರ. ಅತಿ ವಿಸ್ತಾರವಾದ ಆಧುನಿಕ ವೈದ್ಯ ವಿಜ್ಞಾನದಲ್ಲೂ ಸಹ ನನಗೆ ತಿಳಿದಿರುವಂತೆ ದಶಪ್ರಾಣಗಳ ಬಣ್ಣಗಳ ವಿಷಯ ಪ್ರಸ್ತಾಪವಾಗಿದೆ ಎನಿಸುವುದಿಲ್ಲ. (ಪ್ರಾಜ್ಞರು ಈ ವಿಷಯದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಿದರೆ ಸ್ವಾಗತಾರ್ಹ).

ನಾವು ಸಾಮಾನ್ಯವಾಗಿ ಒಂದು ನಿಮಿಷಕ್ಕೆ 15 ಪರ್ಯಾಯಗಳು ಉಸಿರಾಡುತ್ತೇವೆ. ಈ ಗಣನೆಯಲ್ಲಿ ಒಂದು ದಿನದಲ್ಲಿ 21600 ಪರ್ಯಾಯಗಳು ಉಸಿರಾಡುತ್ತಿರುತ್ತವೆ. ಉಚ್ಛ್ವಾಸ, ನಿಶ್ವಾಸದ ಕ್ರಿಯೆಯನ್ನು ಕ್ರಮಬದ್ಧಗೊಳಿಸುವುದೇ ಪ್ರಾಣಾಯಾಮದ ಪ್ರಮುಖ ಉದ್ದೇಶ. ಸಾಮಾನ್ಯವಾಗಿ ನಿಶ್ವಾಸ ವಿಸ್ತಾರ 12 ಅಂಗುಲದಷ್ಟಿರುತ್ತದೆ. ಹಾಡುವಾಗ, ಊಟಮಾಡುವಾಗ, ನಡೆಯುವಾಗ, ಮಲಗಿರುವಾಗ ಈ ವಿಸ್ತಾರ ಬದಲಾಗುತ್ತಿರುತ್ತದೆ. ಉಸಿರಾಟದ ವೇಗವನ್ನು (ಅಂದರೆ ಎರಡು ಉಸಿರಾಟಗಳ ಮಧ್ಯದ ಅಂತರವನ್ನು) ಕಡಿಮೆ ಮಾಡುವ ಪ್ರಯತ್ನವನ್ನು ಪ್ರಾಣಾಯಾಮದಲ್ಲಿ ಮಾಡಬೇಕು. ಇದರಿಂದ ಮನಸ್ಸು ಶಾಂತವಾಗಿ,

ಪ್ರಸನ್ನವಾಗಿ ಇರಲು ಸಾಧ್ಯವಾಗಿ ಶಾರೀರಿಕ, ಮಾನಸಿಕ ಸ್ವಾಸ್ಥ್ಯ ಉಂಟಾಗುತ್ತದೆ. ಇದು ನಮ್ಮ ಪೂರ್ವಜರು ಕಂಡು ಹೇಳಿರುವ ಸತ್ಯ . ಇದು ಇಂದಿಗೂ ಪ್ರಸ್ತುತ ಎನ್ನುವುದು ನಿಸ್ಸಂದೇಹ.

ಇನ್ನು ಮುಂದಿನದು ದಶನಾದಗಳ ವಿಷಯ. ಪ್ರಜ್ಞಾವಂತರಾದ ನಮ್ಮ ಹಿರಿಯರು ತೀವ್ರತರ ಸಾಧನೆಯ ಮೂಲಕ ನಮ್ಮ ದೇಹದ ಮೇಲೆ ಸಂಯಮ ಮಾಡುವುದರಿಂದ ಚಿತ್ತದ ಏಕಾಗ್ರ ಸ್ಥಿತಿಯಲ್ಲಿ ದಶವಿಧ ನಾದಗಳು ನಮಗೆ ಕೇಳಿಬರುತ್ತವೆಂದು ಪ್ರತಿಪಾದಿಸಿದ್ದಾರೆ. ಪ್ರಾಣ ವಾಯುಗಳ ಉನ್ನತವಾದ ಧ್ವನಿಯೇ ''ನಾದ'' (ಪವನೋನ್ನತ ಘೋಷ) ಎಂದು ಹೇಳಿದ್ದಾರೆ. ಷಣ್ಮುಖೀ ಮುದ್ರೆ ಧರಿಸಿ ಎರಡು ಕಿವಿಗಳನ್ನು ಮುಚ್ಚಿ ದೀರ್ಘ ಉಚ್ಛ್ವಾಸ ನಿಶ್ವಾಸಗಳನ್ನು ಮಾಡುತ್ತಿರುವಾಗ ಏಕಾಗ್ರತೆಯಲ್ಲಿ ''ಪ್ರಣವವು'' ನಾದವಾಗಿ ಪರಿವರ್ತನೆ ಹೊಂದುವುದನ್ನು ಅವಲೋಕಿಸಬಹುದೆಂದು ತಿಳಿಸಿದ್ದಾರೆ.

ಚಿಣಿತಿ ಪ್ರಥಮಾಃ ಚಿಣಿಚಿಣಿತಿ ದ್ವಿತೀಯಾಃ ಘಂಟಾನಾದಃ ತೃತೀಯಾಃ ಶಂಖನಾದಃ ಚತುರ್ಥಃ
ಪಂಚಮಸ್ತನ್ತ್ರೀ ನಾದಃ ಷಟ್ತಾಲ ನಾದಃ ಸಪ್ತಮೋ ವೇಣು ನಾದಃ ಅಷ್ಟೋ ಭೇರೀ ನಾದಃ
ನವಮೋ ಮೃದಂಗ ನಾದಃ ದಶಮೋ ಮೇಘನಾದಃ ನವಮಂ ಪರಿತ್ಯಕ್ತ ದಶಮೇವಾಭ್ಯಸೇತ್ ॥

ಚಿಣಿ, ಚಿಣಿಚಿಣಿ, ಘಂಟಾ, ಶಂಖ, ವೀಣಾ, ತಾಳ, ವೇಣು (ಕೊಳಲು), ಭೇರೀ (ಡಿಂಡಿಮ), ಮೃದಂಗ, ಮೇಘ – ಈ ಹತ್ತೂ ಧ್ವನಿಗಳು ಕ್ರಮವಾಗಿ ಹತ್ತು ನಾದಗಳು. ಈ ನಾದಗಳನ್ನು ಕೇಳುವಾಗ ನಮ್ಮ ಮನಸ್ಸಿನಲ್ಲಿ ವಿಚಿತ್ರಚ್ಛಾವದ ಅನುಭೂತಿ ಉಂಟಾಗಿ ಒಂದು ಆನಂದಮಯವಾದ ಚಿತ್ರಣವು ಮೂಡುತ್ತದೆಂದು ಹೇಳಲಾಗಿದೆ. (ಇದರ ವಿವರಣೆ ಕೊಡುತ್ತಾಹೋದರೆ ಲೇಖನ ಅತೀ ವಿಸ್ತಾರವಾಗುತ್ತದೆಂದು ಇಲ್ಲಿಗೆ ಮಿತಿಗೊಳಿಸಲಾಗಿದೆ). ಚಿತ್ಕಲಾ ಸಾಕ್ಷಾತ್ಕಾರಕ್ಕೆ ಇದು ಸೋಪಾನವೇ ಸರಿ. ಹೀಗೆ ಮುಂದುವರೆಯುತ್ತಾ ಹೋದಲ್ಲಿ ರಮ್ಯವಾದ ಸ್ವಯಂಪ್ರಕಾಶ ಕಾಣಿಸುತ್ತದೆ. ತದನಂತರ ಶಬ್ದಾದಿ, ಇಂದ್ರಿಯಾದಿ ವಿಷಯಗಳೆಲ್ಲವು ನಶಿಸಿ, ಅಂತಃಕರಣಕ್ಕೆ ಉಪಶಾಂತಿ ಲಭಿಸುತ್ತದೆ ಎಂದು ಹೇಳಲಾಗಿದೆ. ಮನುಷ್ಯನಿಗೆ ಇದುವೇ ವಿಮೋಚನೆ – ಮೋಕ್ಷ, ಪರಮಪದ. ಇದಕ್ಕೆ ಅಮೋಘ ಸಾಧನೆ, ತಪೋನಿಷ್ಠೆ, ಚಿತ್ತೈಕಾಗ್ರತೆ, ದೀಕ್ಷೆ ಎಲ್ಲವೂ ಅತ್ಯಾವಶ್ಯಕ. ಸಾಮಾನ್ಯರಿಗೆ ಸಾಧ್ಯವಾಗದ ಈ ಮಹತ್ಸಾಧನೆಗಳನ್ನು ಮಾಡಿ ದರ್ಶಿಸಿ, ಅನುಭವಿಸಿದ ಋಷಿಪುಂಗವರನ್ನು ಪಡೆದ ನಮ್ಮ ಸಂಸ್ಕೃತಿ ಅತ್ಯುನ್ನತ, ಅತಿ ಮಾನ್ಯ , ಅತಿ ಪ್ರಶಂಸಾರ್ಹ ಎನ್ನಲೇಬೇಕು.

ಹೀಗೆ ಇಂದಿನ ವೈಜ್ಞಾನಿಕ ಸಂಶೋಧನೆಗಳಿಗೂ ಎಟುಕದ ಅನೇಕ ಶಾರೀರಿಕ, ಮಾನಸಿಕ ಸಂಬಂಧೀ ವಿಚಾರಗಳನ್ನು ನಮ್ಮ ಮುನಿಪುಂಗವರು ದಿವ್ಯ ನೇತ್ರಗಳಿಂದ, ಅನುಭವದಿಂದ ದರ್ಶಿಸಿ ನಮಗೆ ತಿಳಿಸಿ ಹೇಳಿದ್ದಾರೆ. ಇಂತಹ ನೆಲದಲ್ಲಿ ಜನಿಸಿರುವ ನಾವು, ಅವುಗಳನ್ನು ಬೆಳಕಿಗೆ ತರುವುದು ನಮ್ಮ ಕನಿಷ್ಠ ಧರ್ಮ ಎಂದು ಭಾವಿಸುತ್ತೇನೆ.

ನಮ್ಮ ದೇಶ - ನಮ್ಮ ಸಂಸ್ಕೃತಿ

ಶ್ರೀ ರಘುನಾಥ ಶಾಸ್ತ್ರಿ, ಶ್ರೀಮಠ, ಹರಿಹರಪುರ

ಆಂಧ್ರದ ಶ್ರೀಶೈಲಂನ ಶ್ರೀದೇವಿ ವೇದವಿದ್ಯಾಲಯದಲ್ಲಿ ವೇದ ವಿದ್ಯಾರ್ಥಿಯಾಗಿದ್ದ ಇವರು ಪರಮಪೂಜ್ಯ ಜಗದ್ಗುರುಗಳ ಆಶೀರ್ವಾದದಿಂದ ನಮ್ಮ ಹರಿಹರಪುರ ಶ್ರೀಮಠಕ್ಕೆ ಪೀಠಾಧಿಕಾರಿಯಾಗಿ ನಿಯೋಜಿತರಾದ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರ ಆಪ್ತ ಸಹಾಯಕರಾಗಿ ಅತ್ಯಂತ ಶ್ರದ್ಧೆ - ಭಕ್ತಿ - ಚಾಕಚಕ್ಯತೆಯಿಂದ ಕಾರ್ಯನಿರ್ವಹಿಸುತ್ತ ಜನಪ್ರಿಯರಾಗಿದ್ದಾರೆ. ಈ ಲೇಖನ ಕೊಟ್ಟಿರುವುದಕ್ಕಾಗಿ ಹಾರ್ದಿಕ - ಆತ್ಮೀಯ ಶುಭಾಶೀರ್ವಾದಗಳು.

- ಸಂಪಾದಕ

ಮೊನ್ನೆ ಸ್ವಾತಂತ್ರ್ಯೋತ್ಸವದ ದಿನ "ಅಣ್ಣಾ! ಚೆನ್ನಾಗಿದ್ದೀಯಾ?" ಎಂದು ಕೇಳುತ್ತ ಒಬ್ಬಳು ದೇವರಿತ್ತ ತಂಗಿ phone ಮಾಡಿದ್ಲು. fine ಕಣೆ! ನೀನು? ಅಂದೆ. ನಾನೂ ಚೆನ್ನಾಗಿದ್ದೇನೆ ಅಣ್ಣಾ, ಏನ್ಸಮಾಚಾರ? ಅಂದ್ಲು. "ಏನಿಲ್ಲಮ್ಮಾ, ಇವತ್ತು ಸ್ವಾತಂತ್ರ್ಯೋತ್ಸವದ ದಿನ ಅಲ್ವಾ ಏನ್ಮಾಡಿದ್ಯಾ? ಅಂದೆ. ಹ್ಹಹ್ಹಾ ಏನೂ ಮಾಡಿಲ್ಲಣ್ಣಾ, ಯಾಕೆ, ಕನಿಷ್ಠ ಮನೆಯಲ್ಲಿ ಒಂದು flagನ್ನಾದರೂ ಹಾಕಿದ್ಯಾ. ಓ ಹೋಗಿ ಅಣ್ಣಾ, ಅದೆಲ್ಲ ನಾನು ಮಾಡಲ್ಲ, ನಂಗೆ ನಮ್ಮ ದೇಶ ಅಂದ್ರೆ ಇಷ್ಟವಿಲ್ಲ, ಅಂದ್ಲು, ನಂಗೆ ಒಂದು second shock ಆಯ್ತು, ಯಾಕೆ ಅಂದೆ. ನಮ್ಮ ದೇಶದಲ್ಲಿ ನ್ಯಾಯಕ್ಕೆ ಎಲ್ಲಿ ಬೆಲೆ ಇದೆ, ಅಣ್ಣಾ? ಎಲ್ಲಿ ನೋಡಿದರೂ ಲಂಚ, ಭ್ರಷ್ಟಾಚಾರ, ಪ್ರತಿಭೆ ಇರೋವ್ರಿಗೆ ಇಲ್ಲಿ ಜಾಗ ಇಲ್ಲ, ಉದಾಹರಣೆಗೆ ನಾನೇನೆ. SSLCಲಿ ನಂಗೆ 92% ಬಂದಿತು. ಒಳ್ಳೆ collegeಗೆ ಸೇರ್ಕೊಳ್ಳೋಣಾಂದ್ರೆ ಸೀಟೇ ಕೊಡ್ಲಿಲ್ಲ. ಅದೇ ನನ್ನೊಜೆತೆಗೇ ಓದಿ 80 - 82%ಬಂದವರಿಗೆಲ್ಲ 50 - 60 ಸಾವಿರ ಶುಲ್ಕ ತೆಗೆದುಕೊಂಡು seat ಕೊಟ್ಟಿದ್ದಾರೆ, ನಮ್ಮನ್ನೂ ಕೇಳಿದ್ರು, ಆದರೆ ನಾನು ಬೇಡಾಂತ ನಮ್ಮನೆ ಹತ್ರ ಇರೋ ಮಾಮೂಲಿ ಕಾಲೇಜಿಗೆ ಸೇರ್ಕೊಂಡಿದೀನಿ. ಈ ಥರದ ದೇಶದ್ಮೇಲೆ ನಮ್ಗ್ಯಾಕೆ ಪ್ರೀತಿ ಬರುತ್ತೆ, ಹೇಳಣ್ಣಾ, ಅಂದ್ಲು.

ನಂಗೇನು ಹೇಳಬೇಕೂಂತ ಒದ್ನಿಮಿಷ ಅರ್ಥ ಆಗ್ಲಿಲ್ಲ. ಈ ಲೇಖನ ಓದುತ್ತಿರುವ ಪ್ರತಿಯೊಬ್ಬರೂ ಯೋಚನೆ ಮಾಡಬೇಕಾದ ವಿಷಯವೇನೆಂದರೆ ಲಂಚ, ಭ್ರಷ್ಟಾಚಾರ, ಪ್ರಭಾವ ಅನ್ನೋದು ಎಲ್ಲೋ Governement Officeನಲ್ಲಿರೋವ್ರಿಗೆ ಅಥವಾ ಯಾರೋ ದೊಡ್ಡವ್ರಿಗೆ ಮಾತ್ರ ಆಗೋದಲ್ಲ, ಸಮಾಜದ ಒಬ್ಬ ಸಾಮಾನ್ಯ ಮನೆಯ ಹೆಣ್ಣು ಮಗುವಿಗೂ ಇದರ ಬಿಸಿ ತಟ್ಟುತ್ತಾ ಇದೆ. ಗ್ರಾಮಪಂಚಾಯ್ತಿಯಲ್ಲಿ Income Certificate, Bus Pass ಮಾಡಿಸಿಕೊಳ್ಳುವ ಅತಿ ಬಡ ಹಳ್ಳಿಯ ಮಕ್ಕಳಿಗೂ ಇದರ ಬಿಸಿ ಇದೆ. ಅರ್ಥಾತ್ ಇಡೀ ದೇಶಕ್ಕೆ ದೇಶವೇ ಈ ಥರದ ಸ್ಥಿತಿಯಲ್ಲಿದೆ. ಇದಕ್ಕೆ ಕಡಿವಾಣ ಹಾಕಬೇಕಾದ ಸರ್ಕಾರ, ವ್ಯವಸ್ಥೆಯ ತಿದ್ದಬೇಕಾದ ಹಿರಿಯರು ಇದೇ ಪರಿಸ್ಥಿತಿಯಲ್ಲಿರಬೇಕಾದ್ರೆ, ಮೇಲೆ ಹೇಳಿದಂಥ, ಇನ್ನು ಮುಂದೆ ಭಾವೀ ಪ್ರಜೆಗಳಾದ, ಈ ದೇಶವನ್ನು ಕಾಪಾಡಿಕೊಳ್ಳಬೇಕಾದ ಯುವಜನತೆಗೆ ದೇಶಭಕ್ತಿ, ರಾಷ್ಟ್ರಪ್ರೇಮ ಬರುವುದು ಹೇಗೆ? ನಮ್ಮ ದೇಶವನ್ನು ರಕ್ಷಿಸುವವರು ಯಾರು? ಮುಂದಿನ ಪೀಳಿಗೆಯ ಪರಿಸ್ಥಿತಿ ಏನು? ಇದು ಎಲ್ಲಿಗೆ ಹೋಗಿ ನಿಲ್ಲಬಹುದು? ಮತ್ತೆ ಪರಕೀಯರ ಆಕ್ರಮಣ ಬರುವ ತನಕವಾ? ಈ ಎಲ್ಲಾ ಪ್ರಶ್ನೆಗಳೂ ಆ ಕ್ಷಣಕ್ಕೆ ನನ್ನಲ್ಲಿ ಮೂಡಿದ್ದು.

ಆಗ ನಾನು ಆ ನನ್ನ ತಂಗಿಗೆ ಹೇಳಿದ್ದೆ. ಹಾಗೆಲ್ಲ ದೇಶದ ಬಗ್ಗೆ ಕೆಟ್ಟದಾಗಿ ಮಾತನಾಡಬೇಡಮ್ಮ, ಯಾಕೆಂದರೆ, ನಮ್ಮ ದೇಶ ಅತ್ಯುತ್ತಮವಾದ ಸಂಸ್ಕೃತಿ ಇರುವಂಥಾ ದೇಶ. ಒಂದು ಕಾಲದಲ್ಲಿ ವಿಶ್ವದಲ್ಲಿ ಯಾರೂ ಇನ್ನೂ ನಾಗರಿಕತೆಯ ಕಣ್ಣು ಬಿಡುವ ಮೊದಲು ಅತ್ಯಂತ ನಾಗರಿಕರಾಗಿ ಎಲ್ಲಾ ವಿಧದಲ್ಲೂ ಶ್ರೇಷ್ಠರಾಗಿ ಬಾಳಿದ ದೇಶ. ಜಗದ್ಗುರುವೆಂದು ಕರೆಸಿಕೊಂಡ ದೇಶ ನಮ್ಮದು. ಆದರೆ ಇವತ್ತು ಇಂಥಾ ಪರಿಸ್ಥಿತಿಯಲ್ಲಿ ಇದೀವಿ ಎಂದರೆ ಈಗಿನ ನಮ್ಮ ಜನರು ಈ ಥರಾ ಇದ್ದಾರೆ. ಈ ಜನರನ್ನು ನೋಡಿ ನಮ್ಮ ದೇಶವನ್ನೇ ದ್ವೇಷಿಸಬಾರದು ತಂಗೀ, ಅಂದೆ.

ಅವಳಿಗೆ ಅವಳಾಡಿದ ಮಾತುಗಳಿಗೆ ಈಗ ಬೇಜಾರಾಗಿತ್ತು. ಹೌದಣ್ಣಾ, ನಮ್ಮ ದೇಶ ಸಂಸ್ಕೃತಿ ತುಂಬಾ ಒಳ್ಳೇದೆ. ಆದ್ರೆ ಜನ, ಪರಿಸ್ಥಿತಿಯಿಂದ ಬೇಜಾರಾಗ್ಬಿಟ್ಟು ಆ ಥರಾ ಮಾತಾಡ್ದೆ. Sorry ಅಣ್ಣಾ, ಆದ್ರೂ ಇಷ್ಟು ಸಂಸ್ಕೃತಿ ಇಟ್ಟುಕೊಂಡ್ರೂ ನಮ್ದೇಶದಲ್ಲಿ ಈಗ ಈ ಥರಾ ಯಾಕಾಗಿದೆ ಅಣ್ಣಾ? ಅಂದ್ಲು.

ಯಾಕೆಂದರೆ ಈಗ ನಮ್ಮ ದೇಶದಲ್ಲಿ ಅಂಥಾ ಸಂಸ್ಕೃತಿಯನ್ನು ಕಲಿಸೋ ವಿದ್ಯೆ ಯಾರೂ ಕಲಿಸ್ತಾ ಇಲ್ಲಮ್ಮ. ಉದಾಹರಣೆಗೆ ಎಷ್ಟೋ ದೊಡ್ಡ ದೊಡ್ಡ ವಿದ್ಯೆಗಳನ್ನು ಓದಿದ IAS, IPS ಗಳಂಥವ್ರೇ ಈ ತರದ ಕೆಲ್ಸಗಳು ಮಾಡ್ತಾ ಇದ್ದಾರೇಂದ್ರೆ ಆವಾಗ ನಾವು ಅವರನ್ನು ಸಂಸ್ಕೃತಿ ಇಲ್ಲದವ್ರು ಅಂತೀವಿ. ಅಂದರೆ ವಿದ್ಯೆ ಮಾತ್ರ ಕಲಿಯೋದಲ್ಲ, ಸಂಸ್ಕೃತೀನೂ ಬೆಳೆಸ್ಕೋಬೇಕು. ಅಂತಹ ಸಂಸ್ಕೃತಿ ಇರುವಂತಹ ದೇಶ ನಮ್ಮದು. ಇಂತಹ ಸಂಸ್ಕೃತಿಯನ್ನು ಹಿಂದೆ ನಮ್ಮ ತಾಯಿ ಎದೆಹಾಲು ಕುಡಿಸುವಲ್ಲಿಂದಲೇ ಹೇಳಿಕೊಡುತ್ತಿದ್ದರು.

ನಮ್ಮ ದೇಶದಲ್ಲಿ ಎಷ್ಟು ಉತ್ತಮ ಜನರು ಬಂದು ಹೋಗಿದ್ದರು. ನಮ್ಮ ಆದರ್ಶ ಪುರುಷರು ಹೇಗಿದ್ದರು ಗೊತ್ತಾ? ಸತ್ಯ ಹರಿಶ್ಚಂದ್ರನ ಬಗ್ಗೆ ಕೇಳಿದ್ಯಾ? ಅವನ ಕೈಲಿ ಒಂದು ಸುಳ್ಳು ಅಂದರೆ ಒಂದೇ ಒಂದು ಸುಳ್ಳು ಹೇಳಿಸುವುದಕ್ಕೋಸ್ಕರ ಸಾಕ್ಷಾತ್ ದೇವತೆಗಳೇ ಪ್ರಯತ್ನ ಮಾಡಿ ಸೋತರು. ಸತ್ಯ ಹರಿಶ್ಚಂದ್ರ ತನ್ನ ಸತ್ಯಕ್ಕೋಸ್ಕರ ತನ್ನ ಅಖಂಡ ರಾಜ್ಯವನ್ನು, ರಾಜಭೋಗಗಳನ್ನು, ಸುಖ – ಸಂತೋಷಗಳನ್ನು ಎಲ್ಲವನ್ನೂ ತ್ಯಾಗಮಾಡಿದ, ಅಷ್ಟೇನಾ? ಸತ್ಯದ ಮುಂದೆ ಯಾವುದೂ ದೊಡ್ಡದಲ್ಲವೆಂದು ತನ್ನ ಮಗನನ್ನೂ, ಹೆಂಡತಿಯನ್ನೂ ದೂರಮಾಡಿಕೊಂಡು, ಮಹಾರಾಜನಾದವನು ಸ್ಮಶಾನದಲ್ಲಿ ಪ್ರೇತಗಳನ್ನು ಸುಡೋ ಕೆಲಸಕ್ಕೂ ಸಿದ್ಧನಾದ. ಯಾವುದಕ್ಕಾಗಿ? ಸತ್ಯಕ್ಕಾಗಿ. ಒಂದೇ ಒಂದು ಸುಳ್ಳು ಹೇಳಿದ್ದರೆ, ತನ್ನ ರಾಜ್ಯ, ಸುಖವೆಲ್ಲ ವಾಪಸು ಬರುತ್ತೆ ಎಂದು ಗೊತ್ತಿದ್ದರೂ, ತನ್ನ ರಾಜ್ಯ ಸುಖ, ಪ್ರಾಣಕ್ಕಿಂತ ತನ್ನ ಸತ್ಯವ್ರತವೇ ಶ್ರೇಷ್ಠವೆಂದು ಕಾಪಾಡಿಕೊಂಡ. ಈ ವಿಷಯ ನಿಂಗೊತ್ತಾ? ಎಂದೆ. ಇಷ್ಟೆಲ್ಲಾ ಗೊತ್ತಿಲ್ಲ ಅಣ್ಣಾ.

ನಮ್ಮ ರಾಮಾಯಣ ಗೊತ್ತಲ್ವಾ? ಅದರಲ್ಲಿ ರಾಮನಿಗೆ, ಭರತನಿಗೆ ಗಲಾಟೆ ನಡೀತು ಗೊತ್ತಾ? ರಾಮ ಭರತಂಗೆ ಗಲಾಟೆನಾ? ಏನಣ್ಣಾ ಅದು? ತುಂಬಾ ವಿಚಿತ್ರವಾಗಿದೆ.

ರಾಮಭರತರು 'ರಾಜ್ಯ ನಿನ್ನದು, ಅಂದ್ರೆ ನಿನ್ನದು, ನಂಗೆ ಬೇಡ ಅಂದ್ರೆ ನಂಗೆ ಬೇಡ, ನೀನೇ ರಾಜ, ನೀನೇ ರಾಜ್ಯ ಪಾಲಿಸಬೇಕು, ಎಂದು ಗಲಾಟೆ ಮಾಡ್ಕೊಂಡ್ರು'. ಇಂಥಾ ಗಲಾಟೆ ಮಾಡ್ಕೊಂಡ ಅಣ್ಣ – ತಮ್ಮಂದಿರಿರುವ ದೇಶ ಅಂದ್ರೆ ನಮ್ಮ ಭಾರತ ದೇಶ, ಅಂದ್ರೆ ನಂಬ್ತೀಯಾ?

ಅನಾಯಾಸವಾಗಿ ಅಖಂಡ ಸಾಮ್ರಾಜ್ಯ ಸಿಕ್ಕಿದರೂ ಅದನ್ನು 14 ವರ್ಷಗಳು ಆಳಿದರೂ ಒಂದು second ಕೂಡಾ ದುರಾಲೋಚನೆ ಮಾಡದೆ 14 ವರ್ಷ ಕಳೆದ ಮಾರನೆ ದಿನ ರಾಮ ಬರಲಿಲ್ಲವೆಂದು ಅಗ್ನಿಪ್ರವೇಶ ಮಾಡ್ಲಿಕ್ಕೆ ಹೋದ ಭರತನಂತವರು ನಮಗಾದರ್ಶ.

ಇನ್ನೊಂದು ಕಡೆಯಿಂದ 'ಈ ರೀತಿ ಬದುಕುವವರಿಗೆ ಸಾಕ್ಷಾತ್ ಭಗವಂತನೇ ಬಂದು ಸಹಾಯ ಮಾಡುತ್ತಾನೆ' ಎಂದು ಹೇಳಿದ ದೇಶ. ಅನಾಚಾರ ಮಾಡಿದರೆ ಭಗವಂತನ ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ಆಗುವುದಿಲ್ಲ, 'ಮಾಡಿದ್ದುಣ್ಣೋ ಮಹರಾಯ' ಎಂದು ಕರ್ಮ ಸಿದ್ಧಾಂತವನ್ನು ಅತ್ಯಂತ ವೈಜ್ಞಾನಿಕವಾಗಿ ಹೇಳಿದ ದೇಶ.

ಜೀವನದಲ್ಲಿ ಸುಖ – ಭೋಗಗಳಿಗಿಂತ ತ್ಯಾಗವೇ ಶ್ರೇಷ್ಠ ಎಂದು ಹೇಳಿದ ದೇಶ ನಮ್ಮದು. ಅದನ್ನು ತೋರಿಸೋ ಮಹಾತ್ಮರು ಹುಟ್ಟಿದ ದೇಶ. ಶಂಕರರು ತಮ್ಮ 8 ನೇ ವಯಸ್ಸಿನಲ್ಲಿ ತಾಯಿಗೂ ಸತ್ಯದ ಅರಿವು ಮೂಡಿಸಿ ಸಂನ್ಯಾಸ ಸ್ವೀಕಾರ ಮಾಡಿದರು. ಅವರ

ಪರಂಪರೆಯಲ್ಲಿ ಅನೇಕರು ಇಂದಿಗೂ ಬಾಲ್ಯದಲ್ಲೇ ಸಂನ್ಯಾಸ ಸ್ವೀಕಾರ ಮಾಡುತ್ತಿದ್ದಾರೆ. ಇಂತಹ ದೇಶ ನಮ್ಮದು. ವೀರ ಸಂನ್ಯಾಸಿ ವಿವೇಕಾನಂದರ ಜೀವನ ಚರಿತ್ರೆ ತಿಳ್ಕೊಂಡಿದ್ಯಾ? ಇಂಥಾದ್ದೆಲ್ಲಾ ಈಗ ಯಾರು ನೆನೆಸ್ಕೊಳ್ಳೊದಿಲ್ಲ, ಎಲ್ಲರೂ ತಮ್ಮ ತಮ್ಮ ಸ್ವಾರ್ಥಗಳಲ್ಲಿ ಬಿದ್ದು ನಮ್ಮ ಪರಂಪರೆ, ಸಂಸ್ಕೃತಿ ಎಲ್ಲವನ್ನೂ ಕಡೆಗಣಿಸಿದ್ದೀವಿ. ನಮ್ಮ ಆಚಾರ - ವಿಚಾರ - ಸಂಪ್ರದಾಯಗಳೆಂದರೆ ನಮಗೆ ಅಸಡ್ಡೆ, ಅದಕ್ಕೆ ನಮ್ಮ ದೇಶದಲ್ಲಿ ಹೀಗಾಗಿದೆ.

ಹೌದಣ್ಣಾ, ಆದರೆ ನನಗೆ ಗುರುಗಳ ಬಗ್ಗೆ, ದೇವರ ಬಗ್ಗೆ ನಂಬಿಕೆ ಇದೆ. ಆದರೆ ನಂಗಾದ ಅನ್ಯಾಯ ನೋಡಿ ನಂಗೆ ನಮ್ಮ ದೇಶದ ಬಗ್ಗೆ ಹೀಗನ್ನಿಸಿಬಿಡ್ತು. ನಂಗೆ ನಮ್ಮ ದೇಶದ ಮೇಲೆ ಪ್ರೀತಿ ಇದೆ. ಈಗ ನಾನೇನ್ ಮಾಡ್ಬೇಕಣ್ಣಾ?

ಇನ್ಮುಂದೆ ನಮ್ಮ ದೇಶದ ಬಗ್ಗೆ ಕೀಳಾಗಿ ಯೋಚಿಸ್ಬೇಡ, ನಮ್ಮ ಸಂಸ್ಕೃತಿ, ಆಚಾರಗಳ ಬಗ್ಗೆ ತಿಳಿದು ಸಾಧ್ಯವಾದಷ್ಟು ಆಚರಣೆಗಿಟ್ಕೋ. ನಿನ್ನ classmatesಗೂ ಇದನ್ನ ತಿಳಿಸು. ಆಯ್ತಣ್ಣಾ

ಅಲ್ಲಿಗೆ ಮುಗಿದಿಲ್ಲ ತಂಗಿ. ಇನ್ನೊಂದು ಮುಖ್ಯ ಕೆಲ್ಸ ಮಾಡ್ಬೇಕು ನೀನು. ಏನಣ್ಣಾ? ದೇಶ ಸರಿಯಾಗಬೇಕಾದರೆ ನಿನ್ನಂಥವರು ಮುಂದೆ ಬರ್ಬೇಕು. ಏನ್ಮಾಡ್ಬೇಕು ಅಂತ ಹೇಳಣ್ಣಾ? 'ನೀನು ತುಂಬಾ ಒಳ್ಳೆಯವಳಿದ್ಯಲ್ಲಾ, ನೀನು ಒಂದು ಹತ್ತು ಮಕ್ಕಳನ್ನು ಹೆತ್ತು ದೇಶಕ್ಕೊಳ್ಳೇದ್ಮಾಡು' ಅಂದೆ.

ಅವಳು ಹೋಗಿ ಅಣ್ಣಾ................. ಎಂದಳು.

ಯುಗದೇವತೆ 'ಕಲಿ'ಯನ್ನೇ ನಿರ್ಬಂಧಿಸಿದ ಪರೀಕ್ಷಿತ ರಾಜ

ಶ್ರೀ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

ಧರ್ಮ - ಸದಾಚಾರ, ನಾಗರಿಕರ ಕುಂದು ಕೊರತೆಗಳ ನಿವಾರಣೆ ಇವುಗಳಲ್ಲಿ ಆಸಕ್ತರಾಗಿ ಆ ಸಂಬಂಧಪಟ್ಟಂತೆ ವಿವಿಧ ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸುತ್ತ ನಗರದಲ್ಲಿ ಜನಪ್ರಿಯತೆ ಹೊಂದಿರುವ ಶ್ರೀ ಕೋಟೇಶ್ವರ ಸೂರ್ಯನಾರಾಯಣರು ರಚಿಸಿರುವ ಈ ಪೌರಾಣಿಕ ರಹಸ್ಯ ಎಲ್ಲ ಕಾಲಕ್ಕೂ ಪ್ರಸ್ತುತವಾಗಿದ್ದು ಇವರಿಗೆ ಹಾರ್ದಿಕ ಅಭಿನಂದನೆ ಸಲ್ಲಿಸುತ್ತೇನೆ. - ಸಂಪಾದಕ

ಚತುರ್ಯುಗಗಳ ಪೈಕಿ ಕೃತಯುಗ, ತ್ರೇತಾಯುಗ ಕಳೆದು ದ್ವಾಪರಯುಗದ ಅಂತ್ಯ ಸಮೀಪಿಸುತ್ತಿದೆ. ಭಗವಾನ್ ಶ್ರೀಮನ್ನಾರಾಯಣ ದುಷ್ಟನಿಗ್ರಹ ಶಿಷ್ಟಪರಿಪಾಲನಾ ಕಾರ್ಯಕ್ಕೆ ಭುವಿಯಲ್ಲಿ ಶ್ರೀಕೃಷ್ಣನಾಗಿ ಅವತರಿಸಿ ತಾಯಿಯ ಸ್ತನ್ಯಪಾನ ಮಾಡುತ್ತಿರುವ ಬಾಲಕನಾಗಿದ್ದಾಗಲೇ ಪೂತನಿಯ ಸಂಹಾರ ಮಾಡುವುದರೊಂದಿಗೆ, ದುಷ್ಟನಿಗ್ರಹಕ್ಕೆ ಓಂಕಾರ ಬರೆದಿದ್ದ. ತನ್ನ ಅವತಾರ ಕಾಲದಲ್ಲಿ ಅಸಂಖ್ಯ ದುಷ್ಟ ದೈತ್ಯರನ್ನು ಸಂಹರಿಸಿ ತನ್ನ ಕರ್ತವ್ಯ ಮೆರೆದಿದ್ದಾನೆ. ಅವತಾರ ಸಮಾಪ್ತಿಗೆ ಮುನ್ನ ಕುರುಕ್ಷೇತ್ರದಲ್ಲಿ ನಡೆದ ಪಾಂಡವ - ಕೌರವರ ನಡುವಣ ಮಹಾ ಸಮರದಲ್ಲಿ- ಪಾಂಡವರ ಏಳು ಅಕ್ಷೋಹಿಣಿ ಸೈನ್ಯ ಹಾಗೂ ಕೌರವರ ಹನ್ನೊಂದು ಅಕೋಹಿಣಿ ಸೈನ್ಯವನ್ನು ನಾಶ ಮಾಡುವುದರ ಮೂಲಕ ದುಷ್ಟ ಸಂಹಾರದ ಕೊನೆಯ ಹಂತವನ್ನು ದಾಟಿದ್ದಾನೆ. ಅಳಿದುಳಿದ ಮಕ್ಕಳು ಹಾಗೂ ಹದಿನೆಂಟು ಅಕ್ಷೋಹಿಣಿ ವಿಧವೆಯರಿರುವ ಜಗತ್ತನ್ನು ಧರ್ಮರಾಯ ನ್ಯಾಯ, ಧರ್ಮ, ನೀತಿಯಂತೆ ಪರಿಪಾಲಿಸುತ್ತಿರುವಾಗ ಪಾಂಡವರ ಆಶ್ರಯದಾತ - ಬಂಧು - ಭಗವಾನ್ ಶ್ರೀಕೃಷ್ಣ ಬೇಡನೊಬ್ಬನ ನೆಪಮಾತ್ರದ ಬಾಣ ಪ್ರಹಾರದಿಂದ ತನ್ನ ಭೌತಿಕ ಶರೀರವನ್ನು ತ್ಯಜಿಸಿ ವೈಕುಂಠಕ್ಕೆ ಪಯಣಿಸಿದ್ದಾನೆ. ತಮ್ಮ ಸಮಸ್ತವೂ ಆಗಿದ್ದ ಶ್ರೀಕೃಷ್ಣನಿಲ್ಲದ ಲೋಕದಲ್ಲಿ ಜೀವಿಸಿರಲು ಇಷ್ಟಪಡದ ಪಾಂಡವರು, ಅಭಿಮನ್ಯು ಪುತ್ರನಾದ ಶೂರ - ಧೀರ ಪರೀಕ್ಷಿತನಿಗೆ ರಾಜ್ಯಭಾರವಹಿಸಿಕೊಟ್ಟು ದ್ರೌಪದಿಯೊಡನೆ ಸ್ವರ್ಗಾರೋಹಿಗಳಾಗಲು ಹಿಮಾಲಯದತ್ತ ಪಯಣ ಬೆಳೆಸಿದ್ದಾರೆ.

ಈ ಸಂದರ್ಭದಲ್ಲಿ ದ್ವಾಪರ ಯುಗಾಂತ್ಯವಾಗಿದೆ. ವಿಧಿನಿಯಮದಂತೆ ಕಲಿಪುರುಷ ತನ್ನ ಯುಗದಲ್ಲಿ ಅಧಿಕಾರ ನಿರ್ವಹಿಸಲು ಪ್ರವೇಶಿಸಿದ್ದಾನೆ. ಪರೀಕ್ಷಿತ ಮಹಾರಾಜ ಧರ್ಮಪರಾಯಣನಾಗಿಯೂ, ನ್ಯಾಯದಿಂದ ಲೋಕದ ರಾಜ್ಯಭಾರ ಮಾಡುತ್ತಿದ್ದರೂ ಕಲಿಯು ತನ್ನ ಶಕ್ತಿಯ ಪ್ರದರ್ಶನಕ್ಕೆ ತಯಾರಾಗಿದ್ದಾನೆ.

ಒಮ್ಮೆ ಜನರ ಹಿತಕ್ಕಾಗಿ ಕಾಡುಮೃಗಗಳ ಬೇಟೆಗಾಗಿ ತನ್ನ ಸೈನ್ಯದೊಡನೆ ಕಾಡಿನೆಡೆ ಪರೀಕ್ಷಿತ ರಾಜ ತೆರಳಿದ್ದಾನೆ. ಸಾಕಷ್ಟು ಹಿಂಸ್ರಕ ಪ್ರಾಣಿಗಳ ಸಂಹಾರ ಮಾಡಿದ ನಂತರ ಬಾಯಾರಿಕೆಯಿಂದ ಬಳಲಿದ ಪರೀಕ್ಷಿತ ಋಷಿಪುಂಗವ ಶಮೀಕರ ಆಶ್ರಮಕ್ಕೆ ತೆರಳಿದ್ದಾನೆ. ಅಲ್ಲಿ ಧ್ಯಾನಾಸಕ್ತ ಶಮೀಕರಲ್ಲಿ ನೀರನ್ನು ಕೇಳಿದ್ದಾನೆ. ಈ ಸಂದರ್ಭದಲ್ಲಿ ಪರೀಕ್ಷಿತನಲ್ಲಿ ಕಲಿಯ ಪ್ರವೇಶವಾಗಿದೆ. ಧರ್ಮಸೂಕ್ಷ್ಮ ಹಾಗೂ ಋಷಿಗಳ ಧ್ಯಾನ - ತಪಸ್ಸು ಇತ್ಯಾದಿ ತಿಳಿದವನಾದ ಪರೀಕ್ಷಿತ - ಶಮೀಕರಿಂದ ಉತ್ತರ ಬಾರದ ಕಾರಣ ಕ್ರೋಧಗೊಂಡು ಸತ್ತಿರುವ ಹಾವೊಂದನ್ನು ಶಮೀಕ ಋಷಿಯ ಕೊರಳಿಗೆ ಹಾರ ರೂಪದಲ್ಲಿ ಹಾಕಿ ತನ್ನ ಪಟ್ಟಣಕ್ಕೆ ಹಿಂತಿರುಗಿದ್ದಾನೆ.

ಇತ್ತ ಸ್ವಲ್ಪ ಹೊತ್ತಿನ ನಂತರ ಆಶ್ರಮಕ್ಕೆ ಬಂದ ಶಮೀಕರ ಪುತ್ರ ಶೃಂಗಿಯು ತಂದೆಯ ಕೊರಳಲ್ಲಿ ಸತ್ತ ಹಾವನ್ನು ನೋಡಿದ್ದಾನೆ. ಆಗ ಅವನಲ್ಲಿ ಕಲಿಯು ಪ್ರವೇಶಿಸಿದ್ದಾನೆ. ಆತನೂ ವಿವೇಚನಾರಹಿತನಾಗಿ ಪರೀಕ್ಷಿತನಿಗೆ ಶಾಪ ನೀಡಿದ್ದಾನೆ. ಅದೆಂದರೆ, ಮುಂದಿನ ಏಳು ದಿವಸಗಳಲ್ಲಿ ತಕ್ಷಕನೆಂಬ ಸರ್ಪರಾಜನಿಂದ ಪರೀಕ್ಷಿತನಿಗೆ ಮರಣವುಂಟಾಗಲಿ.

ಅತ್ತ ಕಲಿಯ ಪ್ರವೇಶದಿಂದ ಮುಕ್ತನಾದ ಪರೀಕ್ಷಿತ ತನ್ನ ಕೃತ್ಯಕ್ಕಾಗಿ ಪಶ್ಚಾತ್ತಾಪಪಟ್ಟರೂ ಅವನನ್ನು ಸುತ್ತುಗಟ್ಟಿದ ಶಾಪದ ಬಂಧನದಿಂದ ಮುಕ್ತನಾಗದೆ ಶಾಪ ಸ್ವೀಕರಿಸುವುದು ಅನಿವಾರ್ಯವಾಯಿತು. ಆದರೆ, ತನ್ನ ಸಾವಿಗೆ ಅಂಜದ ಪರೀಕ್ಷಿತ ತನ್ನನ್ನು ಕಾಡಿದ ಕಲಿಗೆ ಕಡಿವಾಣ ಹಾಕಲು ನಿಶ್ಚಯಿಸಿ ಕಲಿಯನ್ನು ಬೆನ್ನಟ್ಟಿದ್ದಾನೆ. ಸ್ವಯಂ ವಾಯುದೇವರ ಸನ್ನಿಧಾನ ಹೊಂದಿದ ಪರೀಕ್ಷಿತ

ಮಹಾರಾಜ ಧನುರ್ಧಾರಿಯಾಗಿ ಕಲಿಯ ಹಿಂದೆ ತೆರಳಿದ. ಪರೀಕ್ಷಿತನ ಶಕ್ತಿಗೆ ಸರಿಸಾಟಿಯಾಗದ ಕಲಿ – ಪರೀಕ್ಷಿತನಲ್ಲಿ ಶರಣು ಬಂದಿದ್ದಾನೆ. ಅದರೊಂದಿಗೆ ವಿಧಿ ನಿಯಮದಂತೆ ಈ ಯುಗವನ್ನು ನನ್ನ ಆಡಳಿತಕ್ಕೆ ನೀಡಲಾಗಿದೆ. ತನಗೆ ಸೂಕ್ತ ಮಾರ್ಗದರ್ಶನ ನೀಡಿದರೆ, ತಾನು ಅದರಂತೆ ನಡೆದುಕೊಳ್ಳಲು ಸಿದ್ದನಿದ್ದೇನೆ, ಅಂದಾಗ, ಪರೀಕ್ಷಿತ ಮಹಾರಾಜ, ಕಲಿಯು ತನ್ನ ಪ್ರಭಾವ ಹಾಗೂ ಶಕ್ತಿ ಪ್ರದರ್ಶನ ಮಾಡಲು ನಾಲ್ಕು ಸ್ಥಳಗಳನ್ನು ಸೂಚಿಸಿದ್ದಾನೆ. ಕಲಿಗೆ ನೀಡಿರುವ ನಾಲ್ಕು ಸ್ಥಳಗಳು ಇಂತಿವೆ. ಈ ಸ್ಥಳಗಳ ಹೊರತು ಕಲಿಯು ಮಾನವರಿಗೆ ಹಿಂಸೆ ಕೊಡಬಾರದೆಂಬ ಲಕ್ಷ್ಮಣರೇಖೆ ಹೀಗಿದೆ.

- **ಪ್ರಥಮವಾಗಿ ಪರೀಕ್ಷಿತ ನಿರ್ದೇಶಿಸಿದ ನೆಲೆ** – ವಿವಿಧ ರೀತಿಯ ಜೂಜುಗಳು ನಡೆಯುವ ಸ್ಥಳಗಳು, ಜೂಜುಕೇಂದ್ರ, ಇಸ್ಪೀಟು, ಲಾಟರಿ, ಹಣವನ್ನು ಪಣಕ್ಕೊಡ್ಡಿ ಆಡುವ ಎಲ್ಲಾ ನಿಯಮ ಬಾಹಿರ ಜೂಜುಗಳು, ಕುದುರೆ ಜೂಜು ಇತ್ಯಾದಿಯನ್ನು ಕಲಿಯು ತನ್ನ ರಾಜ್ಯಭಾರದ ಸ್ಥಾನವನ್ನಾಗಿ ಬಳಸಿಕೊಳ್ಳಲಿ. ಸಣ್ಣ ಮೊತ್ತವೇ ಆಗಲಿ, ದೊಡ್ಡ ಮೊತ್ತವೇ ಆಗಲಿ ಜೂಜಾಡುವ ಜೂಜುಕೋರರಲ್ಲಿ ಕಲಿಯು ಪ್ರವೇಶಿಸಿ ಅವರನ್ನು ಸರ್ವನಾಶ ಮಾಡುತ್ತಾನೆ. ಜೂಜುಗಳಲ್ಲಿ ಆರಂಭದ ಲಾಭದ ನಶೆಯನ್ನು ಮಾನವನಲ್ಲಿ ಉಂಟು ಮಾಡಿ ಕೊನೆಯಲ್ಲಿ ಪ್ರಪಾತಕ್ಕೆ ತಳ್ಳುವುದು ಕಲಿಯುಗದಲ್ಲ ಕಲಿಯ ರಾಜ್ಯಭಾರವಾಗಲಿ
- **ದ್ವಿತೀಯ ನೆಲೆಯಾಗಿ ಪರೀಕ್ಷಿತನ ನಿರ್ದೇಶನವೆಂದರೆ** – ಸುರಾಪಾನ ನಡೆಯುವ ಸ್ಥಳ, ಇಂದಿನ ದಿನಗಳ ಉಲ್ಲೇಖ ಮಾಡುವುದಾದರೆ, ಹೆಂಡ, ಸಾರಾಯಿ, ರಮ್, ಬಿಯರ್, ಮಾದಕ ಹಾಗೂ ಮತ್ತುಬರಿಸುವ ಪಾನೀಯ ಸ್ಥಳ. ಆಧುನಿಕ ಹೆಸರಾದ ಪಬ್ – ಬಾರ್‌ಗಳು ಕಲಿಯ ಆಟದ ಮೈದಾನವಾಗಲಿ. ಒಮ್ಮೆ ಕುಡಿತದಲ್ಲಿ ತೊಡಗಿಸಿಕೊಂಡ ಮಾನವ ಅದರ ಕಬಂಧ ಬಾಹುವಿನಿಂದ ತಪ್ಪಿಸಿಕೊಳ್ಳಲಾರ. ಈ ಮತ್ತು ತರಿಸುವ ವಸ್ತುಗಳಲ್ಲಿ ಕುಳಿತು ಕಲಿಯು ತನ್ನ ಕಾರ್ಯ ನಿರ್ವಹಿಸಲಿ.
- **ತೃತೀಯವಾಗಿ** – ಅನೀತಿವಂತ ವೇಶ್ಯಯರ ಸಹವಾಸ – ಕುಲಟೆ ಸ್ತ್ರೀಯರು, ಹಣಕ್ಕಾಗಿ ಮೈಮಾರಿಕೊಳ್ಳುವವರು. ಇಂದಿನ ದಿನಗಳನ್ನು ಉದಾಹರಿಸುವುದಾದರೆ, ಏಡ್ಸ್‌ನಂಥ ಮಹಾಮಾರಿಯನ್ನು ಕರುಣಿಸುವ ಕೆಂಪು ದೀಪವಲಯಗಳು, ಪರಸ್ತ್ರೀ ಹಾಗೂ ಪರಪತಿಯರಲ್ಲಿ ಆಸಕ್ತಿ ಹೊಂದುವವರೆಲ್ಲರೂ ಕಲಿಯ ಆಟದ ಚದುರಂಗದ ದಾಳವಾಗಿ ತಮ್ಮ ಅಧಃಪಾತಾಳಕ್ಕೆ ತಲುಪಲಿ.
- **ನಾಲ್ಕನೆಯ ಸ್ಥಾನವಾಗಿ, ಪರೀಕ್ಷಿತ ನಿರ್ದೇಶಿಸಿದ ಸ್ಥಾನವೆಂದರೆ** – ಹಿಂಸೆ, ಹಿಂಸಾ ಪ್ರವೃತ್ತಿಯನ್ನು ಮೈಗೂಡಿಸ್ಕೊಳ್ಳುವುದು, ದುಷ್ಕರ್ಮಿಗಳಾಗುವುದು, ರೌಡಿ, ಸಮಾಜ ಕಂಟಕರಾಗುವುದು, ಧನಕ್ಕಾಗಿ ಕೊಲೆ, ಪೈಶಾಚಿಕ ಹಿಂಸೆ – ಸಮೂಹ ಗಲಭೆ – ರಕ್ತಪಾತ ಇತ್ಯಾದಿಯಲ್ಲಿ ತೊಡಗಿಸಿಕೊಳ್ಳುವವರ ಪ್ರತಿ ನಡೆಯಲ್ಲೂ ಕಲಿಯು ಪ್ರವೇಶಿಸಿ ಅವರೆಲ್ಲರೂ ಅಟ್ಟಹಾಸದಿಂದ ವಿಜೃಂಭಿಸುವಂತೆ ಮಾಡಲಿ. ಅವನ ಕೃಪೆಗೊಳಗಾದ ಮಾನವರೆಲ್ಲರೂ ಹಿಂಸೆಯಲ್ಲಿಯೇ ಸಂತೋಷವನ್ನು ಕಾಣುತ್ತಾರೆ.

ನಾಲ್ಕು ಸೂಕ್ತವಾದ ಸ್ಥಾನವನ್ನು ನಿರ್ದೇಶಿಸಿದರೂ ತೃಪ್ತನಾಗದ ಕಲಿ, ಇನ್ನೊಂದು ಸ್ಥಳವನ್ನು ಕರುಣಿಸಲು ಬೇಡಿಕೊಂಡ. ಆಗ ಪರೀಕ್ಷಿತ ನೀಡಿದ ಸ್ಥಳವೆಂದರೆ – ಬಂಗಾರ. ಬಂಗಾರದಲ್ಲಿ ಲಕ್ಷ್ಮಿ ಸನ್ನಿಹಿತಳಾಗಿದ್ದರೂ ಬಂಗಾರವನ್ನು ಪಡೆಯಲು, ಬಂಗಾರಕ್ಕಾಗಿ ಮಾನವರು ಮನುಷ್ಯತ್ವವನ್ನು ಕಳೆದುಕೊಂಡು ದುರಾಚಾರ – ಭ್ರಷ್ಟಾಚಾರ – ಲಂಚ – ರುಷುವತ್ತು – ವ್ಯಭಿಚಾರ – ಅತ್ಯಾಚಾರದ ದಾಸನಾಗುತ್ತಾನೆ. ಬಂಗಾರಕ್ಕಾಗಿ ಮಾಡಬಾರದ ಕೆಲಸವನ್ನೆಲ್ಲಾ ಮಾಡುತ್ತಾನೆ. ಜೀವನವನ್ನು ತನ್ನದಾಗಿಸಿಕೊಂಡು, ತನ್ನ ದೇಹ ಮನಸ್ಸು, ನಡೆ – ನುಡಿ ಎಲ್ಲವನ್ನು ಕಲಿಗೆ ಒಪ್ಪಿಸಿ ದಾರುಣವಾದ ಜೀವನವನ್ನು ನಿರ್ವಹಿಸುತ್ತಾನೆ.

ಶ್ರೀ ಮದ್ಭಾಗವತ ಗ್ರಂಥದಲ್ಲಿ ಉಲ್ಲೇಖಗೊಂಡ ಕಲಿಯ ಆವಾಸ ಸ್ಥಾನಗಳನ್ನು ನಿರ್ಬಂಧಿಸಿದ ಪರೀಕ್ಷಿತ ಮಹಾರಾಜ ಅವನಿಂದ ಸಂಪೂರ್ಣ ಲೋಕವೇ ಛಿದ್ರ – ಛಿದ್ರವಾಗುವುದನ್ನು ತಪ್ಪಿಸಿದ, ಧರ್ಮ ರಕ್ಷಕನಾದ. ಮುಂದೆ ಶೃಂಗಿ ಶಾಪದಂತೆ ಪರೀಕ್ಷಿತ ಮರಣಿಸಲ್ಪಟ್ಟರೂ ಅವನು ಜಗತ್ತಿಗೆ ನೀಡಿದ ಸೀಮಿತ ಕಲಿಯ ಸ್ಥಾನಗಳಿಂದಾಗಿ ಸಾತ್ವಿಕರು, ದೇವಭಕ್ತರು, ಸಜ್ಜನರು ಕಲಿಯ ಆವೇಶಕೊಳ್ಳಗಾಗುವುದು ತಪ್ಪಿರುವುದು ಉಲ್ಲೇಖನೀಯ. ಸಜ್ಜನರು ಈ ಕಥಾನಕದ ಹಿಂದಿನ ಮಾರ್ಗದರ್ಶನದಂತೆ ನಡೆದು ಉತ್ತಮೋತ್ತಮ ಸದ್ಗೃಹಸ್ಥ ಜೀವನವನ್ನು ತಮ್ಮದಾಗಿಸಿಕೊಳ್ಳಲಿ.

ಪಾಪ - ಪುಣ್ಯ

ಶ್ರೀ ಶೇಷಾದ್ರಿ ಭಟ್, ಶಾರದಾರಾಧಕ, ಶ್ರೀಮಠ, ಹರಿಹರಪುರ

ಶ್ರೀಯುತರು ಋಗ್ವೇದ ಸಂಸ್ಕೃತ ನಾಟಕಾಂತ ಸಾಹಿತ್ಯ, ಧಾರ್ಮಿಕ ಅನುಷ್ಠಾನ ಪರಿಣತರು. ಎಸ್.ಎಸ್.ಎಲ್.ಸಿ ಮುಗಿಸಿದ ಇವರು ಜಯಪುರದ ಆದಿಚುಂಚನಗಿರಿ ಪ್ರೌಢಶಾಲೆಯಲ್ಲಿ ಅಧ್ಯಾಪಕ ವೃತ್ತಿ ನಡೆಸಿ ನಿವೃತ್ತರಾದ ಮೇಲೆ ಶ್ರೀಮಠದಲ್ಲಿ ತಮ್ಮ ತಂದೆಯವರು ನಿರ್ವಹಿಸುತ್ತಿದ್ದ ಶ್ರೀ ಶಾರದಾಂಬಾ ಅರ್ಚನೆಯನ್ನು ಕೈಗೊಂಡಿದ್ದಾರೆ. ಸಂಸ್ಕೃತ – ಕನ್ನಡ ಭಾಷೆಗಳಲ್ಲಿ ಪರಿಣತರು. ವಿಶೇಷ ಸಂಚಿಕೆಗಾಗಿ ಅವರು ಕಳುಹಿಸಿದ ಈ ಲೇಖನಕ್ಕಾಗಿ ಅಭಿನಂದನೆಗಳು. – ಸಂಪಾದಕ

ಜಗನ್ನಾಟಕ ಸೂತ್ರಧಾರಿಯಾದ ಪರಮಾತ್ಮನಿಗೆ ಈ ಜಗತ್ತೇ ನಾಟಕ ರಂಗ. ಜೀವಿಗಳೇ ಪಾತ್ರಧಾರಿಗಳು. ಅವನಿಚ್ಛೆಯಂತೆ ಪಾತ್ರವಹಿಸಿದರೆ ಅವನಿಗೂ ಸಂತೋಷ, ಪಾತ್ರಧಾರಿಗೂ ಒಳಿತು. ಜೀವಿಗಳಲ್ಲಿ ಮನುಷ್ಯ ಜೀವಿಯೇ ಶ್ರೇಷ್ಠನೆಂದು ಮನುಷ್ಯ ತಿಳಿದಿದ್ದಾನೆ. ಆಹಾರ – ನಿದ್ರೆ – ಭಯ ಮುಂತಾದವುಗಳು ಎಲ್ಲಾ ಜೀವಿಗಳಿಗಿದ್ದರೂ ಮನುಷ್ಯನಿಗೆ ಆಲೋಚಿಸುವ, ಯುಕ್ತಾಯುಕ್ತ ವಿಚಾರಗಳನ್ನು ತನ್ನ ಬುದ್ಧಿಶಕ್ತಿಯಿಂದ ವಿವೇಚಿಸಿ ತನ್ನ ಜೀವನವನ್ನು ಸಾರ್ಥಕಗೊಳಿಸುವ ಸದವಕಾಶವನ್ನು ಭಗವಂತ ದಯಪಾಲಿಸಿದ್ದಾನೆ. ಆದುದರಿಂದಲೇ ''ಮಾನವ ಜನ್ಮ ದೊಡ್ಡದು, ಇದನಪಮಾನಗೊಳಿಸಬೇಡಿರೋ'' ಎಂದು ಹರಿದಾಸರು ಹೇಳಿದ್ದಾರೆ. **''ಜಂತೂನಾಂ ನರಜನ್ಮ ದುರ್ಲಭಂ''** ಅಂತಹ ನರಜನ್ಮ ಪಡೆದವರು ಸಾತ್ವಿಕವಾದ, ಸಾರ್ಥಕವಾದ ಬದುಕನ್ನು ಮುಗಿಸಿದಾಗ ಇನ್ನೂ ಶಾಶ್ವತವಾದ ಸ್ಥಾನವನ್ನು ಪಡೆಯಬಹುದು. ಜೀವಿತ ಕಾಲದಲ್ಲಿಎಷ್ಟು ಸಂಪತ್ತನ್ನು ಪಡೆದರೂ ಎಷ್ಟು ವಿಧವಾದ ಸಂಪತ್ತನ್ನು ಗಳಿಸಿದರೂ (ಗೋ, ಭೂ, ಪುತ್ರ, ಹಣ, ಮನೆ...) ಈ ಲೋಕವನ್ನು ಬಿಟ್ಟು ಹೋಗುವಾಗ ಅವನ ಜೊತೆಯಲ್ಲಿ ಬರುವವು ಅವನು ಮಾಡಿದ ಪಾಪ – ಪುಣ್ಯಗಳು ಮಾತ್ರ. ಜೀವನ ನಿರ್ವಹಣೆಗೆ ಹಣ ಬೇಕು ನಿಜ. ಆದರೆ ಅದಕ್ಕೆ ಮಿತಿಯಿರಬೇಕು. ಧರ್ಮಮಾರ್ಗದಿಂದ ಧನ ಸಂಪಾದಿಸಿ ಪರೋಪಕಾರ ಸಮಾಜಸೇವೆ ಮೊದಲಾದವನ್ನು ಮಾಡಿದರೆ ಪುಣ್ಯವೂ ಲಭಿಸುತ್ತದೆ. ಅನ್ಯಾಯದಿಂದ, ಇನ್ನೊಬ್ಬರನ್ನು ಪೀಡಿಸಿ, ದರೋಡೆ ಮಾಡಿ ಗಳಿಸಿದ ಹಣದಿಂದ ಪಾಪ ಹೆಚ್ಚುತ್ತದೆ.

ಮನುಷ್ಯನು ಪಾಪಕಾರ್ಯ ಅಥವಾ ಪುಣ್ಯಕಾರ್ಯ ಮಾಡಲು ಅವನ ಮನಸ್ಸೇ ಕಾರಣ. ಮನಸ್ಸು ಚಂಚಲ. **''ವಿಚಿತ್ರ ರೂಪಾಃ ಖಲು ಚಿತ್ತವೃತ್ತಯಃ''** ಎಂಬುದು ಕವಿಯ ಮಾತು ಒಳ್ಳೆಯದನ್ನು ಗಳಿಸಲು ಬೆಳೆಸಲು ಬಳಸಲು ಬಹಳ ಪ್ರಯತ್ನ, ಸಾಧನೆ, ಏಕಾಗ್ರತೆ ಮುಂತಾದವುಗಳು ಬೇಕು. ಇಂತಹವುಗಳನ್ನು ಪಡೆಯುವುದು ಕಷ್ಟ ಕಳೆದುಕೊಳ್ಳುವುದು ಸುಲಭ. ಅದೇ ಕೆಟ್ಟದ್ದನ್ನು ಕಲಿತರೆ ಮರೆಯುವುದು ಕಷ್ಟ, ಬೆಳೆಸುವುದು ಸುಲಭ. ಏರುವುದು ಕಷ್ಟ, ಜಾರುವುದು ಸುಲಭವಲ್ಲವೆ? ತಾಮಸ ಮಾರ್ಗದಿಂದ ಪಡೆಯುವುದೆಲ್ಲವೂ ತತ್ಕಾಲಕ್ಕೆ ಸುಖ – ಸಂತೋಷವನ್ನುಂಟು ಮಾಡುವಂತೆ ಭಾಸವಾದರೂ ಪರಿಣಾಮದಲ್ಲಿ ದುಃಖವೇ. ಮತ್ತು ಅವನ ಪಾಪದ ಕೊಡ ತುಂಬುತ್ತಾ ಇರುತ್ತದೆ. ಅಂತ್ಯದಲ್ಲಿ ನರಕವಾಸ. ಅಂತಹವರನ್ನು ರಾವಣಾದಿಗಳಿಗೆ, ದುರ್ಯೋಧನಾದಿಗಳಿಗೆ ಹೋಲಿಸಬಹುದು.

ಸಾತ್ವಿಕ ಜೀವನದಿಂದ, ಸದ್ಗುಣಗಳನ್ನಳವಡಿಸಿ, ಸದ್ವಿದ್ಯಾ ಸಂಪಾದನೆಯಿಂದ (ಇದನ್ನು ಸರ್ವಧನ ಪ್ರಧಾನಮ್ ಎಂದು ಹೇಳುತ್ತಾರೆ). ಧನ ಸಂಪಾದನೆ ಮಾಡಿ ಕಾಯೇನ – ವಾಚಾ – ಮನಸಾ (ತ್ರಿಕರಣ ಪೂರ್ವಕ) ಧರ್ಮಕಾರ್ಯಗಳನ್ನು ಮಾಡುತ್ತಾ ಪರೋಪಕಾರ, ಗುರು ಹಿರಿಯರ ಸೇವೆ ಮೊದಲಾದವುಗಳನ್ನು ಮಾಡಿದಲ್ಲಿ ಇಹದಲ್ಲಿ ಸುಖ ಶಾಂತಿಗಳೂ, ಪರದಲ್ಲಿ ಉತ್ತಮ ಲೋಕಗಳೂ ಸಿಗುವುವು. ಇವೆಲ್ಲ ಪುಣ್ಯಫಲಗಳು. ರಾಮಾದಿಗಳಂತೆ, ಪಾಂಡವಾದಿಗಳಂತೆ ಧರ್ಮಮಾರ್ಗದಿಂದ ಕೀರ್ತಿಗಳಿಸಿ ಉತ್ತಮರು ಎನ್ನಿಸಿಕೊಳ್ಳಬೇಕು.

ಮನುಷ್ಯನಿಗೆ ಒಳ್ಳೆಯ ಫಲಬೇಕು, ಆದರೆ ಅದು ಬರುವಂತಹ ಒಳ್ಳೆಯ ಕಾರ್ಯಮಾಡಲು ಮನಸ್ಸಿಲ್ಲ. ಕೆಟ್ಟಫಲ ಬೇಡವೇ ಬೇಡ; ಆದರೆ ಕೆಡುಕಾಗುವಂತಹ ಕೆಲಸವನ್ನು ಮಾತ್ರ ಮಾಡುತ್ತಿರುತ್ತಾನೆ.

ಉತ್ತಮವಾದವು ಖಲನಿಗೆ ಲಭ್ಯವಾದಾಗ ಅವನು ಅದನ್ನು ಉಪಯೋಗಿಸುವ ಕ್ರಮವನ್ನೂ, ಸಜ್ಜನನಿಗೆ ಸಿಕ್ಕಾಗ ಅವನು ಅದನ್ನು ಉಪಯೋಗಿಸುವ ರೀತಿಯನ್ನೂ ಒಂದು ಸುಭಾಷಿತವು ಹೀಗೆ ಹೇಳುತ್ತದೆ.

ವಿದ್ಯಾ ವಿವಾದಾಯ, ಧನಂ ಮದಾಯ, ಶಕ್ತಿಃ ಪರೇಷಾಂ ಪರಪೀಡನಾಯ।
ಖಲಸ್ಯ ಸಾಧೋರ್ವಿಪರೀತಮೇತತ್ ಜ್ಞಾನಾಯ - ದಾನಯ ಚ ರಕ್ಷಣಾಯ ॥

ದುರ್ಜನನು ಕಲಿಯುವ ವಿದ್ಯೆಯನ್ನು ವಿತಂಡವಾದಕ್ಕೆ ಉಪಯೋಗಿಸುತ್ತಾನೆ. ಗಳಿಸಿದ ಧನವನ್ನು ಅಹಂಕಾರದಿಂದ ಮೆರೆಯಲು ವಿನಿಯೋಗಿಸುತ್ತಾನೆ ಮತ್ತು ತನ್ನ ಶಕ್ತಿಯನ್ನು ಪರಪೀಡನೆಗೆ ಉಪಯೋಗಿಸುತ್ತಾನೆ.

ಸಜ್ಜನನಾದರೋ ಜ್ಞಾನವನ್ನು ಹೆಚ್ಚಿಸಿಕೊಳ್ಳಲು (ನ ಹಿ ಜ್ಞಾನೇನ ಸದೃಶಮ್) ಧನವನ್ನು ದಾನ ಮಾಡಲು ಮತ್ತು ತನ್ನ ಶಕ್ತಿಯನ್ನು ತನ್ನ ಮತ್ತು ಇನ್ನೊಬ್ಬರ ರಕ್ಷಣೆಗೋಸ್ಕರ ಬಳಸುತ್ತಾನೆ.

ಸ್ವಾರ್ಥಿಯಾದ ಮನುಜನ ಮನವು ಎಷ್ಟು ವಿಚಿತ್ರವೆಂದರೆ ಅವನಿಗೆ ಒಳಿತಾದಾಗ, ಸಿರಿವಂತನಾದಾಗ ಅದಕ್ಕೆಲ್ಲ ತಾನೇ ಕಾರಣ ಎಂದುಕೊಳ್ಳುತ್ತಾನೆ. ಅದೇ ಆತನಿಗೆ ಕೆಡುಕಾದಾಗ, ಬಡತನ ಬಂದಾಗ ಇದಕ್ಕೆ ಭಗವಂತನೇ ಕಾರಣ ಎನ್ನುತ್ತಾನೆ.

ಅದೇ ಸಜ್ಜನರು ತಮ್ಮ ಒಳಿತಿಗೆ ದೇವರ ದಯೆ ಕಾರಣ, ಕಷ್ಟಕ್ಕೆ ತಾನೇ ಕಾರಣ ಎಂದುಕೊಂಡು ಕಷ್ಟವನ್ನು ಪರಿಹಾರ ಮಾಡಲೆಂದು ದೇವರಲ್ಲಿ ಬೇಡುತ್ತಾರೆ. ಅಷ್ಟೇ ಅಲ್ಲ, ನಮಗೆ ಕಷ್ಟವನ್ನೇ ಕೊಡು ದೇವರೇ, ಅದರಿಂದಲಾದರೂ ಭಗವನ್ನಾಮ ಸ್ಮರಣೆ ಮಾಡುವ ಬುದ್ಧಿ ಬರಲಿ ಎಂದು ಮೊರೆಯಿಡುತ್ತಾರೆ.

''ಆದದ್ದೆಲ್ಲ ಒಳ್ಳೆಯದಕ್ಕೆ'' ಎಂಬ ಭಾವನೆಯನ್ನು ತಂದುಕೊಂಡರೆ ನಮಗೆ ಒಳಿತೇ ಆಗುವುದು. ಭಗವಂತ ನಮಗೆ ಸಂಪತ್ತನ್ನು ಕೊಟ್ಟು ಪರೀಕ್ಷಿಸುತ್ತಾನಂತೆ, ಆಪತ್ತನ್ನು ಕೊಟ್ಟು ಪರೀಕ್ಷಿಸುತ್ತಾನಂತೆ. ಕಷ್ಟ ಬಂದಾಗ ಕುಗ್ಗದೇ ಸಿರಿಬಂದಾಗ ಹಿಗ್ಗದೇ ಎಲ್ಲವನ್ನೂ ದೇವರ ದಯೆಯೆಂದೇ ತಿಳಿದು ಬಾಳಿದರೆ ನೆಮ್ಮದಿಯಿದೆ. ನಿರಂತರ ರಾತ್ರಿಯೇ ಆಗಲೀ, ಸದಾ ಹಗಲೇ ಆಗಲೀ ಇರುವುದಿಲ್ಲವಷ್ಟೆ! **''ಚಕ್ರಾರ ಪಂಕ್ತಿರಿವ ಗಚ್ಛತಿ ಭಾಗ್ಯಪಂಕ್ತಿಃ''** ಎಂಬಂತೆ ಕಷ್ಟ ಸುಖಗಳನ್ನು ಅನುಭವಿಸುವುದೂ ನಮ್ಮ ಪಾಪ ಪುಣ್ಯಗಳ ಫಲವೇ ಆಗಿದೆ, ಅನುಭವಿಸಲೇ ಬೇಕು. ಮನುಷ್ಯ ಜೀವನದಲ್ಲಿ ಪಾಪಕಾರ್ಯ ಮಾಡಿ ಅಧೋಗತಿಗೆ ಹೋಗುವುದಕ್ಕಿಂತ ಸದ್ಗುಣಗಳಿಂದ ಆದರ್ಶವ್ಯಕ್ತಿಗಳಾಗಿ ಜನ್ಮಸಾರ್ಥಕಗೊಳಿಸಿಕೊಳ್ಳೋಣ.

ಸ್ವಯಂಪ್ರಕಾಶ 10 ವರ್ಷ

ನಿರ್ವಾಣ ಷಟ್ಕ (ಶ್ರೀ ಶಂಕರಾಚಾರ್ಯರಿಂದ ರಚಿತವಾದುದು)

ವಿದ್ವಾನ್ ಡಾ॥ ಟಿ.ವಿ. ಸತ್ಯನಾರಾಯಣ, ಎಂ.ಎ. ಪಿ.ಹೆಚ್.ಡಿ.

ಡಾ॥ ಟಿ.ವಿ. ಸತ್ಯನಾರಾಯಣ ಪ್ರಗಲ್ಭ ವಿದ್ವಾಂಸರಲ್ಲಿ ಒಬ್ಬರು. ಇಂದು ವಿಪರೀತ ಗೊಂದಲಗಳಿಗೆ ಕಾರಣವಾಗಿರುವ ಜಾತಿ ಭೇದವೇ ಮುಂತಾದ ಯಾವ ತಾರತಮ್ಯಕ್ಕೂ (ಹಿಂದೂ) ಸನಾತನ ಧರ್ಮದಲ್ಲಿ ಸ್ಥಾನವೇ ಇಲ್ಲ ಎಂದು ಶ್ರೀ ಆಚಾರ್ಯ ಶಂಕರರು ಪ್ರತಿಪಾದಿಸಿದ ಕಟು ಸತ್ಯವನ್ನು ಈ ಲೇಖನದ ಮೂಲಕ ಪ್ರಸ್ತುತಪಡಿಸಿರುವ ಈ ವಿದ್ವಾಂಸರು ವಂದನಾರ್ಹರು.

– ಸಂಪಾದಕ

ದೇವರು ಎಲ್ಲ ಕಡೆಯೂ ಇದ್ದಾನೆ, ಎಲ್ಲದರಲ್ಲಿಯೂ ಇದ್ದಾನೆ, ಎಲ್ಲವೂ ಅವನೇ ಆಗಿದ್ದಾನೆ, ಅವನಿಗೆ ನಾಶವಿಲ್ಲ, ಅವನಿಗೆ ಆಕಾರಗಳಿಲ್ಲ, ಹಾಗಾಗಿ ಇಡೀ ಚರಾಚರಾತ್ಮಕವಾದ ಬ್ರಹ್ಮಾಂಡವೆಲ್ಲವೂ ಒಂದೇ. ಅದರೊಳಗೆ ಅಡಗಿರುವ ಸಕಲ ಜೀವರಾಶಿಗಳೆಲ್ಲವೂ ಒಂದೇ. ಅದೇ ಪರಮಾತ್ಮ ಎಂಬ ಅದ್ವೈತ ತತ್ತ್ವವನ್ನು ಲೋಕಕ್ಕೆ ತಿಳಿಸಿಕೊಟ್ಟವರು ಜಗದ್ಗುರು ಶ್ರೀ ಆದಿ ಶಂಕರಾಚಾರ್ಯರು. ಶಾಸ್ತ್ರಗ್ರಂಥಗಳಲ್ಲಿ ತಿಳಿಸಿರುವ ಕಠಿಣವಾದ ಅದ್ವೈತ ವೇದಾಂತದ ವಿಚಾರಗಳನ್ನು ಕಾವ್ಯಗ್ರಂಥಗಳ ಮೂಲಕವಾಗಿ ಜನರಿಗೆ ಸುಲಭವಾಗಿ ಅರ್ಥವಾಗುವಂತೆ ಲಲಿತವಾದ ಶೈಲಿಯಲ್ಲಿ ಪ್ರಕರಣ ಗ್ರಂಥಗಳ ಮೂಲಕವಾಗಿ ರಚಿಸಿ ವಿವರಿಸಿದ್ದಾರೆ.

ಅದ್ವೈತ ವೇದಾಂತದ ವಿಚಾರಗಳನ್ನು ಸಾಮಾನ್ಯ ಜನರಿಗೂ ಅರ್ಥವಾಗುವಂತೆ ತಿಳಿಸಲು ಶ್ಲೋಕ ರೂಪದಲ್ಲಿ, ಪದ್ಯರೂಪದಲ್ಲಿ ರಚಿಸಿರುವ ಸಣ್ಣ ಸಣ್ಣ ಗ್ರಂಥಗಳೇ ಪ್ರಕರಣ ಗ್ರಂಥಗಳು. ಈ ಗ್ರಂಥಗಳಲ್ಲಿ ಐದೋ, ಆರೋ, ಎಂಟೋ, ಹತ್ತೋ, ಇಪ್ಪತ್ತೋ, ಮೂವತ್ತೋ, ನಲವತ್ತೋ, ಐವತ್ತೋ ಅಥವಾ ಇದಕ್ಕಿಂತ ಹೆಚ್ಚಾದ ಶ್ಲೋಕಗಳೋ, ಪದ್ಯಗಳೋ ಇರುತ್ತವೆ. ಕೆಲವೆಡೆ ನೂರಕ್ಕಿಂತಲೂ ಹೆಚ್ಚು ಶ್ಲೋಕಗಳೂ ಇವೆ. ಇಂತಹ ಸಣ್ಣ ಸಣ್ಣ ಗ್ರಂಥಗಳಲ್ಲಿ ಕಬ್ಬಿಣದ ಕಡಲೆಯಂತಹ ಗಂಭೀರವಾದ ವೇದಾಂತ ವಿಷಯಗಳನ್ನು ತಿಳಿಸಿಕೊಡುವ ಕೆಲಸವನ್ನು ಮಾಡಿರುವ ಶ್ರೀ ಶಂಕರಾಚಾರ್ಯರು ಸದಾ ನೆನಪಿನಲ್ಲಿ ಉಳಿಯುತ್ತಾರೆ.

'ನಿರ್ವಾಣ ಷಟ್ಕ'ವು ಶ್ರೀ ಶಂಕರಾಚಾರ್ಯರು ರಚಿಸಿರುವ ಪುಟ್ಟ ಆರು ಶ್ಲೋಕಗಳುಳ್ಳ ಪ್ರಕರಣ ಗ್ರಂಥ. ನಮ್ಮ ಕಣ್ಣಿಗೆ ಕಾಣುವ ಈ ಚರಾಚರಾತ್ಮಕ ಪ್ರಪಂಚಗಳೆಲ್ಲವೂ ಆ ಪರಮಾತ್ಮನೆ. ಪಂಚಭೂತಗಳು, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ರೂಪಾದಿ ವಿಷಯಗಳು, ನಾವು ನೋಡುವ ಜೀವರಾಶಿಗಳು, ನಾವು ತಿಳಿಯುವ ವಿಷಯಗಳು, ನಮಗೆ ಗೋಚರವಾಗದೆ ಇರುವ ಯಾವ ಯಾವ ಅಂಶಗಳಿವೆಯೋ ಅವೆಲ್ಲವೂ ನಾವು ತಿಳಿದುಕೊಳ್ಳುವ ರೀತಿಯಲ್ಲಿ ಬೇರೆ ಬೇರೆಯಲ್ಲ, ಅವೆಲ್ಲವೂ ಒಂದೇ, ಅದೇ ಪರಬ್ರಹ್ಮ– ಹಾಗಾಗಿ ಎಲ್ಲವೂ ಒಂದೇ ಎಂಬ ನಿತ್ಯಸತ್ಯವನ್ನು ಇದರಲ್ಲಿ ಆಚಾರ್ಯರು ತಿಳಿಸಿದ್ದಾರೆ.

ಮನೋ ಬುದ್ಧ್ಯಹಂಕಾರ ಚಿತ್ತಾನಿ ನಾಹಂ ನ ಕರ್ಣಂ ನ ಜಿಹ್ವಾನ ಚ ಘ್ರಾಣನೇತ್ರೇ ।
ನ ಚ ವ್ಯೋಮ ಭೂರ್ನ ತೇ ಜೋ ನ ವಾಯುಶ್ಚಿದಾನಂದರೂಪಃ ಶಿವೋಽಹಂ ಶಿವೋಽಹಮ್ ॥ 1 ॥

ಮನಸ್ಸು, ಬುದ್ಧಿ, ಅಹಂಕಾರ, ಚಿತ್ತವು ನಾನಲ್ಲ, ಕಿವಿ, ನಾಲಿಗೆ, ಮೂಗು, ಕಣ್ಣುಗಳು ನಾನಲ್ಲ, ಆಕಾಶ, ಭೂಮಿ, ತೇಜಸ್ಸು ಗಾಳಿಗಳು ನಾನಲ್ಲ, ನಾನು ನನ್ನ ಜ್ಞಾನಾನಂದ ಸ್ವರೂಪದ ಮಂಗಳ ಸ್ವರೂಪನಾಗಿದ್ದೇನೆ. ನಾನು ಶಿವನು, ಮಂಗಳರೂಪನು. ಇಂದ್ರಿಯಗಳಿಗೆ, ಆಕಾಶಾದಿ ಭೂತಗಳಲ್ಲಿ ತಿಳಿಯುವ ವಿಷಯಗಳು ನಾವಂದುಕೊಂಡಂತೆ ಆ ರೂಪದಲ್ಲಿಲ್ಲ, ಅವೆಲ್ಲವೂ ಆಕಾರವಿಲ್ಲದ, ಜ್ಞಾನಕ್ಕೆ ತಿಳಿಯುವ ವಿಷಯಗಳು. ನಾವು ಇವೆಲ್ಲವನ್ನೂ ತಿಳಿದಾಗ ಆನಂದವಾಗುತ್ತದೆ. ನಮಗೆ

ಮಂಗಳವಾಗುತ್ತದೆ. ಆದ್ದರಿಂದ, ಇವೆಲ್ಲವೂ ಚಿದಾನಂದ ಸ್ವರೂಪವೇ ಆಗಿವೆ, ಶಿವರೂಪವೇ ಆಗಿವೆ, ಇವು ಬೇರೆಯೇ ಅಲ್ಲ.

ನ ಚ ಪ್ರಾಣಸಂಜ್ಞೋ ನ ವೈ ಪಂಚವಾಯು ರ್ನ ವಾ ಸಪ್ತಧಾತು ರ್ನ ವಾ ಪಂಚಕೋಶಃ।
ನ ವಾ ಕ್ಪಾಣಿ ಪಾದೌ ನ ಚೋಪಸ್ಥಪಾಯೂ ಚಿದಾನಂದ ರೂಪಃ ಶಿವೋಹಂ ಶಿವೋಹಮ್ ॥ 2 ॥

ಪಂಚಪ್ರಾಣಗಳು, ಪಂಚವಾಯುಗಳು, ಏಳು ಧಾತುಗಳು, ಐದು ಕೋಶಗಳು, ಬಾಯಿ, ಕೈ, ಕಾಲು, ವಿಸರ್ಜನೇಂದ್ರಿಯ, ಜನನೇಂದ್ರಿಯಗಳು ಯಾವುದೂ ನಾನಲ್ಲ, ನಾನು ಚಿದಾನಂದರೂಪನು, ನಾನು ಶಿವಸ್ವರೂಪನು. ನಮ್ಮ ಶರೀರದ ರಚನಾಂಶಗಳು, ಶರೀರದೊಳಗಿರುವ ವಿಷಯಗಳನ್ನು ಗ್ರಹಿಸುವ ಇಂದ್ರಿಯಗಳು, ಯಾವುವೂ ಸ್ವತಂತ್ರವಾಗಿ ಎಲ್ಲವನ್ನು ತಿಳಿಯುವ ಶಕ್ತಿ ಹೊಂದಿಲ್ಲ. ಆ ಪರಬ್ರಹ್ಮನ ಮೂಲಕವಾಗಿ ಎಲ್ಲವನ್ನೂ ತಿಳಿಯುವುದರಿಂದ, ಇವೆಲ್ಲವೂ ಆ ಆತ್ಮವೇ ಆಗಿವೆ.

ನ ಮೇ ದ್ವೇಷರಾಗೌ ನ ಮೇ ಲೋಭಮೋಹೌ ಮದೋನೈವ ಮೇ ನೈವ ಮಾತ್ಸರ್ಯಭಾವಃ।
ನ ಧರ್ಮೋ ನ ಚಾರ್ಥೋ ನ ಕಾಮೋ ನ ಮೋಕ್ಷಃ ಚಿದಾನಂದರೂಪಃ ಶಿವೋಹಂ ಶಿವೋಹಮ್ ॥ 3 ॥

ನನಗೆ ದ್ವೇಷ – ರಾಗ, ಲೋಭ – ಮೋಹ, ಮದ, ಮಾತ್ಸರ್ಯ, ಧರ್ಮ – ಅರ್ಥ – ಕಾಮ – ಮೋಕ್ಷ ಯಾವುವೂ ಇಲ್ಲ, ನಾನು ಚಿದಾನಂದ ಸ್ವರೂಪನು, ನಾನು ಶಿವರೂಪನು. ಅಂದರೆ ನಾವು ತಾಳುವ ದ್ವೇಷಾದಿ ಭಾವಗಳು ಹುಟ್ಟಿನಿಂದ ಬಂದವುಗಳಲ್ಲ. ಇವು ಸ್ಥಿರವಾಗಿ ಇರುವುದೂ ಇಲ್ಲ, ಹಾಗಾಗಿ ನಮ್ಮ ಬುದ್ಧಿಯಲ್ಲಿ ಇವು ಬರುತ್ತವೆ, ಹೋಗುತ್ತವೆ, ಬುದ್ಧಿ ನಿರ್ಮಲವಾದುದು. ಆದ್ದರಿಂದ ಇವೆಲ್ಲವೂ ಸ್ಥಿರವಲ್ಲ. ನಿತ್ಯವಾದುದು ಚಿದಾನಂದ ರೂಪದ, ಶಿವರೂಪದ ದೇವನೊಬ್ಬನೇ.

ನ ಪುಣ್ಯಂ ನ ಪಾಪಂ ನ ಸೌಖ್ಯಂ ನ ದುಃಖಂ ನ ಮಂತ್ರೋ ನ ತೀರ್ಥಂ ನ ವೇದಾ ನ ಯಜ್ಞಾಃ।
ಅಹಂ ಭೋಜನಂ ನೈವ ಭೋಜ್ಯಂ ನ ಭೋಕ್ತಾ ಚಿದಾನಂದ ರೂಪಃ ಶಿವೋಹಂ ಶಿವೋಹಮ್ ॥ 4 ॥

ಪುಣ್ಯ – ಪಾಪ, ಸುಖ – ದುಃಖಗಳು ನಾನಲ್ಲ, ಮಂತ್ರ, ತೀರ್ಥ, ವೇದಗಳು, ಯಜ್ಞಗಳು ನಾನಲ್ಲ, ತಿನ್ನುವ ಕ್ರಿಯೆ ನಾನಲ್ಲ, ತಿನ್ನಬೇಕಾದ ವಸ್ತುವೂ ನಾನಲ್ಲ, ತಿನ್ನುವವನೂ ನಾನಲ್ಲ, ನಾನು ಚಿದಾನಂದ ರೂಪನಾದ ಶಿವನಾಗಿದ್ದೇನೆ. ನಾವು ಮಾಡುವ ಪಾಪ – ಪುಣ್ಯಗಳನ್ನು ನಮ್ಮ ಕರ್ಮಾನುಸಾರ ಮಾಡುತ್ತೇವೆ. ಮಂತ್ರಗಳ ಪಠಣ, ತೀರ್ಥಕ್ಷೇತ್ರ ಸಂಚಾರ ವೇದಾಧ್ಯಯನ, ಯಜ್ಞಯಾಗಾದಿಗಳನ್ನು ಮಾಡುವಿಕೆ ಇವೆಲ್ಲವನ್ನು ನಮ್ಮ ಬುದ್ಧಿ – ಕರ್ಮಗಳಿಗನುಸಾರ ಮಾಡುತ್ತೇವೆ. ನಾವು ತಿನ್ನುವ ಪದಾರ್ಥಗಳು, ನಾವು ಪಡೆಯುವ ರುಚಿ ಯಾವುವೂ ನಮ್ಮ ಅಧೀನಗಳಲ್ಲ, ಅವೆಲ್ಲವೂ ಸಚ್ಚಿದಾನಂದ ಶಿವಸ್ವರೂಪದ ಭಗವಂತನ ಮೂಲಕವೇ ತಿಳಿಯುತ್ತವೆ. ಹಾಗಾಗಿ ಪುಣ್ಯ – ಪಾಪಾದಿಗಳೆಲ್ಲವೂ ಆ ಆತ್ಮನೇ ಆಗಿದ್ದಾನೆ.

ನ ಮೃತ್ಯುಃ ರ್ನ ಶಂಕಾ ನ ಮೇ ಜಾತಿಭೇದಃ ಪಿತಾನೈವ ಮೇ ನೈವ ಮಾತಾ ಚ ಜನ್ಮ।
ನ ಬಂಧುರ್ನ ಮಿತ್ರಂ ಗುರುರ್ನೈವ ಶಿಷ್ಯಃ ಚಿದಾನಂದರೂಪಃ ಶಿವೋಹಂ ಶಿವೋಹಮ್ ॥ 5 ॥

ನನಗಾಗುವ ಸಾವು, ಸಂಶಯಗಳೂ ನನ್ನದಲ್ಲ, ನನಗೆ ಜಾತಿ ಭೇದಗಳಿಲ್ಲ, ತಂದೆ – ತಾಯಿ ಯಾರೂ ನನಗಿಲ್ಲ, ನನಗೆ ಹುಟ್ಟೇ ಇಲ್ಲ, ಹುಟ್ಟೇ ಇಲ್ಲ ಅಂದ ಮೇಲೆ ನನಗೆ ಬಂಧುಗಳು, ಗೆಳೆಯರು, ಗುರುಗಳು, ಶಿಷ್ಯರೂ ಯಾರೂ ಇಲ್ಲ, ನಾನು ಎಲ್ಲವನ್ನೂ ಮೀರಿ ನಿಂತಿರುವ ಚಿದಾನಂದ ಶಿವಸ್ವರೂಪನಾಗಿದ್ದೇನೆ. ಸಾವು, ಸಂದೇಹ, ಜಾತಿ ಭೇದಗಳು ಇಂದು ಸಹಜವಾದ ಯೋಚನೆಗಳು. ತಂದೆ – ತಾಯಿ, ಬಂಧು – ಗೆಳೆಯ, ಗುರು – ಶಿಷ್ಯ ಸಂಬಂಧಗಳು ಅನಿವಾರ್ಯವೆಂದು ಭಾವಿಸಿದ್ದೇವೆ. ಆದರೆ ಇವೆಲ್ಲವೂ ಉಳಿಯುವುದಿಲ್ಲ ಎಂದು ತಿಳಿದಾಗ, ಇವೆಲ್ಲವೂ ಇಲ್ಲವಾಗಿ, ನಮ್ಮ ಬುದ್ಧಿಯಲ್ಲಿ ಸ್ಥಿರವಾದ ಸಂತಸ ಭಾವವೊಂದೇ ಉಳಿಯುತ್ತದೆ. ಇದರಿಂದ ಯಾರಿಗೂ ಕಲಹವಿಲ್ಲ, ದ್ವೇಷಗಳಿಲ್ಲ, ಇದರಿಂದ ನಮಗೆ ಮಂಗಳವೇ ಆಗುತ್ತದೆ.

ಅಹಂ ನಿರ್ವಿಕಲ್ಪೋ ನಿರಾಕಾರರೂಪೋ ವಿಭುತ್ವಾಚ್ಚ ಸರ್ವತ್ರ ಸರ್ವೇಂದ್ರಿಯಾಣಾಮ್ ।
ನ ಚಾ ಸಂಗತಂ ನೈವ ಮುಕ್ತಿರ್ನಬಂಧಃ ಚಿದಾನಂದರೂಪಃ ಶಿವೋಹಂ ಶಿವೋಹಮ್ ॥ 6 ॥

ನನಗೆ ಹೆಸರುಗಳು, ಆಕಾರಗಳು ಯಾವುವೂ ಇಲ್ಲ, ಹಾಗಾಗಿ ನಾನು ನಿರ್ವಿಕಲ್ಪ ಸ್ವರೂಪನಾಗಿದ್ದೇನೆ. ನಾನು ಎಲ್ಲ ಕಡೆಯೂ ವ್ಯಾಪಿಸಿಕೊಂಡಿರುವುದರಿಂದ ವಿಭು ಎನಿಸಿದ್ದೇನೆ. ನಾನು ಎಲ್ಲ ಕಡೆಯೂ ಎಲ್ಲವೂ ಆಗಿ ಇರುವುದರಿಂದ ಎಲ್ಲ ಇಂದ್ರಿಯಗಳಿಗೂ ನಾನು ದೊರಕುತ್ತೇನೆ. ಹೀಗಾಗಿ ಯಾರಿಗೂ ನಾನು ಸಿಗುವುದಿಲ್ಲ, ಎಂದು ಹೇಳಲು ಆಗುವುದೇ ಇಲ್ಲ. ನಾನು ಒಬ್ಬನೇ ಆಗಿರುವುದರಿಂದ ಯಾರೊಡನೆಯೂ ಸೇರಿಕೊಂಡಿಲ್ಲ. ಸೇರಿಕೊಂಡಿಲ್ಲ ಎಂದ ಮೇಲೆ ಮುಕ್ತಿಯೂ ಇಲ್ಲ. ನಾನು ಕೇವಲ ತಿಳುವಳಿಕೆಗೆ ದೊರಕುವ ಜ್ಞಾನರೂಪನು. ಇದನ್ನು ತಿಳಿದರೆ ಅದು ಆನಂದವನ್ನುಂಟು ಮಾಡುತ್ತದೆ. ಆನಂದವು ದೊರಕಿದ ಮೇಲೆ ಅದರಿಂದ ಮಂಗಳವು ತಾನೆ. ಅಲ್ಲಿಗೆ ಭಗವಂತನು ಸರ್ವತ್ರ ಇರುವುದರಿಂದ ಸತ್ ಎನಿಸಿದ್ದಾನೆ. ನಮ್ಮ ಬುದ್ಧಿಗೆ ಗೋಚರವಾಗುವುದರಿಂದ ಚಿತ್ ಎಂದೂ ಕರೆಸಿಕೊಳ್ಳುತ್ತಾನೆ. ಇರುವ ಎಲ್ಲವನ್ನೂ ನಮ್ಮ ಬುದ್ಧಿಯಿಂದ ತಿಳಿದುಕೊಂಡಾಗ ನಮಗೆ ಆನಂದವಾಗುತ್ತದೆ. ಹಾಗಾಗಿ ಪರಬ್ರಹ್ಮನು ಸಚ್ಚಿದಾನಂದ ರೂಪನಾಗಿದ್ದಾನೆ. ಇಂತಹ ಸಚ್ಚಿದಾನಂದ ಸ್ವರೂಪನಾದ ಭಗವಂತ ಸ್ವರೂಪವು ನಮಗೆ ತಿಳಿದಾಗ ನಮ್ಮ ಜೀವನದ ಅಭಿವೃದ್ಧಿ ಸಲೀಸಾಗಿ ಆಗುತ್ತದೆ. ಇದರಿಂದ ಜೀವನದಲ್ಲಿ ನಮಗೆ ಮಂಗಳ ತಾನೇ, ಹಾಗಾಗಿ ಆ ದೇವನು ಶಿವ ಸ್ವರೂಪನೆನಿಸಿದ್ದಾನೆ. ಹೀಗೆ, ನಮ್ಮ ಶರೀರ, ಶರೀರದೊಳಗಿರುವ ಇಂದ್ರಿಯಗಳು, ಇವುಗಳಿಂದ ತಿಳಿಯುವ ವಿಷಯಗಳು ಲೋಕದಲ್ಲಿ ನಾವು ಮಾಡುವ ಎಲ್ಲ ಕೆಲಸ ಕಾರ್ಯಗಳು ಎಲ್ಲ ಜನರೊಡನೆ ನಾವು ಸೇರಿ ಮಾಡುವ ವ್ಯವಹಾರಗಳು, ನಾವು ಪಡೆಯುವ ಫಲಾಫಲಗಳು, ನಾವು ಅನುಭವಿಸುವ ಸುಖ- ದುಃಖಗಳೂ ಎಲ್ಲವೂ ನಮ್ಮ ಶರೀರದೊಳಗಿರುವ ಅನಿರ್ವಚನೀಯವಾದ ಶಕ್ತಿಯಿಂದ ನಡೆಯುತ್ತಿವೆ. ಆ ಶಕ್ತಿಯು ಒಳಗೂ - ಹೊರಗೂ ಎಲ್ಲ ಕಡೆಯೂ ನೆಲೆಸಿದೆ. ಅದು ನಮ್ಮ ಶರೀರದೊಳಗಿದ್ದಾಗ, ನಮ್ಮ ಎಲ್ಲ ವಿಚಾರಗಳೂ ನಮ್ಮ ಅನುಭವಕ್ಕೆ ಬರುತ್ತವೆ. ನಮ್ಮ ಶರೀರದಿಂದ ಹೊರಗೆ ಹೋದಾಗ, ನಮಗೆ ಯಾವ ಅನುಭವವೂ ಆಗುವುದಿಲ್ಲ. ಇದರಿಂದಲೇ ತಿಳಿಯುತ್ತದೆ. ನಾನು ಎಂಬ ಅಭಿಮಾನ ಹೊಂದಿದ ಈ ಶರೀರವು ನಿತ್ಯವಲ್ಲ, ಇದು ಅಶಾಶ್ವತ. ನಿತ್ಯವಾದುದು ಆ ಪರಬ್ರಹ್ಮವಸ್ತುವೊಂದೇ. ಅವನು ಜ್ಞಾನರೂಪನಾಗಿದ್ದು ಮಂಗಳರೂಪನಾಗಿದ್ದಾನೆ. ಈ ಸತ್ಯವನ್ನು ನಾವು ಅರಿತು ಆನಂದ ಹೊಂದಬೇಕು ಎಂಬ ಪರಮಸತ್ಯವನ್ನು ಶ್ರೀ ಶಂಕರಾಚಾರ್ಯರು ಈ ನಿರ್ವಾಣ ಷಟ್ಕದಲ್ಲಿ ತಿಳಿಸಿದ್ದಾರೆ.

ಸ್ವಯಂಪ್ರಕಾಶ
ಪ್ರಕಟಣೆಯ 10 ವರ್ಷ

ದಾರಿ ಹಲವು ಗುರಿಯೊಂದೇ

ಶ್ರೀ ಕ.ವಿ. ಸುರೇಶ್, ಶಿವಮೊಗ್ಗ

ಸುವಿಖ್ಯಾತ ಕೆಳದಿ ವೆಂಕಣ್ಣ ಕವಿ ವಂಶಜರಾಗಿ ತಮ್ಮ ಕಾವ್ಯ – ಸಾಹಿತ್ಯಾತ್ಮಕ ಚಟುವಟಿಕೆಗಳಿಂದ ತಮ್ಮ ಕುಲ ಗೌರವವನ್ನು ಹೆಚ್ಚಿಸುತ್ತ ಕನ್ನಡ ನುಡಿ ತಾಯಿಯ ಸೇವೆ ಸಲ್ಲಿಸುತ್ತಿರುವ ಶ್ರೀ ಕ . ವಿ. ಸುರೇಶ್‌ರವರ ಈ ವಿಚಾರಪೂರ್ಣ ಬರಹಕ್ಕಾಗಿ ಅವರಿಗೆ ಹಾರ್ದಿಕ ಅಭಿನಂದನೆಗಳು. – ಸಂಪಾದಕ

ಎಚ್ಚರ - ನಿದ್ದೆ - ಕನಸು, ಇವು ಪ್ರತಿನಿತ್ಯ ಮಾನವ ಅನುಭವಿಸುವ ಮೂರು ಅವಸ್ಥೆಗಳು. ನಿದ್ರಾವಸ್ಥೆ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ. ಅದೊಂದು ಅರೆಸಾವಿನ ಸ್ಥಿತಿ! ಇಂದ್ರಿಯಾದಿಗಳೆಲ್ಲವೂ ನಿಶ್ಚೇಷ್ಟವಾಗಿ, ನಿಷ್ಕ್ರಿಯವಾಗಿ ಹಾಗೂ ಪ್ರತಿಕ್ರಿಯಾಶೂನ್ಯವಾಗಿರುವ ಸ್ಥಿತಿ. ಇನ್ನು ಕನಸುಗಳ ಲೋಕವೇ ಬೇರೆ. ಅವುಗಳ ರೂಪಗಳೂ ಮತ್ತು ಲಕ್ಷಣಗಳೂ ಚಿತ್ರ – ವಿಚಿತ್ರವಾದವುಗಳು. ಅವು ಮನಸ್ಸನ್ನು ಮುದಗೊಳಿಸಲೂಬಹುದು, ಭಯಗೊಳಿಸಲೂಬಹುದು. ಮುಂದೊದಗಬಹುದಾದ ಘಟನೆಗಳ ಬಗ್ಗೆ ಮುನ್ಸೂಚನೆಯನ್ನೂ ಅನೇಕ ಬಾರಿ ನೀಡಬಲ್ಲವು. ಕನಸಿನಲ್ಲಿ ಬೆಟ್ಟದಿಂದ ನಾವು ಬೀಳಬಹುದು, ಆನೆ ಅಟ್ಟಿಸಿಕೊಂಡು ಬಂದು ತುಳಿಯಬಹುದು. ಆದರೆ ಈ ಭೌತಿಕ ಶರೀರಕ್ಕೆ ಮಾತ್ರಾ ಏನೂ ಘಾಸಿಯಾಗದು ! ಕನಸಿನ ಸಾಮ್ರಾಜ್ಯವೇ ಹಾಗೆ. ಹಾಗಾಗಿ ಅದರ ಬಗ್ಗೆ ಹೆಚ್ಚಿನ ವಿಶ್ಲೇಷಣೆ ಇಲ್ಲಿ ಅಪ್ರಸ್ತುತ.

ನಿದ್ದೆ – ಕನಸಿನ ನಂತರ ಬಹು ಮಹತ್ತರವಾದ ಅವಸ್ಥೆ ಎಚ್ಚರ. ಎಚ್ಚರದಲ್ಲಿ ಮನುಷ್ಯನ ಇಂದ್ರಿಯಾದಿಗಳು ಮತ್ತು ಬುದ್ಧಿ – ಮನಸ್ಸು ಕೂಡಾ ಸಂಪೂರ್ಣ ಜಾಗೃದಾವಸ್ಥೆಯಲ್ಲಿರುತ್ತವೆ. ಮಾತಿಗೆ ತಕ್ಕ ಮಾತು, ನಗುವಿಗೆ ಪ್ರತಿ ನಗು, ಮುಳ್ಳು ಚುಚ್ಚಿದಾಗ ನೋವಿನ ಅನುಭವ, ದುಃಖದ ವಿಚಾರ ಬಂದಾಗ ಅಳು – ನೋವು, ಸುಖ ಬಂದಾಗ ಪ್ರಸನ್ನತೆ, ಆಹ್ಲಾದ – ಹೀಗೆ ನಾನಾ ಪ್ರಕ್ರಿಯೆಗಳನ್ನು ಎಚ್ಚರದ ಸ್ಥಿತಿಯಲ್ಲಿ ಉಚ್ಛ್ರಾಯ ಮಟ್ಟದಲ್ಲಿ ಗಮನಿಸಬಹುದು.

ಎಚ್ಚರದ ಅವಸ್ಥೆಯಲ್ಲಿ ನಾವು ಏನು ಮಾಡುತ್ತೇವೆಯೋ (ಅದು ಕೆಟ್ಟದ್ದೂ ಇರಬಹುದು), ಏನು ಮಾತನಾಡುತ್ತೇವೆಯೋ (ಅದು ಸುಳ್ಳೂ ಇರಬಹುದು) ಮತ್ತು ಏನು ಯೋಚಿಸುತ್ತೇವೆಯೋ (ಅದು ದುರ್ಯೋಚನೆಯೂ ಇರಬಹುದು) ಅದೇ ಆಗಿನ ಸತ್ಯ. ಅಂದು ಅನುಭವಿಸುವ ಸುಖ – ದುಃಖ, ನೋವು – ನಲಿವುಗಳೇ ಆಗಿನ ಸತ್ಯ. ಆದರೆ ನಾವು ಏನು ಮಾಡುತ್ತೇವೆ, ಏನು ಮಾತನಾಡುತ್ತೇವೆ ಮತ್ತು ಏನು ಯೋಚಿಸುತ್ತೇವೆ ಎಂಬುದು ನಮ್ಮ ನಮ್ಮ ವ್ಯಕ್ತಿಗತವಾದಂತಹ ಸಂಸ್ಕಾರ, ಪರಿಸರ, ಜ್ಞಾನ ಮುಂತಾದ ಅಪರಿಮಿತ ವಿಷಯಗಳನ್ನು ಅವಲಂಬಿಸಿದೆ ಎಂದರೆ ತಪ್ಪಾಗದು.

''ಲೋಕೋ ಭಿನ್ನ ರುಚಿಃ'' ಎನ್ನುವುದು ಬಹಳ ಹಳೆಯ ಮಾತು. ಒಂದು ಮದುವೆಯ ಆರತಕ್ಷತೆಯ ಭೋಜನಕ್ಕೆ ಹೋಗಿದ್ದೇವೆ. ಖಾಲಿದೋಸೆಯಿಂದ ಹಿಡಿದು ಫಿಜ್ಜಾದವರೆಗೆ ಅನೇಕಾನೇಕ ಖಾದ್ಯಗಳನ್ನು ಸಾಲಾಗಿ ಇಟ್ಟು ಬಡಿಸುತ್ತಿದ್ದಾರೆ. ಆದರೆ ನೋಡಿ, ಎಲ್ಲರು ಎಲ್ಲವನ್ನು ತಿನ್ನಿವುದಿಲ್ಲ, ತಿನ್ನಲಾಗುವುದಿಲ್ಲ, ಒಬ್ಬೊಬ್ಬರು ತಮಗಿಷ್ಟವಾದ ಖಾದ್ಯಗಳನ್ನೇ ಮನಃಪೂರ್ತಿ ತಿನ್ನುತ್ತಾರೆ. ಏಕೆಂದರೆ ಆಸೆ ಇದ್ದರೂ ಹೊಟ್ಟೆಗಾತ್ರ ಸೀಮಿತ. ಅದೇ ರೀತಿ ಮಾನವನ ಮೆದುಳೂ ಸಹ. ಅದರ ಗ್ರಹಣ ಶಕ್ತಿ ಮಾತ್ರಾ ಸೀಮಿತವಾದದ್ದು. ಉಪಯುಕ್ತ / ಅನುಪಯುಕ್ತ ವಿಷಯಗಳನ್ನು ಜರಡಿ ಹಿಡಿಯುವ ಸಾಮರ್ಥ್ಯ ಕೂಡಾ ವ್ಯಕ್ತಿ ವ್ಯಕ್ತಿಗೆ ಭಿನ್ನ. ನದಿಯ ತುಂಬಾ ನೀರು ಹರಿಯುತ್ತಿದ್ದರೂ ನಾವು ಕುಡಿಯಲಾಗುವುದು (ಕುಡಿಯುವುದು) ಮೂರ್ನಾಲ್ಕು ಬೊಗಸೆಯಷ್ಟು ಮಾತ್ರ. ಆದರಲ್ಲೇ ನಾವು ಸಂತೃಪ್ತಿ ಹೊಂದುತ್ತೇವೆ. ವಿಷಯ / ವಸ್ತು ಒಂದೇ ಇದ್ದರೂ ಅದನ್ನು ಬೇರೆ ಬೇರೆ ವ್ಯಕ್ತಿಗಳು ತಮ್ಮದೇ ದೃಷ್ಟಿಕೋನದಲ್ಲಿ ಅರ್ಥೈಸಿಕೊಳ್ಳುತ್ತಾರೆ, ನೋಡುತ್ತಾರೆ. ಹೀಗಾಗಿಯೇ ನಾವು ಪ್ರಪಂಚದಲ್ಲಿ ನಾನಾ ರೀತಿಯ ಆಚಾರ –

ವಿಚಾರಗಳನ್ನು ಹೊಂದಿರುವ, ನಾನಾ ನಂಬಿಕೆಗಳನ್ನಿಟ್ಟುಕೊಂಡಿರುವ ಮತ್ತು ನಾನಾ ಸಂಪ್ರದಾಯಗಳನ್ನು ಅನುಸರಿಸುವಂತಹ ಅಸಂಖ್ಯಾತ ಜನರನ್ನು ಕಾಣುತ್ತೇವೆ.

ಅನ್ನ ಸಂಪಾದನೆಗೆ ನಾನಾ ಮಾರ್ಗಗಳಿದ್ದಂತೆ, ಜ್ಞಾನ / ಪಾರಮಾರ್ಥಿಕ ಸಾಧನೆಗೂ ಕೂಡ ಬಹು ಜನರು ತಮ್ಮ ತಮ್ಮ ಆಸ್ಥೆಯಾನುಸಾರ ನಾನಾ ಮಾರ್ಗಗಳನ್ನು ಅಳವಡಿಸಿಕೊಂಡಿರುವುದು ಸ್ವಯಂಸ್ಪಷ್ಟವಾದ ವಿಚಾರ. ತಾನು ಮಾಡುವ ನಿಷ್ಕಾಮ ಕರ್ಮವೇ ಭಗವತ್ಸೇವೆ ಎಂದು ಒಬ್ಬ ಭಾವಿಸಿದರೆ, ಮತ್ತೊಬ್ಬ ಒಂದು ಮೂರ್ತಿಯಲ್ಲಿಯೇ ತನ್ನ ಇಷ್ಟದೈವವನ್ನು ಉತ್ಕಟ ಭಕ್ತಿಯಿಂದ, ನಾನಾ ರೀತಿಯಿಂದ ಪೂಜಿಸಿ, ಭಜಿಸಿ ಸಾಕ್ಷಾತ್ಕಾರಭಾವ ಅನುಭವಿಸುತ್ತಾನೆ. ಮೂರ್ತಿ ಪೂಜೆಯನ್ನೇ ನಂಬದ ಮುಸಲ್ಮಾನರಲ್ಲಿ ಇಂದೂ ಅನೇಕ ಮುಸಲ್ಮಾನ ದಂಪತಿಗಳು ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಸಂತಾನ ಪ್ರಾಪ್ತಿಗಾಗಿ ಆಶ್ಲೇಷ ಬಲಿ ಇತ್ಯಾದಿ ಸೇವೆ ಮಾಡಿಸುವವರನ್ನು ನೋಡಬಹುದಾಗಿದೆ. ಅದರಿಂದ ಫಲ ಪಡೆದ ಅನೇಕರ ಅನುಭವಗಳು ಇಲ್ಲಿ ಸಾಕಷ್ಟಿವೆ. ಅದೇ ಕ್ಷೇತ್ರದಲ್ಲಿ ಎಂಜಲೆಲೆಯ ಮೇಲೆ ಉರುಳುಸೇವೆ ಮಾಡಿ ಚರ್ಮರೋಗ ಪರಿಹರಿಸಿಕೊಂಡವರಲ್ಲಿ ನನಗೆ ಅತೀ ಸಮೀಪದ ಬಂಧುವೇ ಸಾಕ್ಷಿಯಾಗಿದ್ದಾರೆ. ಇವೆಲ್ಲಾ ಅವರವರ ಶ್ರದ್ಧೆ – ನಂಬಿಕೆಯ ವಿಚಾರ. ನಮಗೆ ಅರ್ಥವಾಗದಿದ್ದರೆ (ಅಥವಾ ಅರ್ಥಮಾಡಿಕೊಳ್ಳುವ ಮನಸ್ಸಿಲ್ಲದಿದ್ದರೆ) ಅದಕ್ಕೆ ಅರ್ಥವಿಲ್ಲವೆಂದು ಜರಿಯುವುದು ಯಾವ ಧರ್ಮ?

ನಂಬದಿರ್ದನು ತಂದೆ, ನಂಬಿದನು ಪ್ರಹ್ಲಾದ। ನಂಬಿಯುಂ ನಂಬದಿರುವಿಬ್ಬಂದಿ ನೀನು ॥
ಕಂಬದಿನೋ ಬಿಂಬದಿನೋ ಮೋಕ್ಷವವರಿಂಗಾಯ್ತು। ಸಿಂಬಳದಿ ನೊಣ ನೀನು - ಮಂಕುತಿಮ್ಮ ॥

ಅದೇರೀತಿ ಪರೋಪಕಾರದಲ್ಲಿ ಕೆಲವರು ಭಗವದ್ದರ್ಶನ ಪರಿಭಾವಿಸಿಕೊಂಡರೆ, ಅಪರಿಮಿತ ಪಾರಮಾರ್ಥಿಕ ಜ್ಞಾನಾರ್ಜನೆಯಲ್ಲಿ ಮತ್ತೆ ಕೆಲವರು ಸಚ್ಚಿದಾನಂದದ ಅನುಭವ ಕಾಣುತ್ತಾರೆ. ದಾನ – ಧರ್ಮದಲ್ಲಿ ಕೂಡ ಹಲವರು ನೆಮ್ಮದಿ – ಶಾಂತಿ ಕಂಡುಕೊಳ್ಳುತ್ತಾರೆ. ಜ್ಞಾನದ ಅಭಾವವೋ, ವೈಯಕ್ತಿಕ ಪೂರ್ವಾಗ್ರಹವೋ ಅಥವಾ ಪ್ರತಿಷ್ಠೆಯೋ ಗೊತ್ತಿಲ್ಲ, ಇಂದು ಒಬ್ಬರು ಮತ್ತೊಬ್ಬರ ಆಚರಣೆಗಳನ್ನು, ನಂಬಿಕೆಗಳನ್ನು, ಅವರು ನಂಬಿಕೊಂಡ ಸಂಪ್ರದಾಯಗಳನ್ನು (ಸಾಮಾಜಿಕ ಮತ್ತು ವೈಯಕ್ತಿಕ ಹಾನಿಮಾಡದಂತವುಗಳನ್ನು ಬಿಟ್ಟು) ಹೀಯಾಳಿಸುವುದರಲ್ಲಿಯೇ ಬಹು ಸಮಯ ವ್ಯರ್ಥ ಮಾಡುತ್ತಿರುವುದು ಇಂದಿನ ದುರಂತ. ಮೊದಲೇ ಹೇಳಿದಂತೆ, ಪ್ರತಿ ಮಾನವನ ಗ್ರಹಣ ಶಕ್ತಿ, ಆತನ ಸಂಸ್ಕಾರ, ಆತನ ಪರಿಸರ ಎಲ್ಲವೂ ಕೂಡ ಭಿನ್ನ ಭಿನ್ನ. ಹಾಗಾಗಿ ಎಲ್ಲರಿಗೂ ಒಂದೇ ಸಾಧನಾ ಪಥ ಸಾಧುವೂ ಅಲ್ಲ, ಸಾಧ್ಯವೂ ಅಲ್ಲ, ಬಹುಶಃ ಇದು ಆ ಅಗೋಚರ ಶಕ್ತಿಯೇ ಉದ್ದೇಶಪೂರ್ವಕವಾಗಿ ನಿರ್ಮಿಸಿದಂತಹ ಸನ್ನಿವೇಶವಿರಬಹುದು. ಇಲ್ಲದಿದ್ದರೆ ಲೋಕದ ಜನರು ಜೀವನದ ಆಚರಣೆಗಳಲ್ಲಿ ಏಕತಾನತೆಯಿಂದ ಬಳಲುತ್ತಿದ್ದರೋ ಏನೋ, ಭಾರತದ ಸಂಸ್ಕೃತಿಯೇ ಹಾಗೆ. ಭಗವತ್ಸಾಕ್ಷಾತ್ಕರಕ್ಕೆ ಪ್ರತಿಯೊಬ್ಬನಿಗೂ (ಅವನ ಇತಿಮಿತಿಯಾನುಸಾರ) ಎಟುಕುವಂತಹ ಅನೇಕ ಸಾಧನಾಪಥವನ್ನು ಹಾಕಿಕೊಟ್ಟಿದೆ. ದಾರಿ ಹಲವು ಗುರಿ ಮಾತ್ರ ಒಂದೇ. ಅಂತಿಮವಾಗಿ ನೆಮ್ಮದಿ ಮತ್ತು ಸಚ್ಚಿದಾನಂದ ಹೊಂದುವ ಗುರಿ.

ದಾರಿ ಸುಂದರವಿರಲು ಗುರಿಯ ಚಿಂತ್ಯಾಕೆ, ಗುರಿಯು ಸುಂದರವಿರಲು ದಾರಿ ಚಿಂತ್ಯಾಕೆ।
ಕಲ್ಲಿರಲಿ ಮುಳ್ಳಿರಲಿ ಹೂವು ಹಾಸಿರಲಿ ರೀತಿ ಸುಮಧುರವಿರೆ ಯಶ ನಿನದೆ ಮೂಡ ॥
(ಕವಿ ನಾಗರಾಜ್‌ರವರ ಮೂಢ ಉವಾಚ ಪುಸ್ತಕದಿಂದ)

ಒಳ್ಳೆಯ ದಾರಿ, ಒಳ್ಳೆಯ ಚಿಂತನೆ, ಮನಸ್ಸಿಗೊಪ್ಪಿದ (ಅನ್ಯರ ನೋಯಿಸದ) ಆಚರಣೆ ಇದ್ದಾಗ ನೆಮ್ಮದಿ ಖಂಡಿತಾ ಹತ್ತಿರ ಸುಳಿದೀತು. ನನ್ನ ಆಚರಣೆಯೇ ಸರಿ, ನನ್ನ ನಂಬಿಕೆಯೇ ಸರಿ, ಬೇರೆಯವರದು ಕೆಳಮಟ್ಟದ ಮಾರ್ಗ ಎನ್ನುವ ಭಾವ ಬಹುಶಃ ತರವಲ್ಲ ''**ನ ಹಿ ಸರ್ವಃ, ಸರ್ವಂ ಜಾನಾತಿ**'' – ಎಲ್ಲರಿಗೆ ಎಲ್ಲವೂ ತಿಳಿದಿರುವುದಿಲ್ಲ, ಇದು ನಿತ್ಯಸತ್ಯವಾದ ಮಾತು.

ಆದುದರಿಂದ ವಿಚಾರಗಳನ್ನು ಅಧಿಕಾರವಾಣಿಯಿಂದ ಇತರರ ಮೇಲೆ ಹೇರುವ ಪ್ರವೃತ್ತಿ ಕೂಡ ಪ್ರಶ್ನಾರ್ಹವೇ. ವಿಚಾರ ಮಂಡನೆ ಇರಲಿ, ಹೇರಿಕೆ ಬೇದ, ಎಲ್ಲರೂ ಒಪ್ಪಬೇಕೆಂಬ ನಿರೀಕ್ಷೆ ಕೂಡಾ ಬೇಡ. ಮನುಷ್ಯನ ಮೆದುಳು ಬ್ಲಾಟಿಂಗ್ ಪೇಪರ್ ಇದ್ದ ಹಾಗೆ. ತನಗೆ ಸಾಧ್ಯವಾದಷ್ಟು ಮಾತ್ರ ಗ್ರಹಿಸಬಲ್ಲದು, ಒಪ್ಪಿಕೊಂಡಷ್ಟು ಮಾತ್ರಾ ಅನುಸರಿಸಬಲ್ಲದು. ಆದ್ದರಿಂದ ಸದ್ವಿಚಾರಗಳಿಗೆ ಸದಾ ಮನಸ್ಸು ತೆರೆದಿರಲಿ. ಆದರೆ ಆಚರಣೆ ಮತ್ತು ನಮ್ಮ ದೈನಂದಿನ ನಡವಳಿಕೆ ನಮ್ಮ ಅಂತರಾತ್ಮ ನಿರ್ದೇಶಿಸಿದಂತೇ (ಸದಾ ಸನ್ಮಾರ್ಗದಲ್ಲಿಯೇ) ಸಾಗಲಿ. ಈ ಸಂದರ್ಭದಲ್ಲಿ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳವರು, ಶ್ರೀಮಠ ಹರಿಹರಪುರ ಇವರ ಹಿತನುಡಿಗಳು ಎಷ್ಟು ಪ್ರಸ್ತುತ ನೋಡಿ.

‘‘...... ಇನ್ನು ಅಲ್ಪ ಸ್ವಲ್ಪ ಸಾಧನೆ ಮಾಡಿ ಆಂಶಿಕವಾಗಿ ಪರಮಾತ್ಮತತ್ತ್ವವನ್ನು ತಿಳಿದುಕೊಂಡಿರುವವರು ಭೇದ - ಭಾವಗಳ ಕೆಸರಿನ ಹೊಂಡದಲ್ಲಿ ಬಿದ್ದುಕೊಂಡಿರುತ್ತಾರೆ. ಇಂತಹವರು ಕೂಪ ಮಂಡೂಕಗಳಂತೆ ನನ್ನ ಮತವೇ ಶ್ರೇಷ್ಠ, ನನ್ನ ದೇವರೇ ಶ್ರೇಷ್ಠ ಎನ್ನುವ ಭ್ರಮೆಯಲ್ಲಿ ಸಿಲುಕಿಕೊಂಡು ಒದ್ದಾಡುತ್ತಿರುತ್ತಾರೆ. ಸತ್ಯಕ್ಕೆ ಅನಂತ ಮುಖಗಳಿವೆ. ನಾನು ನೋಡಿದ್ದು ಕೇವಲ ಒಂದು ಮುಖ ಎನ್ನುವ ವಾಸ್ತವಿಕ ವಿಚಾರವನ್ನು ಇಂತಹವರು ಮರೆತಿರುತ್ತಾರೆ.

ಗಾವೋ ವಿಶ್ವಸ್ಯ ಮಾತರಃ

ವಿದ್ವಾನ್ ಶ್ರೀ ಬಿ.ಕೆ. ಶೇಷಗಿರಿ ಭಟ್, ಶೃಂಗೇರಿ

ಶ್ರೀಯುತರು ಸಂಸ್ಕೃತದಲ್ಲಿ ವಿದ್ವತ್ ಪದವಿ ಪಡೆದು ಶೃಂಗೇರಿ ಜಗದ್ಗುರು ಪೀಠದ ಶ್ರೀ ಅಭಿನವ ವಿದ್ಯಾತೀರ್ಥ ಬಾಲಿಕಾ ಪ್ರೌಢಶಾಲೆಯಲ್ಲಿ ಸಂಸ್ಕೃತ ಅಧ್ಯಾಪಕರಾಗಿ ಸೇವೆಯನ್ನು ಮುಗಿಸಿ ಈಗ ನಿವೃತ್ತ ಜೀವನ ನಡೆಸುತ್ತಿದ್ದಾರೆ. ನಮ್ಮ "ಸ್ವಯಂಪ್ರಕಾಶ" ಮಾಸಪತ್ರಿಕೆಯಲ್ಲಿ "ಚಿಣ್ಣರಿಗಾಗಿ" ಪ್ರತಿ ತಿಂಗಳೂ ಬರೆಯುತ್ತಿರುವ ಶ್ರೀಯುತರು ವಿಶೇಷ ಸಂಚಿಕೆಗಾಗಿ ನೀಡಿರುವ ಈ ಗೋಮಾತೆಯ ವಿಶ್ಲೇಷಣಾತ್ಮಕ ಲೇಖನವನ್ನು ಪ್ರಕಟಿಸುತ್ತ ಅಭಿನಂದನೆ ಸಲ್ಲಿಸುತ್ತೇನೆ. – ಸಂಪಾದಕ

ನಮ್ಮ ಭವ್ಯ ಭಾರತದ ಹಿಂದೂ ಸಂಸ್ಕೃತಿಯ ದಿವ್ಯ ಪರಂಪರೆಯಲ್ಲಿ ಗೋವಿಗೆ ವಿಶಿಷ್ಟವಾದ ಪೂಜ್ಯವಾದ ಸ್ಥಾನವಿದೆ. ಮಾನವನ ಸಾಕು ಪ್ರಾಣಿಗಳಲ್ಲಿ ಗೋವು ಪ್ರಮುಖ ಸ್ಥಾನ ಪಡೆದಿದೆ. ಕಾರಣ ಅದು ದೇವತಾ ಮೂರ್ತಿ. "**ಗವಾಮಂಗೇಷು ತಿಷ್ಠಂತಿ ಭುವನಾನಿ ಚತುರ್ದಶ**" ಗೋವಿನ ಪಾದಾದಿ ಕೇಶಪರ್ಯಂತ ಪ್ರತಿಯೊಂದು ಅಂಗಾಂಗಗಳಲ್ಲಿಯೂ ಹದಿನಾಲ್ಕು ಲೋಕಗಳಿದ್ದು ಅಲ್ಲೆಲ್ಲ ದೇವತಾ ಸಾನ್ನಿಧ್ಯವಿದೆ. ರೋಮರೋಮವು ದೇವಸನ್ನಿಧಿ. ಗೋವಿನ ಕೋಡುಗಳಲ್ಲಿ ಬ್ರಹ್ಮ, ವಿಷ್ಣು ಕೋಡುಗಳ ತುದಿಯಲ್ಲಿ ಪವಿತ್ರ ತೀರ್ಥಗಳು, ಲಲಾಟದಲ್ಲಿ ಶಿವ, ಲಲಾಟಾಗ್ರದಲ್ಲಿ ಪಾರ್ವತೀ, ಮೂಗಿನಲ್ಲಿ ಕುಮಾರಸ್ವಾಮೀ, ಕಿವಿಗಳಲ್ಲಿ ಅಶ್ವಿನೀದೇವತೆಗಳು, ಕಣ್ಣುಗಳಲ್ಲಿ ಸೂರ್ಯ – ಚಂದ್ರ, ದಂತಪಂಕ್ತಿಯಲ್ಲಿ ವಾಯು, ನಾಲಗೆಯಲ್ಲಿ ವರುಣ, ಧ್ವನಿಯಲ್ಲಿ ವಾಗ್ದೇವೀ, ಕಪೋಲಗಳಲ್ಲಿ ಯಮಧರ್ಮ ಹೀಗೆ ಹೇಳುತ್ತಾ ಹೋದಂತೆ ಪಟ್ಟಿಬೆಳೆದು ಗೋಶರೀರವು ಒಂದು ಪುಟ್ಟ ದೇವಲೋಕವೇ ಆಗಿದೆ. ಸರ್ವತೀರ್ಥಮಯವೂ ಆಗಿದೆ.

ಸಂಸ್ಕೃತಭಾಷೆಯಲ್ಲಿ "**ಗೌಃ**" ಎಂಬ ಪದಕ್ಕೆ ನಾನಾರ್ಥಗಳಿವೆ. ದೇವ – ದಾನವರು ಸೇರಿ ಸಮುದ್ರಮಥನ ಮಾಡಿದ ಸಂದರ್ಭದಲ್ಲಿ ಪಂಚಧೇನುಗಳು ಪ್ರಾದುರ್ಭವಿಸಿದವು. ಅವುಗಳಲ್ಲಿ "**ನಂದಾ**" ಎಂಬ ಗೋವು ಭೂಲೋಕದಲ್ಲಿ ಪ್ರಸಿದ್ಧವಾಗಿದೆ. ಋಗ್ವೇದ ಸಂಹಿತೆಯಲ್ಲಿ "**ಆ ಗಾವೋ ಅಗ್ಮನ್ನುತಭದ್ರಮಕ್ರನ್**" ಎಂಬ ಗೋಸೂಕ್ತ ಮಂತ್ರವು ಉಕ್ತವಾಗಿದ್ದು ಅದು ಗೋವಿನ ಮಹಾತ್ಮ್ಯೆಯನ್ನು ಘೋಷಿಸಿದೆ. ಗೋವಿನಿಂದಲೇ ಜನ್ಯವಾಗುವ ಗೋಮೂತ್ರ, ಗೋಮಯ, ಹಾಲು, ಮೊಸರು, ತುಪ್ಪ ಇವುಗಳು 'ಪಂಚಗವ್ಯ' ಪದವಾಚ್ಯವಾಗಿವೆ. ಇದರ ಪ್ರಾಶನವು ಚರ್ಮ ಹಾಗೂ ಮೂಳೆಗೆ ಸಂಬಂಧಿಸಿದ ಸಕಲ ದೋಷಗಳನ್ನೂ ಪರಿಹಾರ ಮಾಡುತ್ತದೆ.

ಗೋಮೂತ್ರದಲ್ಲಿ ಗಂಗೆ, ಗೋಮಯದಲ್ಲಿ ಲಕ್ಷ್ಮೀ, ಹಾಲಿನಲ್ಲಿ ಸರಸ್ವತೀ, ಮೊಸರಿನಲ್ಲಿ ನರ್ಮದೆ ಹಾಗೂ ತುಪ್ಪದಲ್ಲಿ ಅಗ್ನಿ ಹೀಗೆ ಪಂಚ ದೇವತಾವಾಸವಿದ್ದು ಪಂಚ ಮಹಾಪಾತಕಗಳನ್ನು ಪರಿಹರಿಸುತ್ತದೆ. ಯಾವುದೇ ಧರ್ಮಾಕರ್ಮಾನುಷ್ಠಾನ ಮಾಡುವ ಮೊದಲು ದೇಹಶುದ್ಧಿಗಾಗಿ ಪಂಚಗವ್ಯಪ್ರಾಶನ ಶಾಸ್ತ್ರ ವಿಹಿತ. ವೇದ ಪ್ರತಿಪಾದಿತ. ಪೂಜೆ ಪುನಸ್ಕಾರ, ಹೋಮ, ಹವನ, ಯಜ್ಞಯಾಗಾದಿಗಳಲ್ಲಿ ಅವಶ್ಯವಾಗಿ ಬಳಕೆಯಾಗುವ ಪಂಚಾಮೃತ (ಹಾಲು – ಮೊಸರು – ತುಪ್ಪ) ಹಾಗೂ ಪಂಚಗವ್ಯ ಇವು ವಿಶೇಷ ಸ್ಥಾನ ಪಡೆದಿವೆ. ಪಂಚಗವ್ಯಗಳಿಂದ ಹೋಮವೂ ಉಕ್ತವಾಗಿದೆ. ಈ ಎಲ್ಲಾ ಕಾರಣಗಳಿಂದ ಗೋವನ್ನು "**ಯಜ್ಞಸಾಧನ ಭೂತಾ**" ಎಂದೂ ಆ ತಾಯಿ ನಮ್ಮೆಲ್ಲ ಪಾಪಹಾರಿಣಿಯಾದ ಕಾರಣ "**ವಿಶ್ವಸ್ಯಾಘಪ್ರಣಾಶಿನೀ**" ಎಂದೂ ಕರೆದಿದ್ದಾರೆ.

ಪ್ರಾಚೀನ ಕಾಲದಲ್ಲಿ ಯಜ್ಞ ಯಾಗಾದಿಗಳನ್ನು ಮಾಡಿ ಅದಕ್ಕೆ ದಕ್ಷಿಣಾರೂಪವಾಗಿ ಗೋವುಗಳನ್ನು ನೀಡುತ್ತಿದ್ದರು. ಇದಕ್ಕೆ "**ಗೋದಕ್ಷಿಣಾ**" ಎಂದು ಹೆಸರು. ಇಲ್ಲಿ ನಚಿಕೇತೋಪಾಖ್ಯಾನವನ್ನು ಸ್ಮರಿಸಬಹುದಾಗಿದೆ. ಪಿತೃಕರ್ಮಗಳನ್ನು ಆರ್ಥಿಕವಾಗಿ ಮಾಡಲು ಅಶಕ್ತರಾದವರು ಮೃತತಿಥಿಯಂದು ಸ್ನಾನಮಾಡಿ ಮಡಿಯುಟ್ಟು, ಗೋವಿಗೆ ಯಥಾಶಕ್ತಿ ಆಹಾರವಿಟ್ಟು, ಎರಡೂ ಕೈ

ಎತ್ತಿ ಪಿತೃಗಳ ನಾಮಸ್ಮರಣೆ ಮಾಡಿ ದೀರ್ಘದಂಡ ಪ್ರಣಾಮ ಮಾಡಿದರೆ ಶ್ರಾದ್ಧ ಫಲ ಪ್ರಾಪ್ತಿಯಾಗುವುದು ಎಂದಿದ್ದಾರೆ. ಹಿಂದಿನ ಕಾಲದಲ್ಲಿ ಮನೆಮನೆಗಳಲ್ಲಿ ಗೋಸಂಪತ್ತು ಹೇರಳವಾಗಿತ್ತು. ಪಶುಸಮೃದ್ಧಿಯ ಕಾಲವದು. ಕೊಟ್ಟಿಗೆಯಲ್ಲಿರುವ ದನಕರುಗಳಿಗೆ ಗಂಗೆ, ಗೌರಿ, ತುಂಗೆ, ಭದ್ರೆ, ಕಾವೇರಿ, ಕಪಿಲೆ ಮುಂತಾದ ಮುದ್ದು ಮುದ್ದಾದ ಮಂಗಳಕರವಾದ ಹೆಸರಿಟ್ಟು ಕರೆಯುತ್ತಿದ್ದರು. ದನ-ಕರುಗಳು ಮನೆಯ ಮಕ್ಕಳೇ ಆಗಿದ್ದವು. ಯಾರ ಮನೆಗಳಲ್ಲಿ ಗೋಸಂಪತ್ತು ಸುಖ ಶಾಂತಿ ಸಮೃದ್ಧಿಯಿಂದ ಇರುವುವೋ ಅವನಿಗಿಲ್ಲ ಆಪತ್ತು. ಅಂದರೆ ಆ ಮನೆ ಧನ ಧಾನ್ಯಾದಿ ಸಂಪತ್ ಸಮೃದ್ಧಿಯಿಂದ ತುಂಬಿ ತುಳುಕುತ್ತಿತ್ತು. ಶಾಂತಿಧಾಮವಾಗಿರುತ್ತಿತ್ತು.

''ಮಾರ್ಧ್ವೀರ್ಗಾವೋ ಭವಂತು ನಃ'' ಇದು ಅವರ ನಿತ್ಯಪ್ರಾರ್ಥನೆಯಾಗಿತ್ತು. ಹಿಂದುಗಳ ಹಬ್ಬವಾದ ದೀಪಾವಳಿಯಲ್ಲಿ ಗೋಪೂಜೆಗೆ ವಿಶೇಷ ಮಹತ್ವ ನೀಡಲಾಗಿದೆ. ನವಾಗಾರ ಪ್ರವೇಶಕ್ಕೆ ಮೊದಲು ಮಾಡುವ ಸಪ್ತಶುದ್ಧಿಗಳಲ್ಲಿ ಗೋಪೂಜೆ ಮತ್ತು ಗೋನಿವಾಸವೂ ಒಂದು ಅಂಗ. ಹೊಸ ಜಾಗದಲ್ಲಿ ಯಾವುದೇ ದುಷ್ಪಾರಿಷ್ಟದೋಷಗಳಿದ್ದರೂ ಅವೆಲ್ಲವೂ ಗೋಪರಿಭ್ರಮಣ ದಿಂದ ಪರಿಹಾರವಾಗಿ ಆ ಮನೆ ನಿವಾಸಕ್ಕೆ ಯೋಗ್ಯವಾಗುವುದು ಎಂಬ ನಂಬಿಕೆ ನಮ್ಮದು.

ಇಹ – ಪರಶ್ರೇಯಃ ಪ್ರಾಪ್ತಿಗಾಗಿ ಮಾಡುವ ದಶದಾನಗಳಲ್ಲಿ ಗೋದಾನವು ಮೊಟ್ಟಮೊದಲನೆಯದು. **''ವಿಶ್ವರೂಪಧರೋ ದೇವಃ ಪ್ರೀಯತಾಮನಯಾ ಗವಾ''** ಎಂದು ಹೇಳಿ ದಾನ ಮಾಡಿದರೆ ನಮ್ಮ ದೇಹತ್ಯಾಗಾನಂತರ ''ವೈತರಿಣೀ'' ಎಂಬ ನದಿಯನ್ನು ದಾಟಿಸಲು ನಮಗೆ ನೆರವಾಗಿ ನಮ್ಮನ್ನು ಮುಕ್ತಿಪಥದತ್ತ ಕೊಂಡೊಯ್ಯುವಲ್ಲಿ ನೆರವಾಗುತ್ತದೆ. ತಿಥಿ, ವಾರ, ನಕ್ಷತ್ರ, ಯೋಗ ಕರಣಾದಿ ತ್ಯಾಜ್ಯ ದುಷ್ಟ ಮುಹೂರ್ತದಲ್ಲಿ ಗಂಡು ಅಥವಾ ಹೆಣ್ಣು ಮಗು ಜನನವಾದರೆ ಆ ದೋಷ ಪರಿಹಾರಕ್ಕಾಗಿ ಶಾಂತಿ ಕರ್ಮವನ್ನು ಆಚರಿಸಬೇಕು. ಅದಕ್ಕೆ ಮೊದಲು ''ಗೋಮುಖಪ್ರಸವ ಶಾಂತಿ'' ಹೋಮವನ್ನು ಮಾಡಬೇಕು. ಅಂದರೆ ಮಗು ''ಗೋಜನ್ಯ'' ಎಂಬ ಭಾವನೆ ಮಾತ್ರದಿಂದ ದುಷ್ಪಾರಿತ್ಯಗಳು ಪರಿಹಾರ.

ಗೋವಿಗೆ ಸಂಬಂಧಿಸಿದಂತೆ ಹತ್ತು ಹಲವು ಪೌರಾಣಿಕ, ಜಾನಪದ ಕಥೆಗಳು ಪ್ರಚಲಿತವಾಗಿದೆ. ಹಲವು ಮಾಧ್ಯಮಗಳಲ್ಲಿ ಪ್ರತಿಬಿಂಬಿತವಾಗಿದೆ. ಹಿಂದೆ ಸತ್ಯವಾನನಿಗೆ ಅಲ್ಪಾಯುಷ್ಯವಿದ್ದಾಗ ಯಮನು ಅವನನ್ನು ಸೆಳೆದೊಯ್ಯಲು ಬರುತ್ತಾನೆ. ಆಗ ಗೋವು ಈ ರಹಸ್ಯವನ್ನು ತಿಳಿದು ತನ್ನನ್ನು ಪೂಜಿಸಲು ಹೇಳುತ್ತದೆ. ಈ ಸುಳಿವು ತಿಳಿದ ಯಮನು ತನ್ನ ದಾರಿಗೆ ಅಡ್ಡಬಂದ ಗೋವಿಗೆ ಮಾತುಬರದಂತೆ ಶಾಪವೀಯುತ್ತಾನೆ. ಆದ್ದರಿಂದ ಗೋವಿಗೆ ಮತ್ತೆಲ್ಲಾ ಜ್ಞಾನವಿದ್ದರೂ ಮಾತುಬಾರದೇ ಮೂಕವಾಗಿದೆ.

ಕನ್ನಡ ಭಾಷೆಯಲ್ಲಿ ಒಂದು ಸುಪ್ರಸಿದ್ಧ ಜಾನಪದ ಪದ್ಯ ''ಧರಣಿಮಂಡಲ ಮಧ್ಯದೊಳಗೆ'' ಇದರಲ್ಲಿ ಬರುವ ''ಹುಲಿ – ಹಸುವಿನ ಸಂವಾದ'' ಅತ್ಯಂತ ರೋಚಕ ಅಷ್ಟೇ ಮಾರ್ಮಿಕ. ''ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು'' ಎಂಬ ಗೋವಿನ ದಿವ್ಯ ಭವ್ಯ ಅಮರ ಸಂದೇಶ ತ್ರಿಕಾಲಾಬಾಧಿತ ಕಟುಸತ್ಯ, ಅಷ್ಟೇ ನಿತ್ಯ. ಈ ವಾಕ್ಯ ಯಾವ ವೇದಾಂತ ವಾಕ್ಯಕ್ಕೂ ಕಡಿಮೆ ಇಲ್ಲ, ವೇದವಾಕ್ಯ ಶಾಸ್ತ್ರಸಿದ್ಧಾಂತ.

ಅಂತೆಯೇ ಇನ್ನೊಂದು ಕನ್ನಡ ಕೃತಿ ''ಇಟ್ಟರೇ ಸಗಣಿಯಾದೆ, ತಟ್ಟಿದರೆ ಕುರುಳಾದೆ .... ನೀನಾರಿಗಾದೆಯೋ ಎಲೆ ಮಾನವ?'' ಎಂದು ಗೋವು ಮಾನವನಿಗೆ ಉತ್ತರಿಸಲಾಗದ ಒಂದು ಸವಾಲು ಒಡ್ಡಿದೆ. ಅಂದರೆ ಅದು ಅಹಂಕಾರದಿಂದ ಆಡಿದ ನುಡಿಯಲ್ಲ, ''ಮಾನವ ಎಷ್ಟು ಕೃತಘ್ನ'' ಎಂಬ ಸತ್ಯವನ್ನು ತಿಳಿಸುವ ಶಂಖನಾದ, ಘೋಷವಾಕ್ಯ, ಎಚ್ಚರಿಕೆಯ ಗಂಟೆ.

ರೈತಾಪಿ ಜನರಿಗಂತೂ ಗೋವು ಕಲ್ಪವೃಕ್ಷ, ಕಾಮಧೇನು ಚಿಂತಾಮಣಿಯಂತಿದೆ. ಇದು ಅವರ ಸಂಸಾರದ ಅವಿಭಾಜ್ಯ ಅಂಗ. ಉಳುಮೆಯಿಂದ ಹಿಡಿದು ರೈತನೊಂದಿಗೆ ದುಡಿಯುವ ಎತ್ತು ರೈತನ – ದೇಶದ, ಅನ್ನದ ತುತ್ತು.

ಬಸವನನ್ನು ಆಡಿಸುವವರು ಎಂಬ ಒಂದು ವೃತ್ತಿ ಜನಾಂಗವೇ ಇದೆ. ಅದು ಬಸವನಿಗೆ ವಸ್ತ್ರಾದಿಗಳಿಂದ ಅಲಂಕಾರಮಾಡಿ ಮನೆಮನೆಗೆ ಕರೆತಂದು ಅದರಿಂದ ವಿವಿಧ ಕರಾಮತ್ತುಗಳನ್ನು ಮಾಡಿಸಿ ಮನೆಮಂದಿಗೆಲ್ಲಾ ಮುದನೀಡಿ ಮನೆಯವರು ದವಸ ಧಾನ್ಯಗಳನ್ನು ವಸ್ತ್ರಗಳನ್ನು ಪಡೆಯುವುದು.

ಪ್ರತಿವರ್ಷ ರೈತರು ಜ್ಯೇಷ್ಠಕೃಷ್ಣ ಅಮಾವಾಸ್ಯೆ (ಬಸವ ಅಮಾವಾಸ್ಯೆ)ಯಂದು ಎತ್ತನ್ನು ಹೊಲಕ್ಕಿಳಿಸುವ ಮುನ್ನ ಬಸವನಿಗೆ ವಿಶೇಷ ಪೂಜೆ ಮಾಡಿ ಪ್ರಾರ್ಥಿಸಿ ಕೃಷಿಕಾರ್ಯ ಪ್ರಾರಂಭಿಸುತ್ತಾರೆ.

ಕಪಿಲೆ (ಕೆಂಪುಬಣ್ಣ) ಹಸುವಿನಲ್ಲಿ ಹಳದಿಬಣ್ಣದ ಒಂದು ರೀತಿಯ ಸುಗಂಧ ದ್ರವ್ಯ ದೊರೆಯುತ್ತದೆ ಎಂಬ ಮಾತಿದೆ. ಇದು ಹಸುವಿನ ಹೊಟ್ಟೆಯೊಳಗೆ ಇದ್ದು ಇದಕ್ಕೆ ''**ಗೋರೋಚನ**'' ಎನ್ನುವರು. ಇದು ಪೂಜಾದಿಗಳಲ್ಲಿ ವಿಶೇಷ ಉಪಯುಕ್ತ ವಸ್ತುವಾಗಿದೆ. ಔಷಧೀಯ ಗುಣವನ್ನು ಹೊಂದಿದೆ.

ಗೋಮೂತ್ರದಲ್ಲಿ, ಅತ್ಯಂತ ಭಯಂಕರ ಮಾರಕರೋಗವಾದ ಕ್ಯಾನ್ಸರ್ (ಏಡಿಹುಣ್ಣು) ನಂತಹ ಖಾಯಿಲೆಯನ್ನು ಗುಣಪಡಿಸುವ ಸದೃಶವಾದ ಶಕ್ತಿಯಿದೆ. ಇದು ಆಯುರ್ವೇದ ವಿಜ್ಞಾನಿಗಳ ಇತ್ತೀಚಿನ ಸಂಶೋಧನೆಯ ಫಲಶ್ರುತಿಯಾಗಿದೆ, ರೋಗಿಗಳಿಗೆ ಇದೊಂದು ವರದಾನವಾಗಿದೆ.

ಹಸುವಿನ ಸಗಣಿಯಿಂದ ಬೆರಣಿತಟ್ಟಿ ಒಣಗಿಸಿ, ಶಿವರಾತ್ರಿಯಂದು ಶಿವನಿಗೆ ಎತ್ತಿದ ಮಂಗಳಾರತೀ ಅಗ್ನಿಯಿಂದ ಬೆರಣಿಯನ್ನು ಸುಟ್ಟು ಸಂಸ್ಕರಿಸಿದರೆ ನೊಸಲಿಗೆ ಹಚ್ಚುವ ಭಸ್ಮ (ವಿಭೂತಿ) ಸಿದ್ಧವಾಗುತ್ತದೆ. ಭಸ್ಮಧಾರಣೆಯು ಚರ್ಮರೋಗ ನಿವಾರಕ. ''ಸುಟ್ಟರೆ ನೊಸಲಿಗೆ ವಿಭೂತಿಯಾದೆ''.

ಆ ಬಾಲವೃದ್ಧರಿಗೂ ಗೋಕ್ಷೀರ ಸಾರ್ವಕಾಲಿಕ ಪಥ್ಯ. ಪಯಃ ಪಾನ ಆಯುಃಕಾರಕ'' ''ಆರೋಗ್ಯವರ್ಧಕ''. ಗೋಘೃತ ಬುದ್ಧಿ ಪ್ರಚೋದಕ, ಪ್ರಜ್ಞಾವಿವರ್ಧಕ. ''ಘೃತೇನ ವರ್ಧತೇ ಬುದ್ಧಿಃ ಕ್ಷೀರೇಣಾಯುಃ ಪ್ರವರ್ಧತೇ'' ಗೋಕ್ಷೀರ ಮಧುರ, ಸ್ನಿಗ್ಧ, ಶೀತ, ಗುಣದಿಂದ ಕೂಡಿದ್ದು, ವಾತ, ಪಿತ್ತ, ರಕ್ತ ವಿಕಾರಗಳನ್ನು ಶಮನಮಾಡುವಲ್ಲಿ ಸಹಕಾರಿಯಾಗಿದೆ. ಬಲಾಯುವೃದ್ಧಿಗೆ ನಿದಾನವಾಗಿದೆ. ಪಂಚಾಮೃತಗಳಲ್ಲಿ ಪ್ರಥಮ ಸ್ಥಾನ ಹಾಲಿಗೆ ಮೀಸಲು. ಹಿಂದಿನ ಕಾಲದಲ್ಲಿ ಪುಣ್ಯಾತ್ಮರು ಎಕರೆಗಟ್ಟಲೆ ಜಾಗವನ್ನು ದನ – ಕರುಗಳು ಸ್ವಚ್ಛಂದವಾಗಿ ಓಡಾಡಿಕೊಂಡು ಮೇಯಲು ಮೀಸಲಿಡುತ್ತಿದ್ದರು. ಆ ಜಾಗಕ್ಕೆ ''ಗೋಮಾಳ'' ಎಂದು ಕರೆಯುತ್ತಿದ್ದರು. ಇದೊಂದು ಪುಣ್ಯಪ್ರದ ಎಂದು ನಂಬಿದ್ದರು.

ಒಂದು ಕುಟುಂಬಕ್ಕೆ ಗ್ರಹಗತ್ಯಾದಿಗಳಿಂದ ಯಾವುದೋ ಅನಿಷ್ಟ ದೋಷ ಸಂಭವಿಸುವ ಮುನ್ಸೂಚನೆಯಾಗಿ ಆ ಯಜಮಾನನ ಕೊಟ್ಟಿಗೆಯಲ್ಲಿರುವ ದನ – ಕರುಗಳಿಗೆ ತೊಂದರೆಯಾಗುತ್ತದೆ ಎಂಬುದು ಹಿರಿಯರ ಅಂಬೋಣ. ಅದನ್ನು ತಿಳಿದ ಯಜಮಾನನು ಎಚ್ಚೆತ್ತುಕೊಳ್ಳುತ್ತಿದ್ದ ಪರಿಹಾರ ಹುಡುಕುತ್ತಿದ್ದ.

ಇಂತ ''ಭೂಲೋಕದ ಕಾಮಧೇನು''ವೆನಿಸಿದ, ವಿಶ್ವಕ್ಕೆ ಮಾತೆಯಾದ, ಸತ್ವದೇವಾಧಿಷ್ಠಾತ್ರಿಯಾಸ ಗೋವು ನಮ್ಮ ಸ್ವಾರ್ಥಕ್ಕಾಗಿ ನಮ್ಮ ಅಜ್ಞಾನದಿಂದ ಅಳಿಯುತ್ತಿರುವುದು ದುರ್ದೈವ. ಪೂಜಾಸ್ಥಾನದಲ್ಲಿರಬೇಕಾದ ಗೋವು ವಧಾಸ್ಥಾನಕ್ಕೆ ರವಾನೆ ಯಾಗುತ್ತಿರುವುದು ಘೋರ ದುರಂತ. ಈ ನಿಟ್ಟಿನಲ್ಲಿ ಕೆಲವು ಮಠಮಂದಿರಗಳು, ಸಂಘಸಂಸ್ಥೆಗಳು, ಗೋಸಂರಕ್ಷಣಾ ಕೇಂದ್ರವನ್ನು ಸ್ಥಾಪಿಸಿ ಗೋತಳಿಯ ಉಳಿವಿಗಾಗಿ ಪ್ರಯತ್ನ ಪಡುತ್ತಿರುವುದು ಸಕಾಲಿಕ. ಅಷ್ಟು ಮಾತ್ರ ಸಾಲದು, ಹಿಂದೂ ಜನಾಂಗದ ಪ್ರತಿಯೊಬ್ಬರ ಮನೆಯಲ್ಲೂ, ಮನದಲ್ಲೂ ಈ ಪ್ರಯತ್ನ ನಡೆಯಬೇಕು, ಮಾತೆಯ ಸಂರಕ್ಷಣೆಗಾಗಿ ಪಣತೊಡಬೇಕು.

ಹಿಂದೆ ಸೂತಕ ಮೃತಕಾದಿಗಳಿಂದ ಮನೆಯು ಅಶುಚಿಯಾದಾಗ ಅಶೌಚ ನಿವೃತ್ತಿನಂತರ ಗೋಮೂತ್ರವನ್ನು ಹಿಡಿದು ತಂದು ಮನೆಗೆ ಮನೆಮಂದಿಗೆಲ್ಲ ಪ್ರೋಕ್ಷಣೆ ಮಾಡುವ ಪದ್ಧತಿ ಇತ್ತು. ಮಕ್ಕಳಿಗೆ ಬಾಲಗ್ರಹಾದಿ ಪೀಡೆಗಳಿಂದ ಮುಡುಚಟ್ಟು ಆದಾಗ ಗೋಮೂತ್ರ ತಂದು ಮಕ್ಕಳ ಬಾಯಿಗೆ ಎರಡು ಹನಿ ಹಾಕುತ್ತಿದ್ದರು.

ಕಪಟನಾಟಕ ಸೂತ್ರಧಾರಿ ಜಗನ್ನಿಯಾಮಕನಾದ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನೇ ''ದನಕಾಯುವ'' ಕಾಯಕ ಮಾಡುತ್ತಿದ್ದಾನೆಂದರೆ ಗೋಮಹಿಮೆ ಎಷ್ಟೆಂದು ವೇದ್ಯವಾಗುತ್ತದೆ. ಬೆಳಗಾದರೆ ಮನೆಮುಂದೆ ಬರುವ ಗೋಸಾವಿತ್ರಿಗೆ ಹಣೆಗೆ ಅರಿಶಿನ ಕುಂಕುಮ ಹೂವಿಟ್ಟು ನೆನೆಸಿದ ಅಕ್ಕಿಗೆ ಬೆಲ್ಲ ಬಾಳೆಹಣ್ಣು ಹಾಕಿ ಕೊಟ್ಟರೆ ಹತ್ತು ಮಂದಿ ವಿಪ್ರರಿಗೆ ಉಣಬಡಿಸಿದಂತೆ. ಶುಭ – ಅಶುಭ ಕರ್ಮಗಳಲ್ಲಿ ಬ್ರಾಹ್ಮಣ ಸುವಾಸಿನೀ ಭೋಜನದ ಜೊತೆಗೆ ''ಗೋಗ್ರಾಸ'' ನೀಡುವ ಪದ್ಧತಿ ಇಂದಿಗೂ ಪ್ರಚಲಿತವಿದೆ.

ನಮ್ಮ ಪ್ರಾಚೀನ ಋಷಿಮುನಿಗಳ ಅಂದಿನ ಶುಭಾಶಂಸನೆಯೂ ಇದೇ ಆಗಿದೆ. ''**ಗೋ ಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಮ್**'' ಇದೆಂತಹ ದೂರದೃಷ್ಟಿಯ ದಿವ್ಯ ಸಂದೇಶ. ಗೋಮಾತೆ ಸಂತೃಪ್ತಳಾಗಿದ್ದರೆ ಇಡೀ ವಿಶ್ವ ಮಂಗಳಧಾಮ, ಪುಣ್ಯಾರಾಮ.

ಭುಕ್ತ್ವಾ ತೃಣಾನಿ ಶುಷ್ಕಾನಿ ಪೀತ್ವಾ ತೋಯಂ ಜಲಾಶಯಾತ್ ।
ಕ್ಷೀರಂ ದದಾತಿ ಲೋಕೇಭ್ಯಃ ಗಾವೋ ವಿಶ್ವಸ್ಯ ಮಾತರಃ ॥

ಹಾದಿ ಬೀದಿಯಲ್ಲಿರುವ ಹುಲ್ಲುಕಡ್ಡಿಯ ಮೇದು ಮನೆಗೈದು ಅಮೃತವನ್ನು ನೀಡುವ ಗೋಸಂತತಿಯನ್ನು ನಾವು ಮಾತ್ರವಲ್ಲ, ನಮ್ಮ ಮುಂದಿನ ಪೀಳಿಗೆಯೂ ಉಳಿಸಿ ಬೆಳಸಿ ಸಂರಕ್ಷಿಸಿಕೊಂಡು ಹೋಗೋಣ. ತನ್ಮೂಲಕ ನಮ್ಮ ಪೂರ್ವಜ ಋಷಿಮುನಿಗಳಿಗೆ, ಆಚಾರ್ಯರಿಗೆ, ಜನನೀ ಜನಕರಿಗೆ ವಿಶೇಷವಾಗಿ ಗೋಮಾತೆಗೆ

ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ

'ಸ್ವಯಂಪ್ರಕಾಶ'ಕ್ಕೆ ಹತ್ತು ವತ್ಸರಗಳು

ಶ್ರೀ ಅನಂತ ಹೆಬ್ಬಾರ್, ಎನ್. ಹರಿಹರಪುರ

ಸಂಸ್ಕೃತ ತಜ್ಞರಾಗಿ ಹರಿಹರಪುರ ಶ್ರೀ ಅಭಿನವ ರಾಮಾನಂದ ಸರಸ್ವತೀ ಕಿರಿಯ ಕಾಲೇಜಿನ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಸಹೃದಯಿ ವಿದ್ವಾಂಸ ಶ್ರೀ ಅನಂತ ಹೆಬ್ಬಾರರ ಈ ಲೇಖನಕ್ಕಾಗಿ ಅಭಿನಂದನೆಗಳು.

– ಸಂಪಾದಕ

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಪುಟ್ಟ ಊರು ಹರಿಹರಪುರ. ಅದ್ವೈತ ಪೀಠಗಳಲ್ಲಿ ಒಂದಾಗಿದ್ದು ಆದಿಶಂಕರಾಚಾರ್ಯ ಶ್ರೀ ಶಾರದಾ ಲಕ್ಷ್ಮೀನೃಸಿಂಹ ಪೀಠ ಒಂದು ಪುರಾತನ ಧರ್ಮಪೀಠವಾಗಿದ್ದು, ಈ ಪೀಠದಲ್ಲಿ ಈಗ 25ನೆಯ ಆಚಾರ್ಯರಾಗಿ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರು ಪೀಠಾರೋಹಣ ಮಾಡಿ ಹತ್ತು ಸಂವತ್ಸರಗಳು ಕಳೆದಿವೆ. ಅದರೊಟ್ಟಿಗೆ 'ಸ್ವಯಂಪ್ರಕಾಶ' ಎಂಬ ಧಾರ್ಮಿಕ ಮಾಸಪತ್ರಿಕೆಯು ಶ್ರೀ ಶ್ರೀಗಳ ಕೃಪಾಶೀರ್ವಾದಗಳಿಂದ ನಿರ್ವಿಘ್ನವಾಗಿ ನಡೆದು ಬಂದು ಈಗ ದಶಮಾನದ ಹೊಸ್ತಿಲಲ್ಲಿ ನಿಂತಿದೆ.

ಈ ಪತ್ರಿಕೆಯ ವೈಶಿಷ್ಟ್ಯವೆಂದರೆ ಧಾರ್ಮಿಕ ವಿಚಾರಗಳನ್ನು ಸರಳವಾದ ಭಾಷೆಯಲ್ಲಿ ಓದುಗರ ಸಮೀಪಕ್ಕೆ ನಿಯಮಿತವಾಗಿ ತಲುಪಿಸುವುದಾಗಿದೆ. ಮಹಾಸಂರಕ್ಷಕರಾದ ಪರಮ ಪೂಜ್ಯ ಶೃಂಗೇರಿ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಜಗದ್ಗುರುವಾಣಿ, ಹರಿಹರಪುರ ಮಠಾಧೀಶರಾದ ಹಿಂದಿನ ಪರಮಗುರುಗಳಾದ ಅಭಿನವ ರಮಾನಂದ ಸರಸ್ವತೀ ಸ್ವಾಮೀಜಿಯವರ ಪರಮಗುರುವಾಣಿ, ಈಗಿನ ನಮ್ಮ ನೆಚ್ಚಿನ ಶ್ರೀ ಶ್ರೀಗಳಾದ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿಯವರ ಸದ್ಗುರುವಾಣಿ ಈ ಪತ್ರಿಕೆಗೆ ವಿಶೇಷ ಮೆರಗು ನೀಡುತ್ತಿದೆಯಲ್ಲದೆ ಆಶೀರ್ವಾದಪೂರ್ವಕ ಚಿಂತನೆಗಳು ಸಿಗುತ್ತಿವೆ. ಅದರಲ್ಲಿಯೂ ಹಿಂದಿನ ಪರಮಗುರುಗಳು ಸ್ವತಃ ಕವಿಗಳಾಗಿದ್ದು "ಅಭಿರಾಮ ಭಿಕ್ಷು" ಅಭಿದಾನದಿಂದ ಅವರ ಅನೇಕ ರಚನೆಗಳ ಪರಿಚಯ ನಮಗಾಗುತ್ತಿದೆ. ಹಾಸ್ಯ – ತತ್ತ್ವಗಳ ಸಮ್ಮಿಶ್ರಣದ ಅವರ ಶ್ಲೋಕಗಳು ಅರಿವಿನ ಚಾಟಿಯೇಟನ್ನು ಬೀಸುತ್ತಿವೆ.

ಮತ್ತೊಂದು ವಿಶೇಷವೆಂದರೆ ಈ ಪತ್ರಿಕೆಯ ಸೂತ್ರಧಾರರಾದ 95 ವರ್ಷದ ತರುಣ, ತರುಣರನ್ನೂ ನಾಚಿಸುವಂತೆ ಬೆಂಗಳೂರು – ಹರಿಹರಪುರಕ್ಕೆ ಆಗಾಗ್ಗೆ ಬಸ್ಸಿನಲ್ಲಿಯೇ ಓಡಾಡುತ್ತಾ ಪತ್ರಿಕೆಗೆ ಬೇಕಾಗುವ ಲೇಖನಗಳನ್ನು, ಲೇಖಕರನ್ನು ಸಂಗ್ರಹಿಸುತ್ತಾ ಕ್ಲುಪ್ತ ಸಮಯಕ್ಕೆ ಪತ್ರಿಕೆಯು ಬರುವ ಹಾಗೆ ಎಲ್ಲಾ ಕೆಲಸಗಳನ್ನು ಜೋಡಿಸುತ್ತಾ ಸುಂದರವಾದ ಚಿತ್ರಗಳನ್ನೊಳಗೊಂಡ ಪತ್ರಿಕೆ ಬರುವಂತೆ ನೋಡಿಕೊಳ್ಳುತ್ತಿದ್ದಾರೆ. ಇದರ ನಡುವೆ ಅವರ ಸಂಪಾದಕೀಯ ಲೇಖನಗಳೂ ಅಪೂರ್ವಶೈಲಿಯಲ್ಲಿ ಮೂಡಿ ಬರುತ್ತಿವೆ. ಆಯಾ ಕಾಲಕ್ಕೆ ತಕ್ಕಂತೆ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಚಾರಗಳೊಂದಿಗೆ ವಿಮರ್ಶಾತ್ಮಕ ಚಿಂತನೆಗಳೂ ಒಳಗೊಂಡಿರುತ್ತವೆ. ಆಯಾ ಮಾಸಕ್ಕೆ ತಕ್ಕಂತೆ ಅನೇಕ ಘಟನೆಗಳು, ಚರ್ಚೆಗಳು ಈ ಲೇಖನದಲ್ಲಿ ಬರುತ್ತವೆ. ಉದಾ: ಭಯೋತ್ಪಾದನೆ, ಸಂಸ್ಕೃತ ವಿಶ್ವವಿದ್ಯಾಲಯ, ಶಿಕ್ಷಣ, ಮೌಲಿಕ ವಿಷಯಗಳು ಇತ್ಯಾದಿ. ಅದೇ ರೀತಿ ಪೂಜ್ಯ ಸ್ವಾಮೀಜಿಯವರ ಸಾಮಾಜಿಕ ಜಾಗೃತಿಯ ಚಟುವಟಿಕೆಗಳಾದ ಶಿವದೀಕ್ಷಾ, ಗಾಯತ್ರೀ ಉಪಾಸಕ್ ಪರಿಷತ್, ಭಜನಾ ಬಳಗ ಇವುಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು , ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ಚಿಂತನೆಗಳೂ ನಡೆಯುತ್ತಿವೆ. ವೇದಗಳ ಸಾಮಾನ್ಯ ಪರಿಚಯ, ಉಪನಿಷತ್‌ಗಳ ಪರಿಚಯ, ಶಾಸ್ತ್ರಗಳ ಪರಿಚಯ ಈ ಪತ್ರಿಕೆಯಿಂದ ಸಮಾಜಕ್ಕೆ ಆಗುತ್ತಿದೆ. ದಶ ಸಂವತ್ಸರಗಳನ್ನು ಕಾಣುತ್ತಿರುವ ಈ ಪತ್ರಿಕೆಯು ಇನ್ನು ಮುಂದೆಯೂ ಶ್ರೀ ಶ್ರೀಗಳ ಆಶೀರ್ವಾದಗಳಿಂದ ಹಿರಿಯರ ಸಹಕಾರದಿಂದ ಉತ್ತಮ ಪತ್ರಿಕೆಯಾಗಿ ಇಡೀ ರಾಜ್ಯಕ್ಕೆ ಆಧ್ಯಾತ್ಮ ಪತ್ರಿಕೆಗಳ ಸಾಲಿನಲ್ಲಿ ಮುಂದೆ ನಿಲ್ಲುವುದರಲ್ಲಿ ಸಂಶಯವಿಲ್ಲ. ಈ ಪತ್ರಿಕೆಯೊಂದಿಗೆ ಬ್ಲೆಸ್ಸಿಂಗ್ಸ್ ಎಂಬ ಆಂಗ್ಲ ಪತ್ರಿಕೆಯೂ ದೇಶ ವಿದೇಶದಾದ್ಯಂತ ಗ್ರಾಹಕರನ್ನು ಹೊಂದಿದೆ ಎಂಬುದು ವಿಶೇಷ.

ಬೆಳಗಿ ಬೆಳಗಿಸುವ ಸಂಸ್ಕೃತಿ

ಶ್ರೀಮತಿ ಶ್ರುತಿ ಅಚ್ಯುತ

ಶ್ರೀಮತಿ ಸೌ. ಶ್ರುತಿ, ಹರಿಹರಪುರದಂತ ಸಣ್ಣ ಊರಿನ ಈ ಯುವತಿ ಸಂಸ್ಕೃತ ಅಧ್ಯಯನದಲ್ಲಿ ಆಸಕ್ತಿ ತಾಳಿ, ಬೆಂಗಳೂರು ಚನ್ನೇನಹಳ್ಳಿಯ ಗುರುಕುಲದಲ್ಲಿ ಅಧ್ಯಯನ ಮಾಡಿ ತಿರುಪತಿಯ ಕೇಂದ್ರೀಯ ಸಂಸ್ಕೃತ ಪ್ರತಿಷ್ಠಾನದಲ್ಲಿ ವೇದಾಂತ ಶಾಸ್ತ್ರದಲ್ಲಿ 'ವಿದುಷಿ' ಪದವಿ ಸಂಪಾದಿಸಿದ ಸಾಹಸೀ ಮಹಳೆ. ವಿಚಾರಪೂರ್ಣವಾದ ಈ ಲೇಖನಕ್ಕಾಗಿ ಹಾರ್ದಿಕ ಶುಭಕಾಮನೆಗಳು.

– ಸಂಪಾದಕ

एतद्देशप्रसूतस्य सकाशात् अग्रजन्मनः ।
स्वं स्वं चरित्रं शिक्षेरन् पृथिव्यां सर्वमानवाः ।।

ಒಂದೊಮ್ಮೆ ಜಗದ್ಗುರುವಾಗಿ ವಂದ್ಯವಾದ, ಉದಾತ್ತ ಸಂಸ್ಕೃತಿ, ಸಂಸ್ಕಾರಗಳಿಂದ ಬೆಳಗಿದ, ಅಧ್ಯಾತ್ಮವೇ ಅಂತಸ್ಸತ್ತ್ವವಾಗಿದ್ದ ಸನಾತನ ಧರ್ಮವೇ ಭದ್ರ ಬುನಾದಿಯಾಗಿದ್ದ ಭವ್ಯ ಭಾರತದಲ್ಲಿ ಏನಾಗಿದೆ?!

'ಭಾ' ಎಂದರೆ ಪ್ರಕಾಶ, ಜ್ಞಾನ. **'ರತ'** ಎಂದರೆ ಜ್ಞಾನದಲ್ಲಿ (ನಿ)ರತವಾಗಿರುವುದು. ಭಾರತೀಯರು ಎಂದರೆ ಜ್ಞಾನದಲ್ಲಿ ಸದಾ ನಿರತರಾಗಿರುವವರು. 'ಜ್ಞಾನ'ವೆಂದರೆ ಕೇವಲ ಪ್ರಾಪಂಚಿಕ ಜ್ಞಾನವಲ್ಲ, ಅದು ಪಾರಮಾರ್ಥಿಕ ಜ್ಞಾನ. ಪರಮಾರ್ಥವನ್ನು ತಿಳಿಯಲು ಪ್ರಪಂಚವನ್ನು ತಿಳಿಯಬೇಕಿಲ್ಲ, ತನ್ನನ್ನು ತಾನು ತಿಳಿಯಬೇಕು. ತನ್ನ ಜ್ಞಾನ ಸಾಧನಗಳನ್ನು ಅಂತರ್ಮುಖಿಯಾಗಿಸಬೇಕು. ಪರಿಪೂರ್ಣವಾಗಿ ತನ್ನನ್ನು ತಾನು ಅರಿತಲ್ಲಿ ಜಗತ್ತನ್ನೇ ಅರಿತಂತೆ. ಇಂತಹ ದುರ್ಗಮ್ಯ ಜ್ಞಾನವನ್ನು ಎಲ್ಲೆಡೆ ಬಿತ್ತರಿಸಿದವರ ನಾಡಿನಲ್ಲಿ ಜಾತಿ, ಮತ, ಪಂಥಗಳ ಕಲಹ, ಕೋಲಾಹಲ. ತನ್ನರಿವು ಜಗದರಿವು ಎಂದು ಮೊಳಗಿದ ನಾಡಲ್ಲಿ ಸಣ್ಣತನಗಳ ಹಾಹಾಕಾರ.

ಗಂಡ ಹೆಂಡತಿಯರ ಜಗಳದಲ್ಲಿ ಕೂಸು ಬಡವಾದಂತೆ, ಎಲ್ಲ ರೀತಿಯ ವರ್ಗ ಕಲಹಗಳಲ್ಲಿ ಬಡವಾಗಿದ್ದು ಸಂಸ್ಕೃತಿ. 'ಶೋಧನೆ'ಯೇ ನಮ್ಮ ಸಂಸ್ಕೃತಿಯ ಜೀವಾಳ. ಎಲ್ಲ ಆಚಾರ, ಕರ್ಮಗಳಲ್ಲೂ ಹೇಳಿರುವುದು ಶೋಧನೆಯನ್ನೇ. ಶೋಧನೆಯೆಂದರೆ ಹುಡುಕಾಟಿಕೆಯಲ್ಲ, ಪರಿಷ್ಕರಣೆ ಅಥವಾ ಶುದ್ಧೀಕರಣ. ಸಂಸ್ಕೃತಿ, ಸಂಸ್ಕಾರ, ಸಂಸ್ಕೃತ ಈ ಎಲ್ಲ ಶಬ್ದಗಳೂ ಸಂಸ್ಕರಣವನ್ನೇ ಸೂಚಿಸುತ್ತವೆ. ಉದಾಹರಣೆಗೆ ಷೋಡಶ ಸಂಸ್ಕಾರಗಳು ವ್ಯಕ್ತಿಯ ಹುಟ್ಟಿನಿಂದ ಅಂತ್ಯದವರೆಗೆ ಶರೀರದೊಂದಿಗೆ ಅಂತರಂಗದ ಶೋಧನೆಯನ್ನು ಮಾಡುತ್ತವೆ. ಬದುಕಿನ ಪ್ರಾರಂಭದಿಂದ ಕೊನೆಯವರೆಗೆ, ಬೆಳಗಿನಿಂದ ರಾತ್ರಿಯವರೆಗೆ ಪ್ರತಿಯೊಂದು ಹೆಜ್ಜೆಯೂ ಅರಿವಿನೆಡೆಗೆ ಎಚ್ಚರಿಕೆಯಿಂದ ಹಾಕುವಂತೆ ಮಾಡುವುದು ನಮ್ಮ ಧರ್ಮದ ಹೆಗ್ಗಳಿಕೆ. ಇದನ್ನು ಕಟ್ಟುಪಾಡೆಂಬಂತೆ ನೋಡುವುದು, ವಿಮರ್ಶಿಸುವುದು, ಅದನ್ನು ಪಾಲಿಸುವವರನ್ನು ಮತಾಂಧರೆಂಬಂತೆ ಬಿಂಬಿಸುವುದು ಸೀಮಿತ ದೃಷ್ಟಿಕೋನವೇ ಹೊರತು, ಆಳ ವೈಚಾರಿಕ ದೃಷ್ಟಿಯಲ್ಲ.

ಧರ್ಮ, ಅರ್ಥ, ಕಾಮ, ಮೋಕ್ಷಗಳು ಪುರುಷಾರ್ಥಗಳು. ಧರ್ಮಮಾರ್ಗದಿಂದ ಅರ್ಥ, ಕಾಮದ ಪ್ರಾಪ್ತಿ ಒಂದು ಜೀವನ ಗತಿಯಾದರೆ, ಮತ್ತೊಂದು ಪರಮಗತಿ. ಈ ಭವ ಬಂಧನದಿಂದ ಪಾರಾಗುವ ಅಖಂಡ ಆನಂದದ ಮುಕ್ತತೆ, ಧರ್ಮವೆನ್ನುವುದು

ಒಂದು ವರ್ಗವನ್ನು ಸೂಚಿಸುವ ಪದವಲ್ಲ. ಮಾನವನು ಅತ್ಯುನ್ನತವಾಗಿ ಬೆಳೆಯಲು ತನ್ನ ಅಜ್ಞಾನವನ್ನು ತೊಳೆಯಲು ತನ್ನನ್ನೂ, ತನ್ನ ಸಮಾಜವನ್ನು ಉರ್ಧ್ವಮುಖಿಯಾಗಿಸುವ ಒಂದು ಪರಿಧಿ. ಆ ಪರಿಧಿ ಬಂಧನವಲ್ಲ, ಮುಕ್ತರಾಗಲು ಬೇಕಾದ ಸಾಧನ ಸಂಪತ್ತನ್ನು ಒದಗಿಸುವಂಥದ್ದು. ಭೌತಿಕ ಶ್ರೇಯಸ್ಸನ್ನು ಹೊಂದಲು ಇದು ಹೊರತಲ್ಲ.

ಬದುಕು ಸುಂದರವಾಗಿರಬೇಕು, ಸುಖಮಯವಾಗಿರಬೇಕು. ಆದರೆ ತಾನೊಬ್ಬನೇ ಬದುಕಬೇಕೆನ್ನುವುದು ಸ್ವಾರ್ಥ, ತನ್ನಂತೆ ಎಲ್ಲರೂ ಎಂಬುದು ಸೌಹಾರ್ಧ. ತಾನು ಬೆಳೆಯಬೇಕೆನ್ನುವುದು ತನ್ನರಿವಿನೆಡೆಗೆ ಸಾಧನೆ, ಇದು ಜೀವನದ ಮುಖ್ಯಗತಿ, ತನ್ನ ಉದ್ಧಾರದೊಂದಿಗೆ ಪರೋದ್ಧಾರವೆಂಬುದು ನಮ್ಮ ಭವ್ಯ ಸಂಸ್ಕೃತಿ.

ಜ್ಞಾನಿಗಳು ಪ್ರಾರ್ಥನೆಯಲ್ಲಿ ''सर्वे भवन्तु सुखिनः धियो यो नः प्रचोदयात्, देशोऽय क्षेमरहितः'' ಇತ್ಯಾದಿಯಾಗಿ ಜೀವಜಂತುಗಳಾದಿಯಾಗಿ ಸಮಸ್ತರ ಕ್ಷೇಮವನ್ನು ಅವರ ಉದ್ಧಾರವನ್ನೂ ಬಯಸಿದ್ದಾರೆ. ಇಲ್ಲಿ ವ್ಯಕ್ತಿಗತ ಜೀವನಕ್ಕೆ ಬೇಕಾದ ಕರ್ಮಾಚರಣೆಗಳಿದ್ದರೂ, ವ್ಯಕ್ತಿಯ ಸಮಾಜಮುಖಿ ಜೀವನದ ಬಗ್ಗೆಯೇ ಹೆಚ್ಚು ಪ್ರಾಧಾನ್ಯತೆ ನೀಡಲಾಗಿದೆ. ಇಂತಹದ್ದರಲ್ಲಿ ಸಂಕುಚಿತ, ಸ್ವಕೇಂದ್ರಿತ, ಸೀಮಿತ ಬದುಕನ್ನು ಸ್ವಾರ್ಥದಿಂದ ವ್ಯಕ್ತಿ ಹಚ್ಚಿಕೊಳ್ಳುವಾಗ, ತನ್ನ ದೇಶದ ಉದಾತ್ತ ಮಹಿಮೆಯನ್ನು ಗಮನಿಸಬೇಕಲ್ಲವೇ?

ಜ್ಞಾನಿಗಳು ಅಂದು ನಾಲ್ಕು ವಿಧ ವರ್ಣಗಳನ್ನು, ಅದಕ್ಕೆ ನಾಲ್ಕು ವಿಧ ಆಶ್ರಮಗಳನ್ನು ಸಮಾಜದ ಸ್ವಾಸ್ಥ್ಯಕ್ಕಾಗಿ ಧಾರ್ಮಿಕವಾಗಿ ವಿಂಗಡಿಸಿ, ಸಂತುಲಿತ ಜೀವನವನ್ನು, ಆದರ್ಶವನ್ನು ಈ ಮೂಲಕ ಕಾಯ್ದಿರಿಸಿದ್ದರೆ, ಇಂದು ಜಾತಿಗಳಾಗಿ, ಉಪಜಾತಿಗಳಾಗಿ, ಮತಗಳಾಗಿ, ಕೋಮುಗಳಾಗಿ ಅವರ್ಣನೀಯ ವೈಷಮ್ಯವನ್ನು ಸೃಷ್ಟಿಸಿದೆ. ಜಾತ್ಯಾತೀತ ರಾಷ್ಟ್ರವೆಂಬುದು ವ್ಯಂಗ್ಯ ಮಾತ್ರ. ಅದರ ಹೆಸರಿನಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಫಲಾನುಭವಿಗಳಾದ ಎಲ್ಲರಿಗೂ ಮತ್ತೊಮ್ಮೆ ತಿಳಿಸುವ ಅಗತ್ಯವಿಲ್ಲ.

ಅಹಿಂಸೆ, ಸತ್ಯ, ಅಸ್ತೇಯ, ಸದಾಚಾರಗಳೆಂಬ ಭದ್ರ ಬುನಾದಿಯಿರುವ ದೇಶದಲ್ಲಿ ಕ್ರೌರ್ಯ, ಕೋಮುವಾದ, ಭ್ರಷ್ಟಾಚಾರಗಳು ತಾಂಡವಾಡುವುದು ವಿಪರ್ಯಾಸ. ಯುದ್ಧ, ಗಲಭೆ, ಹೋರಾಟಗಳು ತಾತ್ಕಾಲಿಕ ಪರಿಣಾಮದಿಂದ ಯಶಸ್ಸನ್ನು ದೊರಕಿಸಿಕೊಡುವುದು ನಿಜವಾದರೂ, ಶಾಶ್ವತ ಪರಿಣಾಮ ದೊರೆಯುವುದು ಶಾಂತಿ ಮತ್ತು ಅಹಿಂಸೆಯಿಂದಲೇ. ಹೋರಾಟದಿಂದ ಒಬ್ಬನನ್ನು ಗೆಲ್ಲುವುದಕ್ಕಿಂತ ಪ್ರೀತಿಯಿಂದ ಗೆಲ್ಲುವುದು ಶ್ರೇಷ್ಠ ಮತ್ತು ಪರಿಣಾಮಕಾರಿ.

ಎಣೆಯಿಲ್ಲದ ಸಂಪ್ರದಾಯಗಳು, ಹಲವು ದೈವತಗಳು, ಹಲವು ಉಪಾಸನೆಗಳು, ಭಾಷೆ, ವೇಷ, ಭೌತಿಕ ಸಂಸ್ಕೃತಿ, ಸಂಪ್ರದಾಯಗಳು ಹಲವು ಬಗೆಯಾದರೂ ಅವುಗಳ ಉದ್ದೇಶ, ನಿಷ್ಠೆ ಒಂದೇ. ಎಲ್ಲವನ್ನೂ ತನ್ನದಾಗಿಸಿಕೊಳ್ಳುವ, ತನ್ನದೆಲ್ಲವನ್ನೂ ಎಲ್ಲರಿಗಾಗಿ ವಿನಿಯೋಗಿಸುವ ವಿಶಾಲ ಸಂಸ್ಕೃತಿ, ಗಾಳಿ, ಬೆಳಕು, ನೀರು, ನೆಲ ಇತ್ಯಾದಿಯಾಗಿ ಕಣ ಕಣದಲ್ಲೂ ಮಾತೃತ್ವವನ್ನು, ಶಕ್ತಿಯನ್ನು ಕಾಣುವ, ಉಪಾಸಿಸುವ ಪವಿತ್ರ ಸಂಸ್ಕೃತಿ.

